ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 14 | ಸಂಚಿಕೆ 19 | ಮೇ 4–10, 2020 | ಪುಟ 16 | ರೂ. 10

ಕೋವಿಡ್ ಮಹಾಮಾರಿಯ ನಡುವೆ

ಮನೆ ಮನೆಗಳಲ್ಲಿ ಮೇ ದಿನಾಚರಣೆ










ಪ್ರಧಾನ ಮಂತ್ರಿಗಳಿಗೆ ಇನ್ನೊಂದು ಪತ್ರ








ಚೀನಾ ಬಲಿಪಶು ಮಾಡುವ ಟ್ರಂಪ್ ಆಟ

ದೊಡ್ಡಣ್ಣನ ದೊಡ್ಡ ಸೋಲು

ಕೋವಿಡ್-19 ಹೆಚ್ಚಿಸಿದ ಗ್ರಾಮೀಣ ಯಾತನೆ

ಐ.ಆರ್.ಎಸ್ ಅಧಿಕಾರಿಗಳ ಮೇಲಿನ ಶಿಸ್ತುಕ್ರಮಗಳನ್ನು ವಜಾ ಮಾಡಬೇಕು –ಸಿಪಿಐ(ಎಂ) ಪೊಲಿಟ್ ಬ್ಯುರೊ ಆಗ್ರಹ

‘ಕಡು’ ಶ್ರೀಮಂತರಿಗೆ ಕೊವಿಡ್ ತೆರಿಗೆಯ ಸೂಚನೆಗೆ ಸರಕಾರದ ಸಿಟ್ಟು– ಶ್ರೀಮಂತ–ಪರ ನಿಲುವಿನ ಭಂಡ ಪ್ರದರ್ಶನ

ಮೋದಿ ಸರಕಾರ ಇಂಡಿಯನ್ ರೆವಿನ್ಯೂ ಸರ್ವಿಸ್(ಐ.ಆರ್.ಎಸ್.)ನ ಅಧಿಕಾರಿಗಳ ಗುಂಪೊಂದರ ವಿರುದ್ಧ ಅವರು ತೆರಿಗೆ ಆದಾಯಗಳನ್ನು ಹೆಚ್ಚಿಸುವ ಕುರಿತ ಒಂದು ಪ್ರಸ್ತಾವವನ್ನು ಅಧಿಕೃತ ಅನುಮತಿಯಿಲ್ಲದೆ ಪ್ರಕಟಿಸಿದ್ದಾರೆಂದು ಹೇಳಿ ಶಿಸ್ತು ಕ್ರಮಗಳನ್ನು ಆರಂಭಿಸಿರುವುದಾಗಿ ವರದಿಯಾಗಿದೆ. ಇದನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ.

ಕೊವಿಡ್ ಪರಿಣಾಮಗಳ ನಡುವೆ ಅರ್ಥವ್ಯವಸ್ಥೆಯನ್ನು ಮತ್ತೆ ಕಟ್ಟಲು ಒಂದು ಹಣಕಾಸು ಮಾರ್ಗನಕಾಶೆ ತಯಾರಿಸುವಲ್ಲಿ ನೆರವಾಗುವ ಸಲಹೆ–ಸೂಚನೆಗಳನ್ನು ಕೊಡಬೇಕೆಂಬ ಸರಕಾರದ ಕೇಳಿಕೆಗೆ ಸ್ಪಂದಿಸಿ ಈ ಪ್ರಸ್ತಾವಗಳನ್ನು ಐ.ಆರ್.ಎಸ್. ಅಧಿಕಾರಿಗಳ ಈ ಗುಂಪು ಫೋರ್ಸ್(ಫಿಸ್ಕಲ್ ಆಪ್ಶನ್ಸ್ ಅಂಡ್ ರೆಸ್ಪಾನ್ಸಸ್ ಟು ಕೊವಿಡ್–19 ಎಪಿಡೆಮಿಕ್–ಕೊವಿಡ್–19 ಸಾಂಕ್ರಾಮಿಕಕ್ಕೆ ವಿತ್ತೀಯ ಆಯ್ಕೆಗಳು ಮತ್ತು ಸ್ಪಂದನೆಗಳು) ಎಂಬ ಪ್ರಬಂಧವನ್ನು ತಯಾರಿಸಿದ್ದು, ಸೂಪರ್ ಶ್ರೀಮಂತರ ಆದಾಯ ತೆರಿಗೆಯ ದರಗಳನ್ನು 40%ಕ್ಕೆ ಹೆಚ್ಚಿಸಬೇಕು, ಮತ್ತು 4% ದರದಲ್ಲಿ ಕೊವಿಡ್ ಸೆಸ್ ಹಾಕಬೇಕು ಎಂಬುದು ಅದರಲ್ಲಿ ನೀಡಿರುವ ಎರಡು ಸೂಚನೆಗಳು ಎನ್ನಲಾಗಿದೆ.

ಈ ಪ್ರಬಂಧ ಸರಕಾರವನ್ನು ಸಿಟ್ಟಿಗೆಬ್ಬಿಸಿರುವುದು ಸ್ವಯಂವೇದ್ಯ. ಆದ್ದರಿಂದಲೇ ಅದು ಇಷ್ಟು ದುಷ್ಟತನದಿಮದ ವರ್ತಿಸುತ್ತಿದೆ. ಇದು ಶ್ರೀಮಂತರನ್ನು ರಕ್ಷಿಸುವ ಅದರ ನಾಚಿಕೆಗೆಟ್ಟ ಆಶಯವನ್ನು ಬಯಲು ಮಾಡುತ್ತದೆ ಎಂದು ಪೊಲಿಟ್ ಬ್ಯುರೊ ಹೇಳಿದೆ. ಈ ಪ್ರಸ್ತಾವಗಳು ‘ಮಾರುಕಟ್ಟೆ’ಯಲ್ಲಿ ಅನಿಶ್ಚಿತತೆಗಳನ್ನು ಸ್ಫುರಿಸುತ್ತವೆ ಎಂದು ಸರಕಾರ ಔಪಚಾರಿಕವಾಗಿಯೇ ಹೇಳಿದೆ. ಈ ಮೂಲಕ ಈ ಆಳುವ ಕೂಟಕ್ಕೆ ಸೂಪರ್ ಶ್ರೀಮಂತರು ‘ಪವಿತ್ರ ಗೋವು ಗಳು’ ಎಂದು ಸ್ಪಷ್ಟವಾಗಿ ಕಾಣುತ್ತದೆ.

ಈ ಸರಕಾರ ತನ್ನ ನೌಕರರು ಮತ್ತು ಪಿಂಚಣಿದಾರರಿಗೆ ತುಟ್ಟಿ ಭತ್ಯೆಯನ್ನು ಹಿಂದಿನ ದಿನಾಂಕದಿಂದಲೇ ಮತ್ತು ಮುಂದೆಯೂ ಅನ್ವಯವಾಗುವಂತೆ ಸ್ಥಂಭನಗೊಳಿಸಿರುವುದು ಈ ಸರಕಾರದ ಶ್ರೀಮಂತ–ಪರ, ಬಡವರ–ವಿರೋಧಿ ಮತ್ತು ದುಡಿಯುವ ಜನ–ವಿರೋಧಿ ನಿಲುವನ್ನು ಎತ್ತಿ ತೋರಿಸುತ್ತದೆ. ಇದೊಂದು ಭಾರೀ ಮೊತ್ತವಾಗುತ್ತದೆ ಎಂದು ಲೆಕ್ಕ ಹಾಕಲಾಗಿದೆ. ಉದ್ದೇಶಪೂರ್ವಕವಾಗಿಯೇ ಸುಸ್ತಿದಾರರಾಗಿರುವವರು ಮತ್ತು ತಲೆಮರೆಸಿಕೊಂಡಿರುವವರ ಸಾಲಗಳ ರೈಟ್ ಆಫ್ ಬಗ್ಗೆ ಸಂಸತ್ತಿನಲ್ಲಿ ಕೇಳಿದಾಗ ಮೌನಧರಿಸಿ ತಪ್ಪಿಸಿಕೊಳ್ಳುವ ಸರಕಾರದ ಪ್ರಯತ್ನ ಈಗ ಆರ್.ಟಿ.ಐ. ಉತ್ತರಗಳಿಂದಾಗಿ ವ್ಯರ್ಥವಾಗಿದೆ. ಈ ಉತ್ತರಗಳಿಂದ ದೇಶಗಳು ಮತ್ತು ಜನಗಳನ್ನು ಲೂಟಿ ಹೊಡೆಯುವ ಸರಕಾರ–ಕಾರ್ಪೊರೇಟ್ ಶಾಮೀಲು ಬಯಲಿಗೆ ಬಂದಿದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಹೇಳಿದೆ.

ಐ.ಆರ್.ಎಸ್. ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮಗಳನ್ನು ವಜಾ ಮಾಡಬೇಕು ಎಂದು ಆಗ್ರಹಿಸಿರುವ ಸಿಪಿಐ(ಎಂ) ಪೊಲಿಟ್ ಬ್ಯುರೊ, ಅರ್ಥವ್ಯವಸ್ಥೆಯ ಪುನರುಜ್ಜೀವನದ ಬಗ್ಗೆ ಒಂದು ಮುಕ್ತ ಮತ್ತು ಪಾರದರ್ಶಕ ಸಂವಾದವನ್ನು ಆರಂಭಿಸಲು ಕ್ರಮಗಳನ್ನು ಕೈಗೊಳ್ಳಬೇಕು ಎಂದಿದೆ. ಅತಿ ಶ್ರೀಮಂತರಿಗೆ ಲೂಟಿ ಮಾಡಲು ಮತ್ತು ಸಂಪತ್ತು ರಾಶಿ ಹಾಕಲು ಬಿಟ್ಟು, ಕೊವಿಡ್ ಪರಿಣಾಮಗಳ ಹೊರೆಯನ್ನು ಬಡವರು ಮತ್ತು ದುಡಿಯುವ ಜನಗಳ ಹೆಗಲ ಮೇಲೆ ಏಕಪಕ್ಷೀಯವಾಗಿ ದಾಟಿಸುವ ಸರಕಾರದ ನಡೆಗಳನ್ನು ತಾನು ಖಂಡಿತವಾಗಿಯೂ ಪ್ರತಿರೋಧಿಸುವ ತನ್ನ ದೃಢ ನಿರ್ಧಾರವನ್ನೂ ಸಿಪಿಐ(ಎಂ) ಪೊಲಿಟ್ ಬ್ಯುರೊ ವ್ಯಕ್ತಗೊಳಿಸಿದೆ.

ಐಆರ್ ಎಸ್ ಅಧಿಕಾರಿಗಳ ಸೂಚನೆಗಳನ್ನು ಪರಿಶೀಲಿಸಿ, ಶಿಸ್ತಕ್ರಮಗಳನ್ನು ಹಿಂತೆಗೆದುಕೊಳ್ಳಿ– ಸಿಐಟಿಯು ಆಗ್ರಹ

ದೇಶದ ಪ್ರಮುಖ ಕೇಂದ್ರೀಯ ಕಾರ್ಮಿಕ ಸಂಘಟನೆ ಸಿಐಟಿಯು ಕೂಡ ಕೇಂದ್ರ ಸರಕಾರದ ಈ ಕ್ರಮವನ್ನು ಖಂಡಿಸಿದೆ. ರಾಷ್ಟ್ರೀಯ ಅರ್ಥವ್ಯವಸ್ಥೆಯ ಆದ್ಯತೆಗಳನ್ನು ನಿಭಾಯಿಸಲು ಸಂಪನ್ಮೂಲ ಸಂಗ್ರಹಣೆಗಾಗಿ ಬಡವರ ಸಬ್ಸಿಡಿಗಳ ಕಡಿತ, ಕಲ್ಯಾಣ ವೆಚ್ಚಗಳ ಕಡಿತ, ಆವಶ್ಯಕ ಸರಕುಗಳ ಮೇಲೆ ವಿಪರೀತ ಪರೋಕ್ಷ ತೆರಿಗೆ ಮುಂತಾದ ಕ್ರಮಗಳನ್ನು ಕೈಗೊಳ್ಳುವ ಬದಲು ಸೂಪರ್ ಶ್ರೀಮಂತರ ಮೇಲೆ ತೆರಿಗೆಗಳನ್ನು ಹಾಕುವ ಮಾರ್ಗವನ್ನು ಅನುಸರಿಸಬೇಕು ಎಂದು ಸಿಐಟಿಯು ಕೂಡ ಪ್ರತಿಪಾದಿಸುತ್ತ ಬಂದಿದೆ. ಆದ್ದರಿಂದ ಸರಕಾರ ಈಗ ಐಆರ್‌ಎಸ್ ನ ಅಧಿಕಾರಿಗಳ ವೃತ್ತಿಪರ ಸೂಚನೆಗಳನ್ನು ಗಂಭೀರವಾಗಿ ಪರಿಶೀಲಿಸಬೇಕು ಎಂದು ಆಗ್ರಹಿಸಿದೆ.

ಈ ಸಲಹೆಗಳು ವಿಚಾರಯೋಗ್ಯ ಎಂಬ ಕಾರಣವಷ್ಟೇ ಅಲ್ಲ, ಮೂವರು ಅಧಿಕಾರಿಗಳ ಮೇಲೆ ಚಾರ್ಜ್‌ಶೀಟ್ ಮತ್ತು 50 ಇತರರ ಮೇಲೆ ತನಿಖೆ ಅತ್ಯಂತ ಅನ್ಯಾಯಪೂರ್ಣ ಮತ್ತು ದಬ್ಬಾಳಿಕೆಯಾಗುತ್ತದೆ ಎಂದು ಸಿಐಟಿಯು ಹೇಳಿದೆ. ಐಆರ್‌ಎಸ್ ಅಸೋಸಿಯೇಷನ್ ಬಹಳ ವರ್ಷಗಳಿಂದ ಅಸ್ತಿತ್ವದಲ್ಲಿದೆ, ಸರಕಾರವೂ ಅದರೊಂದಿಗೆ ಹಲವು ವಷಯಗಳ ಬಗ್ಗೆ ಸಮಾಲೋಚನೆ ನಡೆಸಿಕೊಂಡು ಬಂದಿದೆ.

ಆದ್ದರಿಂದ ತಮ್ಮ ಸಾಮೂಹಿಕ ಅಭಿಪ್ರಾಯಗಳನ್ನು ಮುಂದಿಡುವ ಹಕ್ಕು ಈ ಸಂಘಟನೆಗಿದೆ. ಅದಕ್ಕಾಗಿ ಶಿಸ್ತುಕ್ರಮಗಳನ್ನು ಕೈಗೊಳ್ಳುವುದು ಪ್ರಜಾಪ್ರಭುತ್ವ–ವಿರೋಧಿ ನಡೆ, ಸಂಘದ ಹಕ್ಕುಗಳ ಉಲ್ಲಂಘನೆಯಾಗುತ್ತದೆ, ಆದ್ದರಿಂದ ಈ ಶಿಸ್ತುಕ್ರಮಗಳನ್ನು ಕೂಡಲೇ ಹಿಂತೆಗೆದುಕೊಳ್ಳಬೇಕು, ಅಧಿಕಾರಿಗಳ ಅಭಿಪ್ರಾಯಗಳನ್ನು ಪರಿಶೀಲಿಸಬೇಕು ಎಂದು ಸಿಐಟಿಯು ಕೇಂದ್ರ ಸರಕಾರವನ್ನು ಆಗ್ರಹಿಸಿದೆ.

ಕೇಂದ್ರ ಸರಕಾರ ವೈದ್ಯಕೀಯ ವಿಜ್ಞಾನಿಗಳ ಶಿಫಾರಸುಗಳ ಮೇಲೆ ಕಾರ್ಯಾಚರಣೆ ಆರಂಭಿಸಬೇಕು–ಸಿಪಿಐ(ಎಂ) ಪೊಲಿಟ್ ಬ್ಯುರೊ

ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ಐಸಿಎಂಆರ್)ಯ ಅಡಿಯಲ್ಲಿರುವ ಉನ್ನತ ಮಟ್ಟದ ಕಾರ್ಯಪಡೆಯ ಸದಸ್ಯರೂ ಸೇರಿದಂತೆ ನಮ್ಮ ವಿಜ್ಞಾನಿ ಸಮುದಾಯದಲ್ಲಿ ಕೊವಿಡ್ ವಿರುದ್ಧ ಕಾರ್ಯಾಚರಣೆ ಕುರಿತಂತೆ ಕಳವಳ ಹೆಚ್ಚುತ್ತಿದೆ ಎಂದು ಮಾಧ್ಯಮಗಳಲ್ಲಿ ವರದಿಗಳು ಬರುತ್ತಿವೆ.

ಆಂತರಿಕ ಚರ್ಚೆಗಳು ಮತ್ತು ಇವನ್ನು ಕುರಿತ ಸಾರ್ವಜನಿಕವಾಗಿ ಈಗ ಲಭ್ಯವಿರುವ ಕಲಾಪ ಟಿಪ್ಪಣಿಗಳು ಲಾಕ್ ಡೌನಿನಿಂದ ವೈರಸ್‌ನ ಹರಡಿಕೆ ನಿಲ್ಲುವುದಿಲ್ಲ, ಅದು ತಾತ್ಕಾಲಿಕವಾಗಿ ವೈರಸ್‌ನ ಹರಡಿಕೆಯನ್ನು ದಮನಗೊಳಿಸಬಹುದಷ್ಟೇ ಎಂದು ಸ್ಪಷ್ಟವಾಗಿ ಬೊಟ್ಟು ಮಾಡಿ ಹೇಳುತ್ತಿವೆ. ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳದಿದ್ದರೆ ಈ ಮಹಾಮಾರಿಯನ್ನು ನಿಭಾಯಿಸುವುದು ನಮಗೆ ಸಾಧ್ಯವಾಗದು. ಮುಂಚೂಣಿಯಲ್ಲಿರುವ ಆರೋಗ್ಯ ಕಾರ್ಯಕರ್ತರಿಗೆ ಸರಿಯಾದ ರಕ್ಷಣೆ ಇನ್ನೊಂದು ತುರ್ತು ಆವಶ್ಯಕತೆ.

ದೈಹಿಕ ಅಂತರಕ್ಕೆ ಸರಿಯಾದ ಸೌಕರ್ಯಗಳಿಲ್ಲದಲ್ಲಿ ಜನನಿಬಿಡ ವ್ಯಸ್ತ, ಮತ್ತು ಪ್ರತ್ಯೇಕ ಶೌಚಾಲಯಗಳಿಲ್ಲದ ವಾಸಪ್ರದೇಶಗಳಲ್ಲಿ ಹರಡಿಕೆ ಹೆಚ್ಚುವ ಪಾಯವಿದೆ ಎಂದು ವಿಜ್ಞಾನಿಗಳು ಗುರುತಿಸಿರುವುದಾಗಿ ವರದಿಗಳಿವೆ. ಇಂತಹ ಸ್ಥಳಗಲ್ಲಿ ಹೊರಗೆ ಹೋಗುವ ಆವಶ್ಯಕತೆ ಇಲ್ಲದಂತೆ ಮಾಡಲು ಸಾಕಷ್ಟು ಆಹಾರ ರೇಷನ್‌ಗಳನ್ನು ಖಾತ್ರಿಪಡಿಸಬೇಕು.

ಮಹಾಮಾರಿಯ ವಿರುದ್ಧ ಹೋರಾಟದಲ್ಲಿ ತಪಾಸಣೆ, ಸೋಂಕಿತರು ಮತ್ತು ಅವರ ಸಂಪರ್ಕಕ್ಕೆ ಬಂದವರ ಪತ್ತೆ, ಸರಿಯಾದ ಕ್ವಾರಂಟೈನ್, ಪ್ರತ್ಯೇಕವಾಗಿಡುವುದು ಮತ್ತು ಶುಶ್ರೂಷೆ ಈ ಸಾಬೀತಾಗಿರುವ ಕ್ರಮಗಳನ್ನು ಕೈಗೊಳ್ಳದೆ, ಅಯೋಜಿತ ಲಾಕ್‌ಡೌನ್ ಹೆಚ್ಚೆಂದರೆ ಸಂಪತ್ತುಳ್ಳವರು ಮತ್ತು ಪ್ರಭಾವಿಗಳಿಗೆ ರಕ್ಷಣೆ ಒದಗಿಸಬಹುದೇ ಹೊರತು ಬಡವರನ್ನು ಕಾಪಾಡಲು ಏನೂ ಮಾಡಲಾರದು.

ನಾಗರಿಕರ ಜೀವಗಳನ್ನು ರೋಗಾಣುಗಳ ವಿಧ್ವಂಸದಿಂದ ರಕ್ಷಿಸಲು ಮತ್ತು ಜೀವನೋಪಾಯದ ಅನಿವಾರ್ಯತೆಗಳನ್ನು ನಿಭಾಯಿಸಲು, ವಿಶೇಷವಾಗಿ ಹಸಿವು ಮತ್ತು ಅಪೌಷ್ಟಿಕತೆಯಿಂದ ಸಾವುಗಳು ಸಂಭವಿಸದಂತೆ ತಡೆಯಲು ಕೇಂದ್ರ ಸರಕಾರ ತುರ್ತಾಗಿ ಈ ಶಿಫಾರಸುಗಳ ಮೇಲೆ ಕಾರ್ಯಾಚರಣೆ ಆರಂಭಿಸಬೇಕು ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಕರೆ ನೀಡಿದೆ.

ಆರೋಗ್ಯ ಕಾರ್ಯಕರ್ತರಿಗೆ ರಕ್ಷಣೆಯ ಸುಗ್ರೀವಾಜ್ಞೆಯಲ್ಲಿನ ದೋಷಗಳನ್ನು ಸರಿಪಡಿಸಬೇಕು

ಮಹಾಮಾರಿಯ ವಿರುದ್ಧ ನಮ್ಮ ಆರೋಗ್ಯ ಕಾರ್ಯಕರ್ತರಿಗೆ ಕಾನೂನು ರಕ್ಷಣೆ ಅತ್ಯಗತ್ಯವಾಗಿದೆ. ಆದ್ದರಿಂದ ಇಂತಹ ಯಾವುದೇ ಕ್ರಮವನ್ನು ತಾನು ಸ್ವಾಗತಿಸುವುದಾಗಿ ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಆದರೆ ಭಾರತದ ರಾಷ್ಟ್ರಪತಿಗಳು ಈಗ ಹೊರಡಿಸಿರುವ ಸುಗ್ರೀವಾಜ್ಞೆಯಲ್ಲಿ ಕೆಲವು ಗಂಭೀರ ದೋಷಗಳಿವೆ. ಈ ಸುಗ್ರೀವಾಜ್ಞೆಯು ಸೆಕ್ಷನ್ 7 ಸಾಂಕ್ರಾಮಿಕ ರೋಗಗಳ ಕಾಯ್ದೆ, 1897ರ ಸೆಕ್ಷನ್ 3ನ್ನು ತಿದ್ದುಪಡಿ ಮಾಡಿ ಸೆಕ್ಷನ್ 3(ಸಿ) ಮತ್ತು 3(ಡಿ) ನ್ನು ಸೇರಿಸಿದೆ. ಇವೆರಡು ಸೆಕ್ಷನ್‌ಗಳು ಒಟ್ಟಾಗಿ ಅಪರಾಧ ಸಾಬೀತಾಗುವ ವರೆಗೆ ಒಬ್ಬ ವ್ಯಕ್ತಿಯನ್ನು ನಿರ್ದೋಷಿ ಎಂದು ಜಗತ್ತಿನ ಎಲ್ಲ ದೇಶಗಳು ಸ್ವೀಕರಿಸಿರುವ ಮತ್ತು ಅನುಸರಿಸುತ್ತಿರುವ ಒಂದು ಸಾಮಾನ್ಯ ಕಾನೂನು ತತ್ವವನ್ನು ಉಲ್ಲಂಘಿಸುತ್ತವೆ. ಭಾರತದ ಕ್ರಿಮಿನಲ್ ಕಾನೂನು ನ್ಯಾಯಶಾಸ್ತ್ರ ಕೂಡ ಈ ಬಹು ಮಹತ್ವದ ಅಂಶವನ್ನು ಸ್ವೀಕರಿಸಿದೆ. ಈ ಎರಡು ಸೆಕ್ಷನ್‌ಗಳು ಒಟ್ಟಾಗಿ ಈ ತತ್ವವನ್ನು ತಲೆಕೆಳಗಾಗಿಸುತ್ತವೆ. ಇದು ಇದರ ಸಂಪೂರ್ಣ ದುರುಪಯೋಗಕ್ಕೆ, ಕಿರುಕುಳಕ್ಕೆ ಒಳಪಡಿಸಲಿಕ್ಕೆ ಮತ್ತು ನಿರ್ದಿಷ್ಟವಾಗಿ ಗುರಿಪಡಿಸಲಿಕ್ಕೆ ಅವಕಾಶ ಕಲ್ಪಿಸುತ್ತದೆ.

ಆದ್ದರಿಂದ ಈ ಎರಡು ಸೆಕ್ಷನ್‌ಗಳನ್ನು ಈ ಸುಗ್ರೀವಾಜ್ಞೆಯಿಂದ ತೆಗೆದು ಹಾಕಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

“ಮತ್ತೆ ಲಾಕ್‌ಡೌನ್ ವಿಸ್ತರಣೆ: ಸರಕಾರ ಇನ್ನೂ ಯಾವುದಕ್ಕೆ ಕಾಯುತ್ತಿದೆ?"

ಲಾಕ್‌ಡೌನನ್ನು ಮತ್ತೊಮ್ಮೆ ಎರಡು ವಾರಗಳ ವರೆಗೆ, ಅಂದರೆ ಮೇ 3 ರಿಂದ ಮೇ 17ರ ವರೆಗೆ ವಿಸ್ತರಿಸಲಾಗಿದೆ. ಈ ಬಾರಿ ಇದಕ್ಕೆ ಪೂರ್ವಭಾವಿಯಾಗಿ ಪ್ರಧಾನ ಮಂತ್ರಿಗಳು ದೇಶವನ್ನುದ್ದೇಶಿಸಿ ಮಾತನಾಡಿಲ್ಲ. ಗೃಹ ವ್ಯವಹಾರಗಳ ಮಂತ್ರಾಲಯ ಯಥಾಪ್ರಕಾರ ಹೊಸ ಲಾಕ್ಡೌನ್ ‘ಮಾರ್ಗಸೂಚಿ’ಗಳನ್ನು ಪ್ರಕಟಿಸಿದೆ. ಮಧ್ಯಮ, ಸಣ್ಣ ಮತ್ತು ಅತಿಸಣ್ಣ ಉದ್ದಿಮೆಗಳಿಗೆ ಹಣಕಾಸು ಬೆಂಬಲದ ಮಾತಿಲ್ಲ, ಜೀವನೋಪಾಯಗಳನ್ನು ಕಳಕೊಂಡಿರುವ ದಿನಗೂಲಿಗಳಿಗೆ ಹಣಕಾಸು ಬೆಂಬಲದ ಮಾತಿಲ್ಲ. ಈಗಾಗಲೇ ಸಿಪಿಐ(ಎಂ) ಮಾತ್ರವಲ್ಲ, ಇತರ ಪ್ರತಿಪಕ್ಷಗಳು ಹಾಗೂ ಪ್ರತಿಷ್ಠಿತ ಅರ್ಥಶಾಸ್ತ್ರಜ್ಞರೂ ಸಮರ್ಥಿಸಿರುವ, ಆದಾಯ ತೆರಿಗೆದಾರರಲ್ಲದವರಿಗೆ ಮುಂದಿನ ಮೂರು ತಿಂಗಳು ಮಾಸಿಕ 7500ರೂ.ನಗದು ಬೆಂಬಲ, ಮತ್ತು ತುಂಬಿ ತುಳಿಕುತ್ತಿರುವ ಆಹಾರಧಾನ್ಯ ದಾಸ್ತಾನುಗಳಿಂದ ಉಚಿತ ಆಹಾರಧಾನ್ಯಗಳ ವಿತರಣೆಯ ಮಾತೂ ಇಲ್ಲ.

ಸರಕಾರ ಇನ್ನೂ ಯಾವುದಕ್ಕೆ ಕಾಯುತ್ತಿದೆ ಎಂದು ಈ ಕುರಿತು ಪ್ರತಿಕ್ರಿಯಿಸುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಪ್ರಶ್ನಿಸಿದ್ದಾರೆ. ಲಾಕ್‌ಡೌನ್ ವಿಧಿಸುವುದು ಮಹಾಮಾರಿಯನ್ನು ಎದುರಿಸಲು ಸರ್ವಸಿದ್ಧತೆ ನಡೆಸುವುದಕ್ಕಷ್ಟೇ. ಅದರಿಂದಲೇ ಮಹಾಮಾರಿಯನ್ನು ಸೋಲಿಸಲು ಸಾಧ್ಯವಿಲ್ಲ. ಆದರೆ ಕಳೆದ ಆರು ವಾರಗಳಲ್ಲಿ ಈ ಸರಕಾರ ಏನು ಸಿದ್ಧತೆ ಮಾಡಿಕೊಂಡಿದೆ ಎಂದು ಹೇಳಿಲ್ಲ, ಈ ವಿಸ್ತರಿಸಿದ ಲಾಕ್‌ಡೌನಿಗೆ ಮಾರ್ಗ–ನಕಾಶೆಯೇನು ಎಂದೂ ವಿಶದಪಡಿಸಿಲ್ಲ ಎಂದು ಈ ಬಗ್ಗೆ ಪತ್ರಕರ್ತರೊಬ್ಬರ ಪ್ರಶ್ನೆಗೆ ಉತ್ತರಿಸುತ್ತ ಯೆಚುರಿ ಟಿಪ್ಪಣಿ ಮಾಡಿದ್ದಾರೆ.

ಲಾಕ್‌ಡೌನ್ ವಿಸ್ತರಣೆಯ ಪ್ರಕಟಣೆ ಬರುವ ತುಸು ಮೊದಲು, ಐದು ವಾರಗಳಿಂದ ಕಾಯುತ್ತಿದ್ದ ವಲಸೆ ಕಾರ್ಮಿಕರನ್ನು ಅವರ ಊರುಗಳಿಗೆ ತಲುಪಿಸಲು ಕೊನೆಗೂ ಕೆಲವು ‘ಶ್ರಮಿಕ ಸ್ಪೆಷಲ್’ ರೈಲುಗಳ ವ್ಯವಸ್ಥೆ ಮಾಡಲಾಗಿದೆ. ಆದರೆ ಇದನ್ನೂ ಉಚಿತವಾಗಿ ಮಾಡಿಲ್ಲ, ಬದಲಿಗೆ ವಿಪರೀತ ದರಗಳನ್ನು ವಸೂಲಿ ಮಾಡಲಾಗಿದೆ. ಸ್ಲೀಪರ್ ದರಗಳಿಗೆ, ಸೂಪರ್‌ಫಾಸ್ಟ್ ದರ ರೂ.30, ಊಟಕ್ಕೆ ಮತ್ತು ನೀರಿಗೆ ರೂ.20 ಸೇರಿಸಲಾಗಿದೆ ಎಂದು ಪಿಟಿಐ ವರದಿ ಮಾಡಿದೆ. ಹತಾಶರಾಗಿರುವ ಬಡ ಕಾರ್ಮಿಕರನ್ನು ನಿಮ್ಮ ಪ್ರಯಾಣಕ್ಕೆ ಬೆಲೆ ತೆರಿ ಎಂದು ಕೇಳುವುದು ಅತ್ಯಂತ ನಾಚಿಕೆಗೇಡಿನ ಸಂಗತಿ ಎಂದು ಯೆಚುರಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಮೋದಿಯವರು ಪ್ರಧಾನಿಗಳು ನೋಡಿಕೊಳ್ಳುತ್ತಾರೆ ಎಂದು ತಮ್ಮ ಹೆಸರಿನಲ್ಲಿ ರಚಿಸಿರುವ ನಿಧಿಗೆ ಬಂದು ಬೀಳುತ್ತಿರುವ ಸಾವಿರಾರು ಕೋಟಿ ರೂ.ಗಳು ಯಾತಕ್ಕಾಗಿ ಎಂದು ಅವರು ಪ್ರಶ್ನಿಸಿದ್ದಾರೆ.

ಈ ನಡುವೆ ಸಶಸ್ತ್ರ ಪಡೆಗಳು ಮೇ 3ರಂದು ಆಸ್ಪತ್ರೆಗಳ ಮೇಲೆ ಹಾರಾಟ ನಡೆಸಿ ಹೂಮಳೆ ಸುರಿಸುವ ಕಾರ್ಯಕ್ರಮವನ್ನು ಪ್ರಕಟಿಸಲಾಗಿದೆ. ಜನಗಳ ಆವಶ್ಯಕತೆಗಳನ್ನು ಪೂರೈಸಲು, ನಗದು, ರೇಷನ್‌ಗೆ ಯಾವುದೇ ಅರ್ಥಪೂರ್ಣ ಮೊತ್ತವನ್ನು ಕೊಡದ ಸರಕಾರ ಈ ಮಹಾಪ್ರದರ್ಶನಕ್ಕೆ ಎಷ್ಟು ವೆಚ್ಚ ಮಾಡಲಾಗುತ್ತಿದೆ ಎಂದು ಸ್ಪಷ್ಟನೆ ನೀಡುತ್ತದೆಯೇ ಎಂದು ಯೆಚುರಿ ಪ್ರಶ್ನಿಸಿದ್ದಾರೆ. ವೈಯಕ್ತಿಕ ಪ್ರಚಾರ, ಸೆಂಟ್ರಲ್ ವಿಸ್ಟಾ, ಪ್ರಧಾನಿಗಳಿಗೆ ಹೊಸ ನಿವಾಸ ಇತ್ಯಾದಿಗಳೇ ಈ ಸರಕಾರದ ಆದ್ಯತೆಗಳು, ಕುಲಗೆಟ್ಟಿರುವ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಸುಧಾರಣೆ, ಜನಗಳ ಜೀವನೋಪಾಯಗಳಲ್ಲ. ಉಪವಾಸದ ಸ್ಥಿತಿಯತ್ತ ಜಾರುತ್ತಿರುವ ಲಕ್ಷಾಂತರ ಜನಗಳಿಗೆ ಈಗ ಪರಿಹಾರ ಬೇಕಾಗಿದೆ. ಹಸಿದವರಿಗೆ ತುಂಬಿ ತುಳುಕುತ್ತಿರುವ ಆಹಾರಧಾನ್ಯಗಳ ಗೋದಾಮುಗಳನ್ನು ತೆರೆಯುವ ಬದಲು ಬಡಜನಗಳ ಬಗ್ಗೆ ಯಾವುದೇ ಕಾಳಜಿಯಿಲ್ಲದೆ ಲಾಕ್‌ಡೌನ್ ಮತ್ತೆ ವಿಸ್ತಾರಗೊಂಡಿದೆ ಎಂದು ಯೆಚುರಿ ಖೇದ ವ್ಯಕ್ತಪಡಿಸಿದ್ದಾರೆ.

ಸಂಪಾದಕೀಯ

ದೊಡ್ಡಣ್ಣನ ದೊಡ್ಡ ಸೋಲು

ದೊಡ್ಡಣ್ಣ ಟ್ರಂಪ್ ಸೋತಿದ್ದಾರೆ. ಅವರ ದುರಹಂಕಾರಕ್ಕೆ ಬಲವಾದ ಪೆಟ್ಟು ಬಿದ್ದಿದೆ. ಯಾರ್‍ಯಾರ ಮೇಲೆ ಆರೋಪಗಳನ್ನು ಹೊರಿಸುತ್ತಾರೆ. ಮೈ ಪರಚಿಕೊಳ್ಳುತ್ತಿದ್ದಾರೆ.

ಭಯಂಕರ ಪರಿಣಾಮ ಬೀರಿದ ಕೊರೋನಾ ಈಗಾಗಲೇ ಸುಮಾರು 60 ಸಾವಿರ ಅಮಾಯಕ ಅಮೇರಿಕದ ಪ್ರಜೆಗಳನ್ನು ಬಲಿಪಡೆದಿದೆ. ಸೋಂಕಿತ ಅಮೇರಿಕನರ ಸಂಖ್ಯೆ 10 ಲಕ್ಷ ದಾಟಿದೆ. ಇದು ವಿಯೆಟ್ನಾಂ ಯುದ್ಧದಲ್ಲಿ ಸಾವನಪ್ಪಿದವರ ಸಂಖ್ಯೆಯನ್ನು ಮೀರಿದೆ. ಇಷ್ಟೊಂದು ದೊಡ್ಡ ದುರಂತಕ್ಕೆ ಅಧ್ಯಕ್ಷ ಟ್ರಂಪ್‌ರವರೇ ಕಾರಣ ಎಂದು ಆರೋಪಿಸಲಾಗದು. ಆದರೆ ಅದು ಖಂಡಿತವಾಗಿಯೂ ಟ್ರಂಪ್ ನಾಯಕತ್ವದ ವೈಫಲ್ಯವಾಗಿದೆ. ಚೀನಾದಲ್ಲಿ ಕೊರೊನಾ ಸೋಂಕು ಹರಡುತ್ತಿದ್ದಾಗ ಅಮೇರಿಕದಲ್ಲಿ ಅದರಿಂದಾಗುವ ಪರಿಣಾಮಗಳ ಕುರಿತು ಸಿಐಎ ಬೇಹುಗಾರಿಕಾ ಸಂಸ್ಥೆಯು ಕನಿಷ್ಠ 12 ಬಾರಿ ಟ್ರಂಪ್ ಆಡಳಿತಕ್ಕೆ ಎಚ್ಚರಿಕೆ ನೀಡಿತ್ತು. ಆದರೆ ಟ್ರಂಪ್ ಇಂತಹ ಎಚ್ಚರಿಕೆಗಳನ್ನು ನಿರ್ಲಕ್ಷ್ಯಿಸಿದ್ದರಿಂದ ಅಮೇರಿಕದಲ್ಲಿ ಕೊರೊನಾ ಸೋಂಕು ವ್ಯಾಪಕವಾಗಿ ಹರಡಲಾರಂಭಿಸಿತು ಎಂದು ಬೇಹುಗಾರಿಕಾ ಅಧಿಕಾರಿಗಳು ಹೇಳಿದ್ದಾರೆ. ಪರಿಸ್ಥಿತಿ ಹೀಗಿರುವಾಗ, ಈ ಪ್ರಮಾಣದ ಸಾಂಕ್ರಾಮಿಕ ರೋಗ ಹುಟ್ಟಿಕೊಳ್ಳಬಹುದು ಎಂದು ಯಾರಿಗೂ ತಿಳಿದಿರಲಿಲ್ಲ ಎಂಬ ಟ್ರಂಪ್ ಹೇಳಿಕೆಯಲ್ಲಿ ಹುರುಳಿಲ್ಲ. 2017 ರ ಪೆಂಟಗಾನ್ ವರದಿಯೊಂದರಲ್ಲಿ ಉಸಿರಾಟಕ್ಕೆ ಸಂಬಂಧಪಟ್ಟ ಒಂದು ಹೊಸ ಸಾಂಕ್ರಾಮಿಕ ರೋಗದ ಬೆದರಿಕೆಯಿದೆ ಎಂದು ಹೇಳಲಾಗಿತ್ತು. ಆದರೆ ಟ್ರಂಪ್ ಆಡಳಿತ ಅಂತಹ ಒಂದು ಹೊಸ ವೈರಾಣು ದಾಳಿಗೆ ಸಜ್ಜಾಗಲೇ ಇಲ್ಲ. ಚಿಕಿತ್ಸೆಗೆ ಬೇಕಾಗುವ ವೆಂಟಿಲೇಟರ್ಸ್, ಹಾಸಿಗೆಗಳು, ವ್ಯಕ್ತಿಗತವಾಗಿ ಬೇಕಾಗುವ ರಕ್ಷಣಾ ಉಪಕರಣಗಳು ಮೊದಲಾದವುಗಳ ಕೊರತೆಯತ್ತ ಗಮನ ಕೊಡಲೇ ಇಲ್ಲ.

ಟ್ರಂಪ್ ಆಡಳಿತ ಇಂತಹ ಎಚ್ಚರಿಕೆಗಳನ್ನು ಕಡೆಗಣಿಸಿದ್ದು ಮಾತ್ರವಲ್ಲ ಹಿಂದೆ ಕಟ್ಟಲಾದ ಸಂಸ್ಥೆಗಳನ್ನು ಮತ್ತು ಇಲಾಖೆಗಳನ್ನು ಮುಚ್ಚಿಬಿಟ್ಟಿತು. ಸಾರ್ವಜನಿಕ ಆರೋಗ್ಯಕ್ಕಾಗಿ ನೀಡುವ ಅನುದಾನವನ್ನು ಕಡಿತ ಮಾಡಲಾಯಿತು. ಇಂತಹ ಮಾರಣಾಂತಿಕ ಕಾಯಿಲೆಗಳು ಒಮ್ಮಿಂದೊಮ್ಮೆಲೆ ಸ್ಫೋಟಗೊಂಡಾಗ, ಅದನ್ನು ಎದುರಿಸಲು ಹಿಂದಿನ ಅಧ್ಯಕ್ಷ ಬರಾಕ್ ಒಬಾಮಾ ರೂಪಿಸಿದ ವ್ಯವಸ್ಥೆಯನ್ನು ಸಹ ಕಿತ್ತು ಹಾಕಲಾಯಿತು. ದೊಡ್ಡಣ್ಣನ ಈ ವೈಫಲ್ಯಕ್ಕೆ ಆತನ ಆಡಳಿತ ನೀತಿಯೇ ಕಾರಣ. 'ಎಷ್ಟು ಡಾಲರ್ ಖರ್ಚಾಯಿತು, ಎಷ್ಟು ಲಾಭ ಬಂತು' ಇದೊಂದೆ ಟ್ರಂಪ್ ಲೆಕ್ಕಾಚಾರ. ಸಾರ್ವಜನಿಕ ಆರೋಗ್ಯಕ್ಕೆ ಕೊಡುವ ಆದ್ಯತೆಗಿಂತಲೂ ಮಿಲಿಟರಿ ಸಿದ್ಧತೆಗೆ ಹೆಚ್ಚಿನ ಆದ್ಯತೆ. ಮಿಲಿಟರಿ ಬಲದಿಂದ 60 ಸಾವಿರಕ್ಕೂ ಹೆಚ್ಚು ಅಮೇರಿಕನ್ನರನ್ನು ಸಾವಿನ ದವಡೆಯಿಂದ ಪಾರುಮಾಡಲಾಗಿಲ್ಲ!

ಅಮೇರಿಕದಲ್ಲಿ ಆರೋಗ್ಯ ಸೇವೆಯನ್ನು ಲಾಭಕೋರ ಖಾಸಗಿ ಕಾರ್ಪೊರೇಟ್‌ಗಳಿಗೆ ವಹಿಸಿಕೊಡಲಾಗಿದೆ. ಕೊರೊನಾದಂತಹ ಸಾರ್ವಜನಿಕ ತುರ್ತು ಪರಿಸ್ಥಿತಿ ಉಂಟಾದಾಗಲು ಖಾಸಗಿ ಕಾರ್ಪೊರೇಟ್‌ಗಳು ಲಾಭವನ್ನು ಬಿಟ್ಟುಕೊಡುವುದಿಲ್ಲ. ಸಾಧಾರಣಾ ಪರಿಸ್ಥಿತಿಯಲ್ಲೂ ಆರೋಗ್ಯ ವಿಮೆ ಇಲ್ಲದ ಬಹುಸಂಖ್ಯಾತ ಕಾರ್ಮಿಕರಿಗೆ ಅಮೇರಿಕದಲ್ಲಿ ಖಾಸಗಿ ಆರೋಗ್ಯ ಸೇವೆಯನ್ನು ಪಡೆಯಲಾಗುವುದಿಲ್ಲ. ಸಾರ್ವಜನಿಕ ಆಸ್ಪತ್ರೆಗಳಲ್ಲಿ ಹಾಸಿಗೆಗಳು, ವೆಂಟಿಲೇಟರ್‌ಗಳು, ಐಸಿಯುಗಳು, ಆರೋಗ್ಯ ಸೇವಾ ಸಿಬ್ಬಂದಿಗಳಿಗೆ ರಕ್ಷಣಾ ಉಪಕರಣಗಳು ಇರುವುದಿಲ್ಲ. ಶ್ರೀಮಂತರಿಗೆ ಸೌಲಭ್ಯಗಳು ದೊರೆಯುತ್ತವೆ. ಬಡವರು ನರಳಿ ಪ್ರಾಣ ಬಿಡುತ್ತಾರೆ.

ಅಮೇರಿಕದ ಬಳಿ ಭಯಂಕರ ಸ್ವರೂಪದ ಶಸ್ತ್ರಾಸ್ತ್ರಗಳಿವೆ ಇಡೀ ವಿಶ್ವವನ್ನೇ ಧ್ವಂಸ ಮಾಡುವ ಸಾಮರ್ಥ್ಯ ಅವುಗಳಿಗೆ ಇದೆ. ಆದರೆ ತನ್ನ ಸ್ವಂತ ದೇಶವಾಸಿಗಳಿಗೆ ಆರೋಗ್ಯ ಭದ್ರತೆ ನೀಡಲು ಅದು ಆಸಕ್ತಿ ಹೊಂದಿಲ್ಲ. ಇದು ಬಹುತೇಕ ಎಲ್ಲಾ ಬಂಡವಾಳಶಾಹಿ ದೇಶಗಳ ಕತೆ. ಮೋದಿಯವರ ಭಾರತ ಒಂದು ಬಂಡವಾಳಶಾಹಿ ದೇಶ. ಟ್ರಂಪ್ ಮತ್ತು ಮೋದಿ ಪರಸ್ಪರ ಆಪ್ತರು. ಕೊರೊನಾ ಬಂದಿರುವುದರಿಂದ ಅವರ ಪರಸ್ಪರ ಆಲಿಂಗನ ನೋಡಲು ಸಿಗುವುದಿಲ್ಲ. ಟ್ರಂಪ್ ಹೆಜ್ಜೆಯಲ್ಲಿ ಹೆಜ್ಜೆ ಇಟ್ಟು ನಡೆಯಲು ಮೋದಿ ತುಂಬಾ ಇಷ್ಟಪಡುತ್ತಾರೆ. ಆದರೆ ನಮ್ಮ ಮಹಾನ್ ಭಾರತದಲ್ಲಿ ಬಲಾಢ್ಯವಾದ ಪ್ರಜಾಸತ್ತಾತ್ಮಕ ಸಂವಿಧಾನ ಇರುವುದರಿಂದ 'ನಮೋ ಟ್ರಂಪ್' ತಂತ್ರ ಫಲಪ್ರದವಾಗುತ್ತಿಲ್ಲ. ಕೊರೊನಾ ದುರಂತವನ್ನು ಇವರಿಬ್ಬರೂ ಚುನಾವಣಾ ರಾಜಕೀಯಕ್ಕೆ ಬಳಸಲು ಉತ್ಸುಕರಾಗಿದ್ದಾರೆ. ಟ್ರಂಪ್ ಯೋಜನೆ ಫಲಕಾರಿಯಾಗುವಂತೆ ಕಾಣುವುದಿಲ್ಲ. ಮೋದಿ ಇಷ್ಟರಲ್ಲೇ ಒಮ್ಮೆ ಅಮೇರಿಕಕ್ಕೆ ಹೋಗಿ ಟ್ರಂಪ್ ಪರ ಪ್ರಚಾರ ಮಾಡಿದ್ದರೂ ಪ್ರಯೋಜನವಾದಂತೆ ಕಾಣುವುದಿಲ್ಲ. ಕೊರೊನಾ ವಿಷಯದಲ್ಲಿ ಮೋದಿ ಅವರನ್ನು ಬೃಹತ್ತಾಗಿ ಬಿಂಬಿಸುವ ಪ್ರಯತ್ನ ಸುರುಆಗಿದೆ. ಆದರೆ ಜನ ಮಾಡಿದ ತಪ್ಪನ್ನು ಮತ್ತೆ ಮತ್ತೆ ಮಾಡಲಾರರು. ಅಣ್ಣ ತಮ್ಮರ ಆಟದಿಂದ ಪಾಠ ಕಲಿಯದೆ ಇರಲಾರರು.

ಪಶ್ಚಿಮ ಬಂಗಾಳ ಮತ್ತಿತರೇ ರಾಜ್ಯಗಳಿಂದ ತಮ್ಮ ಆರೋಗ್ಯ ತಪಾಸಣೆಗೆ ಬಂದು ಲಾಕ್ಡೌನ್ ಆದ ಜನರ ಸಂಕಷ್ಟ ಪರಿಹರಿಸಲು ಕೋರಿ ಮನವಿ

ಮಾನ್ಯ ಮುಖ್ಯ ಮಂತ್ರಿಗಳು,
ಕರ್ನಾಟಕ ಸರ್ಕಾರ,

ರಾಜ್ಯದ ಪ್ರಮುಖ ಆಸ್ಪತ್ರೆಗಳಿಗೆ ವೈದ್ಯಕೀಯ ಸೌಲಭ್ಯಕ್ಕೆ ಬೇರೆ, ಬೇರೆ ರಾಜ್ಯಗಳಿಂದ ಬಂದು ಸಹಸ್ರಾರು ಜನ ಲಾಕ್ಡೌನ್‌ನಲ್ಲಿ ಬಂಧಿಗಳಾಗಿ ತೀವ್ರ ಸಂಕಷ್ಟಕ್ಕೆ ಸಿಲುಕಿರುವುದು ತಮ್ಮ ಗಮನಕ್ಕಿದೆಯೆಂದು ಭಾವಿಸುವೆನು.

ಬೃಹತ್ ಬೆಂಗಳೂರಿನ ಕಾಡುಗೋಡಿ ಹತ್ತಿರ ವಿರುವ ಸಾಯಿಬಾಬಾ ಆಸ್ಪತ್ರೆಗೆ ಪಶ್ಚಿಮ ಬಂಗಾಳ ರಾಜ್ಯ ಒಂದರಿಂದಲೇ ಕ್ಯಾನ್ಸರ್ ಮತ್ತಿತರೇ ನರ ರೋಗ ಮತ್ತಿತರೇ ಸಂಬಂಧ ಶುಶ್ರೂಷೆಗೆಂದು ಬಂದವರ ಮತ್ತು ಅವರ ಸಹಾಯಕ್ಕೆ ಬಂದವರ ಸಂಖ್ಯೆ 5,000 ಕ್ಕೂ ಹೆಚ್ಚಾಗಿದೆಯೆನ್ನಲಾಗಿದೆ.

ಕಳೆದ ಲಾಕ್ಡೌನ್ ಅವಧಿಯಲ್ಲಿ ಪ್ರತಿ ದಿನ ವಸತಿ ಬಾಡಿಗೆ, ಆಹಾರ ಮತ್ತಿತರೆ ವೆಚ್ಚವಾಗಿ ತಲಾ 500 ರೂ. ಗಳಿಗಿಂತಲೂ ಅಧಿಕ ಮೊತ್ತ ಖರ್ಚು ಮಾಡಬೇಕಾಗಿ ಬಂದಿದೆ ಮತ್ತು ಔಷಧಿಗಾಗಿಯೂ ವೆಚ್ಚ ಮಾಡಬೇಕಿದೆ. ಕಳೆದ 40 ದಿನಗಳಿಂದ ದೊಡ್ಡ ಮೊತ್ತ ಕಳೆದುಕೊಂಡು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಈ ನಡುವೆ ಸ್ಥಳೀಯ ಆಡಳಿತದ ಮಧ್ಯ ಪ್ರವೇಶದಿಂದ ಸ್ವಲ್ಪ ನೆರವು ಸಿಕ್ಕರೂ ಸಂಕಷ್ಟಗಳು ಬೆಳೆಯುತ್ತಲೇ ಇವೆ ಎನ್ನಲಾಗಿದೆ.

ಬಹುತೇಕರು ವೃದ್ಧರು, ತೀವ್ರ ಮತ್ತು ಗಂಭೀರ ಅನಾರೋಗ್ಯದಲ್ಲಿರುವವರು ಇದ್ದಾರೆ. ಇವರ ವೆಚ್ಚಕ್ಕೆ ಲಾಕ್ ಡೌನ್ ನಲ್ಲಿರುವ ಬಂಗಾಲದ ಅವರು ಕುಟುಂಬಗಳು ನೆರವಾಗಲು ತೀವ್ರ ಸಂಕಷ್ಟವನ್ನೆದುರಿಸುತ್ತಿವೆ ಎನ್ನಲಾಗಿದೆ.

ರಾಜ್ಯ ಸರಕಾರ ತಕ್ಷಣ ಮಧ್ಯ ಪ್ರವೇಶಿಸಿ, ಇವರಿಗೆ ಅಗತ್ಯ ನೆರವು ನೀಡಬೇಕು ಮತ್ತು ಪಶ್ಚಿಮ ಬಂಗಾಳಕ್ಕೆ ತೆರಳಲು ಅಗತ್ಯ ಸಾರಿಗೆ ಮತ್ತು ಪರವಾನಿಗಿ ವ್ಯವಸ್ಥೆ ಮಾಡಬೇಕು. ಇದಕ್ಕಾಗಿ ಪಶ್ಚಿಮ ಬಂಗಾಳ ರಾಜ್ಯ ಸರಕಾರದ ಸಹಾಯ ಪಡೆಯಬಹುದು.

ಅದೇ ರೀತಿ, ರಾಜ್ಯದ ಇತರೇ ಪ್ರಮುಖ ಖಾಸಗಿ ಆಸ್ಪತ್ರೆಗಳಲ್ಲಿ ಸಿಲುಕಿರುವ ಇತರೇ ರಾಜ್ಯಗಳ ಜನತೆಗೂ ಅಗತ್ಯ ನೆರವು ನೀಡಲು ಭಾರತ ಕಮ್ಯೂನಿಷ್ಟ ಪಕ್ಷ (ಮಾರ್ಕ್ಸವಾದಿ)ದ ರಾಜ್ಯ ಸಮಿತಿ ಪರವಾಗಿ ತಮ್ಮಲ್ಲಿ ಮನವಿ ಮಾಡುವೆನು. ಈ ಕುರಿತು ಕೈಗೊಂಡ ಕ್ರಮಗಳ ಮಾಹಿತಿಯನ್ನು ನೀಡಲು ವಿನಂತಿಸುವೆನು.

ಯು. ಬಸವರಾಜ
ಕಾರ್ಯದರ್ಶಿ (29-04-2020)

ಅಂಗವಿಕಲರ ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರು (MRW) ಮತ್ತು ಅಂಗವಿಕಲರ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು(VRW) ರವರಿಗೆ ಕೂಡಲೇ ಬಿಡುಗಡೆಗೊಳಿಸಲು ಮನವಿ

ಕರ್ನಾಟಕ ರಾಜ್ಯ ಸರಕಾರದ ಅಂಗವಿಕಲರ ಸಬಲೀಕರಣ ಇಲಾಖೆಯಡಿ ಉಡುಪಿ ಜಿಲ್ಲೆಯಾದ್ಯಂತ ಪ್ರತೀ ಗ್ರಾಮ ಪಂಚಾಯತ್ ವ್ಯಾಪ್ತಿಯೊಳಪಟ್ಟು ಅಂಗವಿಕಲರಿಗಾಗಿ ದುಡಿಯುತ್ತಿರುವ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು (VRW) ಮತ್ತು ತಾಲೂಕು ಮಟ್ಟದಲ್ಲಿ ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರು ಗೌರವ ಧನದ ಹೆಸರಲ್ಲಿ ಕನಿಷ್ಟ ವೇತನ ಪಡೆದು ಅಂಗವಿಕಲರ ಶ್ರೇಯೋಭಿವೃದ್ದಿಗಾಗಿ ನೂರಾರು ನೌಕರರು ನಿಷ್ಠೆಯಿಂದ ದುಡಿಯುತ್ತಿದ್ದಾರೆ. ಸ್ವತಃ ಅಂಗವಿಕಲರಾಗಿದ್ದು ದುಡಿಯುತ್ತಿದ್ದ ಈ ವಿಆರ್‌ಡಬ್ಲ್ಯು ಮತ್ತು ಎಂಆರ್‌ಡಬ್ಲ್ಯು ರವರಿಗೆ ಕಳೆದ 6 ತಿಂಗಳಿಂದ ಕೊಡಬೇಕಾಗಿದ್ದ ಮಾಸಿಕ ವೇತನ ಕೊಡದೆ ತಡೆಹಿಡಿಯಲಾಗಿದೆ. ಈ ಮಧ್ಯೆ ಇದೀಗ ಕೊರೊನ ಲಾಕ್ ಡೌನ್ ನಿಂದಾಗಿ ಈ ನೌಕರ ಬಂಧುಗಳ ಕುಟುಂಬದ ಜೀವನ ಸಂಕಷ್ಟಕ್ಕೊಳಪಟ್ಟಿದೆ. ಜಿಲ್ಲೆಯ ಅಂಗವಿಕಲ ಬಡ ನೌಕರರಿಗೆ ಬಾಕಿ ನಿಂತ ವೇತನವನ್ನು ಈ ಕೂಡಲೆ ಬಿಡುಗಡೆಗೆ ಸೂಕ್ತ ಕ್ರಮವಹಿಸಬೇಕಾಗಿ ಈ ಮೂಲಕ ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟ ವಿನಂತಿಸಿಕೊಳ್ಳುತ್ತದೆ.

ವೆಂಕಟೇಶ ಕೋಣಿ

ಐ.ಆರ್.ಎಸ್. ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮಗಳನ್ನು ವಜಾ ಮಾಡಿ-ಸಿಪಿಐ(ಎಂ) ಆಗ್ರಹ

ಭಾರೀ ಶ್ರೀಮಂತರಿಗೆ ಕೊವಿಡ್ ತೆರಿಗೆಯ ಸೂಚನೆಗೆ ಸರಕಾರದ ಸಿಟ್ಟು-ಶ್ರೀಮಂತ-ಪರ ನಿಲುವಿನ ಭಂಡ ಪ್ರದರ್ಶನ ಮೋದಿ ಸರಕಾರ ಇಂಡಿಯನ್ ರೆವಿನ್ಯೂ ಸರ್ವಿಸ್(ಐ.ಆರ್.ಎಸ್.)ನ ಅಧಿಕಾರಿಗಳ ಗುಂಪೊಂದರ ವಿರುದ್ಧ ಅವರು ತೆರಿಗೆ ಆದಾಯಗಳನ್ನು ಹೆಚ್ಚಿಸುವ ಕುರಿತ ಒಂದು ಪ್ರಸ್ತಾವವನ್ನು ಅಧಿಕೃತ ಅನುಮತಿಯಿಲ್ಲದೆ ಪ್ರಕಟಿಸಿದ್ದಾರೆಂದು ಹೇಳಿ ಶಿಸ್ತುಕ್ರಮಗಳಿಗೆ ಮುಂದಾದ ಕೇಂದ್ರ ಸರಕಾರದ ಬೆದರಿಕೆಯನ್ನು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಬಲವಾಗಿ ಖಂಡಿಸುತ್ತದೆ ಮತ್ತು ಕೂಡಲೇ ಅಂತಹ ಕ್ರಮಗಳನ್ನು ಕೈ ಬಿಡಲು ಒತ್ತಾಯಿಸುತ್ತದೆ.

ಕೊವಿಡ್-19 ವೈರಾಣುವಿನ ಗಂಭೀರ ಪರಿಣಾಮಗಳ ನಡುವೆ ಅರ್ಥವ್ಯವಸ್ಥೆಯನ್ನು ಮತ್ತೆ ಕಟ್ಟಲು ಒಂದು ಹಣಕಾಸು ಮಾರ್ಗ-ನಕಾಶೆ ತಯಾರಿಸುವಲ್ಲಿ ನೆರವಾಗುವ ಸಲಹೆ-ಸೂಚನೆಗಳನ್ನು ಕೊಡಬೇಕೆಂಬ ಕೇಂದ್ರ ಸರಕಾರದ ಕೇಳಿಕೆಗೆ ಸ್ಪಂದಿಸಿ, ಈ ಪ್ರಸ್ತಾವಗಳನ್ನು ಐ.ಆರ್.ಎಸ್. ಅಧಿಕಾರಿಗಳ ಈ ಗುಂಪು 'ಫೋರ್ಸ್' (ಫಿಸ್ಕಲ್ ಆಪ್ಷನ್ಸ್ ಅಂಡ್ ರೆಸ್ಪಾನ್ಸಸ್ ಟು ಕೊವಿಡ್-19 ಎಪಿಡೆಮಿಕ್-ಕೊವಿಡ್-19 ಸಾಂಕ್ರಾಮಿಕಕ್ಕೆ ವಿತ್ತೀಯ ಆಯ್ಕೆಗಳು ಮತ್ತು ಸ್ಪಂದನೆಗಳು) ಎಂಬ ಪ್ರಬಂಧವನ್ನು ತಯಾರಿಸಿತ್ತು. ಅದು ಶ್ರೀಮಂತರ ಆದಾಯ ತೆರಿಗೆಯ ದರಗಳನ್ನು 40%ಕ್ಕೆ ಹೆಚ್ಚಿಸಬೇಕು, ಮತ್ತು 4% ದರದಲ್ಲಿ ಕೊವಿಡ್-19ರ ಸೆಸ್ ಹಾಕಬೇಕು ಎಂಬುದು ಅದರಲ್ಲಿ ನೀಡಿರುವ ಎರಡು ಪ್ರಮುಖ ಸೂಚನೆಗಳು ಎನ್ನಲಾಗಿದೆ.

ಇದರಿಂದ ಕೋಪಗೊಂಡ ಸರಕಾರ ಶಿಸ್ತು ಕ್ರಮಕ್ಕೆ ಮುಂದಾಗಿರುವುದು ನಾಚಿಕೆಗೇಡು. ಇದು ಶ್ರೀಮಂತರನ್ನು ರಕ್ಷಿಸುವ ಅದರ ನಾಚಿಕೆಗೆಟ್ಟ ಬಣ್ಣವನ್ನು ಬಯಲುಗೊಳಿಸಿದೆ.

ಇದು ಮಾತ್ರವಲ್ಲಾ, ಉದ್ದೇಶ ಪೂರ್ವಕವಾಗಿಯೇ ಸುಸ್ತಿದಾರರಾಗಿರುವವರು ಮತ್ತು ತಲೆಮರೆಸಿಕೊಂಡಿರುವ ಬಂಡವಾಳದಾರರ ಸಾಲಗಳ ಸುಮಾರು 68,000 ಕೋಟಿ ರೂ. ಗೂ ಅಧಿಕ ಮೊತ್ತ ರೈಟ್ ಆಫ್ ಮಾಡಿರುವುದು ಈಗ ಆರ್.ಟಿ.ಐ. ನಿಂದ ಬಯಲಾಗಿದೆ. ಇದೆಲ್ಲವೂ ಜನಗಳನ್ನು ಲೂಟಿ ಹೊಡೆಯುವ ಸರಕಾರ-ಕಾರ್ಪೊರೇಟ್ ಶಾಮೀಲುತನವನ್ನು ಮಗದೊಮ್ಮೆ ಬಯಲಿಗೆಳೆದಿದೆ ಎಂದು ಸಿಪಿಐ(ಎಂ) ಹೇಳಿದೆ.

ಸರಕಾರ ತನ್ನ ನೌಕರರು ಮತ್ತು ಪಿಂಚಣಿದಾರರಿಗೆ ತುಟ್ಟಿ ಭತ್ಯೆಯನ್ನು ಹಿಂದಿನ ದಿನಾಂಕದಿಂದಲೇ ಮತ್ತು ಮುಂದೆಯೂ ಅನ್ವಯವಾಗುವಂತೆ ಸ್ಥಂಭನಗೊಳಿಸಿರುವುದು ಮತ್ತು ಕೋವಿಡ್-19 ವೈರಾಣು ವಿರುದ್ಧದ ಹೋರಾಟದಲ್ಲಿ ತೊಡಗಿರುವ ಬಹುಸಂಖ್ಯಾತ ಬಡವರಿಗೆ ಗಂಭೀರವಾಗಿ ನೆರವಾಗದಿರುವುದು ಎಲ್ಲವೂ ಅದರ ಶ್ರೀಮಂತ-ಪರ, ಬಡವರ-ವಿರೋಧಿ ಮತ್ತು ದುಡಿಯುವ ಜನ-ವಿರೋಧಿ ನಿಲುವನ್ನು ಎತ್ತಿ ತೋರಿಸುತ್ತದೆ ಎಂದು ಸಿಪಿಐ(ಎಂ) ವಿವರಿಸಿದೆ.

ಅರ್ಥ ವ್ಯವಸ್ಥೆಯ ಪುನರುಜ್ಜೀವನದ ಬಗ್ಗೆ ಒಂದು ಮುಕ್ತ ಮತ್ತು ಪಾರದರ್ಶಕ ಸಂವಾದವನ್ನು ಆರಂಭಿಸಬೇಕೆಂದು ಒತ್ತಾಯಿಸಿದೆಯಲ್ಲದೇ, ಭಾರೀ ಶ್ರೀಮಂತರಿಗೆ ಲೂಟಿ ಮಾಡಲು ಮತ್ತು ಸಂಪತ್ತು ರಾಶಿ ಹಾಕಿಕೊಳ್ಳಲು ಬಿಟ್ಟು, ಕೊವಿಡ್ ಪರಿಣಾಮಗಳ ಹೊರೆಯನ್ನು ಬಡವರು ಮತ್ತು ದುಡಿಯುವ ಜನಗಳ ಹೆಗಲ ಮೇಲೆ ಏಕಪಕ್ಷೀಯವಾಗಿ ವರ್ಗಾಯಿಸುವ ಸರಕಾರದ ನಡೆಗಳನ್ನು ಒಪ್ಪಲಾಗದು ಮತ್ತು ಖಂಡಿತವಾಗಿಯೂ ಪ್ರತಿರೋಧಿಸುವ ವಿಚಾರವಾಗಿದೆ ಎಂದು ಸಿಪಿಐ(ಎಂ) ರಾಜ್ಯ ಸಮಿತಿ ಹೇಳಿದೆ.

ಯು. ಬಸವರಾಜ
ಕಾರ್ಯದರ್ಶಿಗಳು (30.04.2020)

ಬೈಕಂಪಾಡಿಗೆ ತಾತ್ಕಾಲಿಕವಾಗಿ ಸ್ಥಳಾಂತರಗೊಂಡ ಕೇಂದ್ರ ಮಾರುಕಟ್ಟೆಯಿಂದ ಅತಂತ್ರಗೊಂಡ ವ್ಯಾಪಾರಸ್ಥರು; ಸೂಕ್ತ ನಿರ್ಧಾರ ಕೈಗೊಳ್ಳುವುದಾಗಿ ಸಂಸದರಿಂದ ಭರವಸೆ



ಕೊರೋನಾ ವೈರಸ್ ನ್ನು ತಡೆಗಟ್ಟಲು ಹೇರಲಾದ ಲಾಕ್ ಡೌನ್ ನಿಂದಾಗಿ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವ ಸಲುವಾಗಿ ಜನದಟ್ಟಣೆಯಿಂದ ಪಾರಾಗಲು ನಗರದ ಹ್ರದಯ ಭಾಗದಲ್ಲಿದ್ದ ಕೇಂದ್ರ ಮಾರುಕಟ್ಟೆಯನ್ನು ತಾತ್ಕಾಲಿಕವಾಗಿ ಬೈಕಂಪಾಡಿಯ APMC ಯಾರ್ಡ್ ಗೆ ಸ್ಥಳಾಂತರಗೊಳಿಸಿದ ಜಿಲ್ಲಾಡಳಿತದ ಕ್ರಮದಿಂದಾಗಿ ಈಗಾಗಲೇ ಸಗಟು ಹಾಗೂ ಚಿಲ್ಲರೆ ವ್ಯಾಪಾರಸ್ಥರು ಭಾರೀ ಸಂಕಷ್ಟವನ್ನು ಅನುಭವಿಸುತ್ತಿದ್ದು, ಈ ಬಗ್ಗೆ ಸಂಸದರಾದ ನಳೀನ್ ಕುಮಾರ್ ಕಟೀಲುರವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ಸವಿವರವಾಗಿ ಚರ್ಚಿಸಲಾಯಿತು.

ಕೊರೋನಾ ವೈರಸ್ ನ ಗಂಭೀರತೆಯ ಹಿನ್ನೆಲೆಯಲ್ಲಿ ದ.ಕ. ಜಿಲ್ಲಾಧಿಕಾರಿಗಳು 2–04–2020 ರಿಂದ 14–04–2020 ರವರೆಗೆ ಕೇಂದ್ರ ಮಾರುಕಟ್ಟೆಯನ್ನು ಸಂಪುರ್ಣವಾಗಿ ಸ್ಥಗಿತಗೊಳಿಸಿ, ಇಡೀ ಕೇಂದ್ರ ಮಾರುಕಟ್ಟೆಯನ್ನು ತಾತ್ಕಾಲಿಕ ನೆಲೆಯಲ್ಲಿ ಬೈಕಂಪಾಡಿಯ APMC ಯಾರ್ಡ್ ಗೆ ಸ್ಥಳಾಂತರಿಸಬೇಕೆಂದು ಆದೇಶ ನೀಡಿದ್ದರು. ಆದರೆ ಅಲ್ಲಿ ಕನಿಷ್ಟ ಮೂಲಭೂತ ಸೌಕರ್ಯಗಳನ್ನು ಕೊಡದೆ, ಧೂಳಿನಿಂದ ತುಂಬಿದ ಆ ಜಾಗದಲ್ಲಿ ಜನಸಾಮಾನ್ಯರು ತಿನ್ನುವ ಆಹಾರ ಪದಾರ್ಥಗಳಾದ ತರಕಾರಿ, ಹಣ್ಣು ಹಂಪಲುಗಳನ್ನು ಮಾರಾಟ ಮಾಡಬೇಕಾದ ದುಸ್ಥಿತಿ ಬಂದೊದಗಿತ್ತು. ಈ ಬಗ್ಗೆ ಕೇಂದ್ರ ಮಾರುಕಟ್ಟೆ ವ್ಯಾಪಾರಸ್ಥರ ಸಂಘದ ಉನ್ನ ಮಟ್ಟದ ನಿಯೋಗವೊಂದು ಮಾನ್ಯ ಜಿಲ್ಲಾಧಿಕಾರಿಗಳನ್ನು, ಮನಪಾ ಆಯುಕ್ತರನ್ನು, ಸಂಸದರನ್ನು, ಶಾಸಕರನ್ನು, ಮೇಯರ್ ರವರನ್ನು ಮುಖತಃ ಭೇಟಿಯಾಗಿ ತಮ್ಮ ಅಹವಾಲನ್ನು ಮುಂದಿಟ್ಟಿತು.

ಈ ಬಗ್ಗೆ ಜಿಲ್ಲಾಡಳಿತ ಕೂಡಲೇ ಸ್ಪಂದಿಸಿ,ಮಾನ್ಯ ಸಂಸದರ ಸಮಕ್ಷಮದಲ್ಲಿ ಬೈಕಂಪಾಡಿಯ APMC ಸಭಾಂಗಣದಲ್ಲಿ ಸಭೆಯನ್ನು ಆಯೋಜಿಸಲಾಯಿತು.

ಸಭೆಯಲ್ಲಿ ಮಾತನಾಡಿದ CITU ದ.ಕ. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ರವರು, "ಜಿಲ್ಲೆಯ ಆರ್ಥಿಕತೆಯ ಜೀವನಾಡಿಯಾದ ಕೇಂದ್ರ ಮಾರುಕಟ್ಟೆಯನ್ನು ಲಾಕ್ ಡೌನ್ ಹೆಸರಿನಲ್ಲಿ ಏಕಾಏಕಿಯಾಗಿ ಯಾವುದೇ ಮೂಲಭೂತ ಸೌಕರ್ಯಗಳನ್ನು ಒದಗಿಸದೆ ಬೈಕಂಪಾಡಿಗೆ ಸ್ಥಳಾಂತರಗೊಳಿಸಿರುವುದು ಸರ್ವಥಾ ಸರಿಯಿಲ್ಲ. ಇದರಿಂದಾಗಿ ಸಗಟು ಹಾಗೂ ಚಿಲ್ಲರೆ ವ್ಯಾಪಾರಸ್ಥರು ಭಾರೀ ಸಂಕಷ್ಟವನ್ನು ಅನುಭವಿಸುತ್ತಿದ್ದಾರೆ. ಮಾತ್ರವಲ್ಲದೆ ಅಲ್ಲಿನ ಕೂಲಿ ಕಾರ್ಮಿಕರ ಬವಣೆಯನ್ನಂತೂ ಹೇಳತೀರದಾಗಿದೆ. ಇಂತಹ ಸಂಧರ್ಭದಲ್ಲಿ ಕೇಂದ್ರ ಮಾರುಕಟ್ಟೆಯನ್ನು ನಗರದ ಹ್ರದಯ ಭಾಗದಲ್ಲಿ ಅಥವಾ ನಗರದ ಸುತ್ತಮುತ್ತ ಸಾಕಷ್ಟು ಸ್ಥಳದ ಅವಕಾಶಗಳಿದ್ದು, ಇಲ್ಲಿಯೇ ಪ್ರಾರಂಭಿಸಬೇಕೆಂದು" ಒತ್ತಾಯಿಸಿದರು.

ಸಭೆಯಲ್ಲಿ ಭಾಗವಹಿಸಿದ ಶಾಸಕರುಗಳಾದ ಡಿ. ವೇದವ್ಯಾಸ್ ಕಾಮತ್, ಡಾ. ಭರತ್ ಶೆಟ್ಟಿ, ಮೇಯರ್ ದಿವಾಕರ್, APMC ಅಧ್ಯಕ್ಷರಾದ ಪ್ರವೀಣ್ ಕುಮಾರ್ ರವರು "ತಮ್ಮ ಅಭಿಪ್ರಾಯಗಳನ್ನು ಮಂಡಿಸಿ, ವ್ಯಾಪಾರಸ್ಥರಿಗೆ ಯಾವುದೇ ರೀತಿಯಲ್ಲಿ ತೊಂದರೆಯಾಗದೆ,ಸಗಟು ಹಾಗೂ ಚಿಲ್ಲರೆ ವ್ಯಾಪಾರಸ್ಥರ ಹಿತಾಸಕ್ತಿಗಳನ್ನು ಕಾಪಾಡುವುದಾಗಿ" ಭರವಸೆ ನೀಡಿದರು.

ಸಭೆಯ ಅಧ್ಯಕ್ಷತೆ ವಹಿಸಿದ ಸಂಸದರಾದ ನಳೀನ್ ಕುಮಾರ್ ಕಟೀಲು ರವರು ಮಾತನಾಡುತ್ತಾ, "ಕೇಂದ್ರ ಮಾರುಕಟ್ಟೆಯ ವ್ಯಾಪಾರಸ್ಥರು ಜಿಲ್ಲೆಯ ಆರ್ಥಿಕತೆಗೆ ಹೆಚ್ಚಿನ ಪ್ರಾಧ್ಯಾನ್ಯತೆ ನೀಡುತ್ತಿದ್ದು, ಯಾವುದೇ ಕಾರಣಕ್ಕೂ ತೊಂದರೆಯಾಗಲು ಬಿಡುವುದಿಲ್ಲ. 4–5 ದಿನಗಳೊಳಗೆ ಸಂಬಂಧಪಟ್ಟ ಇತರ ಅಧಿಕಾರಿಗಳೊಂದಿಗೆ ಚರ್ಚಿಸಿ, ಬಳಿಕ ವ್ಯಾಪಾರಸ್ಥರೊಂದಿಗೆ ಇನ್ನೊಂದು ಸುತ್ತಿನ ಮಾತುಕತೆ ನಡೆಸುವುದಾಗಿ" ಭರವಸೆಯನ್ನು ನೀಡಿದರು.

ಸಭೆಯಲ್ಲಿ ಕೇಂದ್ರ ಮಾರುಕಟ್ಟೆ ವ್ಯಾಪಾರಸ್ಥರ ಸಂಘದ ಅಧ್ಯಕ್ಷರಾದ ಮುಸ್ತಫಾ ಕುಂಞ, ಪ್ರಧಾನ ಕಾರ್ಯದರ್ಶಿ ಗಳಾದ ಜನಾರ್ದನ ಸಾಲ್ಯಾನ್, ಇತರ ಪದಾಧಿಕಾರಿಗಳಾದ ಅನಿಲ್ ಕುಮಾರ್, ಎ.ಜೆ. ಶೇಖರ್, ಬಿ.ಎಂ. ಮೊಯಿದಿನ್, ಚೆರಿಯೋನು, ಕಲಾಂ, ಹನೀಫ್ ಹಾಜಿ, ಬಿ.ಎಚ್.ಹಮೀದ್, APMC ಸದಸ್ಯರಾದ ಕ್ರಷ್ಣರಾಜ ಹೆಗ್ಡೆ, ರಾಘವ ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು

ಮುಸ್ತಫಾ ಕುಂಞ

ರಾಜ್ಯದ ರೈತರು, ಕೃಷಿ ಕೂಲಿಕಾರರು ಮತ್ತು ಗ್ರಾಮೀಣಾ ಕಸುಬುದಾರರ ಈ ಕೆಳಗಿನ ಬೇಡಿಕೆಗಳನ್ನು ತುರ್ತಾಗಿ ಈಡೇರಿಸಬೇಕೆಂದು ಆಗ್ರಹಿಸಿ

ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪನವರು
ಮುಖ್ಯಮಂತ್ರಿಗಳು,

ಮಾನ್ಯರೇ,

ಕೊರೊನಾ ರೋಗದ ಆಕ್ರಮಣದಿಂದ ನಮ್ಮ ಆರ್ಥಿಕತೆಯ ಭಾಗವಾಗಿ ಗ್ರಾಮೀಣಾ ಆರ್ಥಿಕತೆಯು ಸಂಪೂರ್ಣವಾಗಿ ನೆಲಕಚ್ಚಿದೆ. ಇದನ್ನು ಪುನರ್‌ಚೇತನಗೊಳಿಸಲು ಸಾಕಷ್ಟು ಸಮಯವೇ ಬೇಕಾಗುತ್ತದೆ. ರಾಜ್ಯದಲ್ಲಿ ಕೆಲವು ಪ್ರದೇಶಗಳಲ್ಲಿ ಮಳೆ ಶುರುವಾಗಿದೆ. ಈ ಸಾಲಿನ ಮುಂಗಾರು ಉತ್ತಮವಾಗಿರಲಿದೆಯೆಂಬ ವರದಿಗಳು ಬರುತ್ತಿವೆ. ಆದರೆ ಕೃಷಿಯನ್ನೇ ನಂಬಿ ಬದುಕನ್ನು ಸಾಗಿಸುವ ರೈತರು, ಕೃಷಿ ಕೂಲಿಕಾರರು ಹಾಗು ಗ್ರಾಮೀಣಾ ಕಸುಬುದಾರರು ತುಂಬಾ ಚಿಂತಾಕ್ರಾಂತರಾಗಿದ್ದಾರೆ. ಸದ್ಯ ಇರುವ ಬೆಳೆ ಮಾರಾಟವಾಗದೇ ರೈತರ ಸಾಲದ ಹೊರೆ ಹೆಚ್ಚಾಗುತ್ತಿದೆ. ಕೂಲಿಕಾರರಿಗೆ ಕೆಲಸವಿಲ್ಲ. ಇದರ ಫಲವಾಗಿ ಕಸುಬುದಾರನೂ ಅನಾಥ. ಗ್ರಾಮೀಣಾ ಪ್ರದೇಶದ ದೊಡ್ಡ ಸಂಖ್ಯೆಯ ಕುಟುಂಬಗಳು, ನಗರಗಳಲ್ಲಿ ತಮ್ಮ ಕುಟುಂಬದ ಸದಸ್ಯರು ಸಂಪಾದನೆ ಮಾಡುವ ಕೂಲಿ ಇಲ್ಲವೇ ಸಂಬಳಗಳಿಂದ ಬರುವ ಅದಾಯವನ್ನೇ ನೆಚ್ಚಿ ಜೀವನ ಮಾಡುವವರು ಇದ್ದಾರೆ. ಈಗ ನಗರದಿಂದ ಬರುವ ಅದಾಯವೂ ಇಲ್ಲ, ಕೂಲಿಯ ಕೆಲಸವೂ ಇಲ್ಲ, ಸಾಲದ ಹೊರೆ ಹೆಚ್ಚಳವಾಗಿ, ಮುಂದಿನ ಜೀವನ ಹೇಗೆ ಎಂಬುದೇ ಬೃಹತ್ ಸಮಸ್ಯೆಯಾಗಿ ಗ್ರಾಮೀಣಾ ಜನತೆಯನ್ನು ಕಾಡುತ್ತಿದೆ.

ಹಿಂದೆಂದೂ ಕಂಡರಿಯದ ಇಂತಹ ಸನ್ನಿವೇಶದಲ್ಲಿ ಕೃಷಿಯಲ್ಲಿ ತೊಡಗಿರುವ ರೈತರು, ಕೃಷಿ ಕೂಲಿಕಾರರು ಹಾಗು ಗ್ರಾಮೀಣಾ ಕಸುಬುದಾರರ ನೆರವಿಗೆ ದಾವಿಸಬೇಕಿರುವುದು ಯಾವುದೇ ನಾಗರೀಕ ಸರ್ಕಾರಗಳ ಅದ್ಯ ಕರ್ತವ್ಯವಾಗಿದೆ. ಈ ಹಿನ್ನೆಲೆಯಲ್ಲಿ ಈ ಬೇಡಿಕೆಗಳನ್ನು ಈಡೇರಿಸಲು ತುರ್ತಾಗಿ ಕ್ರಮಗಳನ್ನು ಕೈಗೊಳ್ಳಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘ (ಏಕಖಿಖ) ರಾಜ್ಯ ಸಮಿತಿಯು ರಾಜ್ಯ ಸರ್ಕಾರವನ್ನು ಆಗ್ರಹಿಸುತ್ತದೆ.

ಪ್ರಮುಖ ಬೇಡಿಕೆಗಳು:

1. **ರೇಷನ್ ಪ್ರಶ್ನೆ:**
   ಬಡತನ, ನಿರುದ್ಯೋಗ, ಹಸಿವು ತಾಂಡವಾಡುತ್ತಿರುವ ಈ ಸಂದರ್ಭದಲ್ಲಿಯಾದರೂ ಯಥೇಚ್ಚವಾಗಿ ಗೋದಾಮುಗಳಲ್ಲಿ ಇರುವ ಆಹಾರ ಪದಾರ್ಥಗಳನ್ನು ಬಿ.ಪಿ.ಎಲ್., ಎ.ಪಿ.ಎಲ್. ಎನ್ನುವ ತಾರತಮ್ಯವಿಲ್ಲದೆ ಕನಿಷ್ಠ ಆರು ತಿಂಗಳೂ ಮಾಸಿಕ ಪ್ರತಿ ಕುಟುಂಬಕ್ಕೆ 15 ಕೆ.ಜಿ. ರೇಷನ್‌ನ್ನು ನೀಡಬೇಕು. ಅಕ್ಕಿಯ ಜೊತೆಗೆ ಬೇಳೆ, ಎಣ್ಣೆ, ಸಕ್ಕರೆ, ಉಪ್ಪು ಇತ್ಯಾದಿ ಸಾಮಾಗ್ರಿಗಳನ್ನು ನೀಡಬೇಕು.
2. **ಭತ್ತ ಮತ್ತಿತರೆ ಕೃಷಿ ಉತ್ಪನ್ನಗಳನ್ನು ಬೆಂಬಲ ಬೆಲೆಗೆ ಖರೀದಿಯಾಗಬೇಕು :**
   ಕೇಂದ್ರ ಸರ್ಕಾರ ಘೋಷಣೆ ಮಾಡಿರುವ ಬೆಂಬಲ ಬೆಲೆಯ ಜೊತೆಗೆ ಹಿಂದಿನ ರಾಜ್ಯ ಸರ್ಕಾರಗಳ ರೀತಿಯಲ್ಲಿ ಹೆಚ್ಚಿನ ಪ್ರೋತ್ಸಹ ದನವನ್ನು ನೀಡಿ ಭತ್ತ, ಇತ್ಯಾದಿ ಕೃಷಿ ಉತ್ಪನ್ನಗಳನ್ನು ಖರೀದಿ ಮಾಡಬೇಕು. ಅಗತ್ಯವಿರುವ ಕೂಡಲೇ ಖರೀದಿ ಕೇಂದ್ರಗಳನ್ನು ಆರಂಭಿಸಬೇಕು.
3. **ತರಕಾರಿ, ಹಣ್ಣು ಇತ್ಯಾದಿ ಕೃಷಿ ಉತ್ಪನ್ನಗಳಿಗೆ ಟೋಲ್ ಪ್ರೀ, ಉಚಿತ ಸಾಗಣಿಕೆ ವೆಚ್ಚ ಹಾಗೂ ಮಾರುಕಟ್ಟೆ ಶುಲ್ಕ ವಿನಾಯಿತಿ ನೀಡಬೇಕು:**
   ರಾಜ್ಯದ ಕೃಷಿ ಮಾರುಕಟ್ಟೆಗಳಿಗೆ ರೈತರು ತರುತ್ತಿರುವ ತರಕಾರಿ, ಹಣ್ಣು ಇತ್ಯಾದಿ ಕೃಷಿ ಉತ್ಪನ್ನಗಳನ್ನು ಸಾಗಿಸುವ ವಾಹನಗಳಿಗೆ ಟೋಲ್ ಶುಲ್ಕ, ಮಾರುಕಟ್ಟೆ ಶುಲ್ಕಗಳಿಂದ ವಿನಾಯಿತಿ ನೀಡಬೇಕು. ಬೆಲೆ ಕುಸಿತದಿಂದ ದಿಕೆಟ್ಟಿರುವ ರೈತ ಮಾರುಕಟ್ಟೆಗೆ ಸಾಗಾಣಿಕೆ ವೆಚ್ಚವನ್ನು ರಾಜ್ಯ ಸರ್ಕಾರವೇ ಭರಿಸಬೇಕು.
4. ಎಲ್ಲಾ ರೈತರು, ಕೃಷಿ ಕೂಲಿಕಾರರು ಹಾಗೂ ಗ್ರಾಮೀಣಾ ಕಸುಬುದಾರರ ಕುಟುಂಬಗಳಿಗೆ ಕನಿಷ್ಟ 10,000 ರೂ. ನೆರವು ನೀಡಬೇಕು :
   ಸಂಕಷ್ಟದಲ್ಲಿರುವ ರೈತ, ತನ್ನ ಮುಂದಿನ ಕೃಷಿಯನ್ನು ನಡೆಸಲು ಸಹಾಯವಾಗಲು ಪ್ರತಿ ಕುಟುಂಬಕ್ಕೆ ಕನಿಷ್ಠ 10,000 ರೂ. ಗಳನ್ನು ನೆರವು ನೀಡಬೇಕು. ಇದೇ ರೀತಿಯಲ್ಲಿ ಕೃಷಿ ಕೂಲಿಕಾರರು ಹಾಗೂ ಗ್ರಾಮೀಣ ಕಸುಬುದಾರರಿಗೂ ನೀಡಬೇಕು.



5. **ಉದ್ಯೋಗ ಖಾತರಿ ಯೋಜನೆಯ ಜಾರಿಯ ಬಗ್ಗೆ:**
   ಕೃಷಿ ಕೂಲಿಕಾರರಿಗೆ ಹೆಚ್ಚು ಹೆಚ್ಚು ಕೂಲಿ ದಿನಗಳು ಸಿಗುವ ರೀತಿಯ ಕಾಮಗಾರಿಗಳನ್ನು, ಕೃಷಿ ಕೆಲಸಗಳನ್ನು ಯೋಜನೆಯ ವ್ಯಾಪ್ತಿಗೆ ಸೇರ್ಪಡೆ ಮಾಡಬೇಕು. ದಿನಗಳ ಗರಿಷ್ಠ ಮಿತಿಯನ್ನು ತೆಗೆಯಬೇಕು ಹಾಗು ಕೂಲಿಯನ್ನು 700–00 ರೂ. ಗೆ ಏರಿಸಬೇಕು.
6. **ಕೃಷಿ ಸಾಲದ ಮತ್ತು ಬಡ್ಡಿ ರಹಿತ ಕೃಷಿ ಸಾಲದ ವಿಸ್ತರಣೆಯ ಬಗ್ಗೆ :**
   'ರಾಜ್ಯ ಮಟ್ಟದ ಬ್ಯಾಂಕ್‌ರ್ಸ್ ಸಮಿತಿ'ಯ ಸಭೆಯನ್ನು ಕೂಡಲೇ ಕರೆದು, ಈ ಸಾಲಿನಲ್ಲಿ ಕೃಷಿಗೆ ನೀಡುವ ಸಾಲದ ಮೊತ್ತವನ್ನು ದುಪಟ್ಟು ಮಾಡಬೇಕು. ಅಲ್ಲದೆ ಸಾಲ ಪಡೆಯುವವರ ಸಂಖ್ಯೆಯನ್ನು ದುಪ್ಪಟ್ಟು ಮಾಡಬೇಕು. ಈ ಹೊಸ ಸಾಲಗಳು ವಿಶೇಷವಾಗಿ ಸಣ್ಣ, ಅತಿಸಣ್ಣ ರೈತರು ಮತ್ತು ಕೃಷಿ ಕೂಲಿಕಾರರಿಗೆ ಹೆಚ್ಚು ಸಿಗುವಂತೆ ಕ್ರಮ ವಹಿಸಬೇಕು.
   ಇನ್ನೂ ಮುಖ್ಯವಾಗಿ ಸಹಕಾರಿ ಕ್ಷೇತ್ರದಲ್ಲಿ ಇರುವಂತೆ 3 ಲಕ್ಷ ರೂ. ವರೆಗೆ ಬಡ್ಡಿ ರಹಿತ ಸಾಲಗಳನ್ನು ಸಾರ್ವಜನಿಕ ಕ್ಷೇತ್ರದ ಬ್ಯಾಂಕ್‌ಗಳಲ್ಲಿ ನೀಡಲು ರಾಜ್ಯ ಸರ್ಕಾರ ವಿಶೇಷ ಯೋಜನೆಯನ್ನು ಘೋಷಣೆ ಮಾಡಬೇಕು.
7. ರೇಷನ್ ಅಂಗಡಿ, ಹಾಲು ಉತ್ಪಾದಕರ ಸಂಘ ಮತ್ತಿತರೆ ಸಹಕಾರಿ ಸಂಸ್ಥೆಗಳ ಮೂಲಕ ರಸಗೊಬ್ಬರ, ಕೀಟನಾಶಕಗಳನ್ನು ಸರಬರಾಜು ಮಾಡುವ ಬಗ್ಗೆ:
   ಸಂಕಷ್ಟದಲ್ಲಿರುವ ಕೃಷಿಕರಿಗೆ ಸಹಾಯ ಮಾಡುವ ಹಾಗು ಸಕಾಲಕ್ಕೆ ರಸಗೊಬ್ಬರ, ಕೀಟನಾಶಕಗಳು ಸರಬರಾಜು ಮಾಡುವ ಉದ್ದೇಶದಿಂದಮುಂಗಾರಿಗೆಮುಂಚಿತವಾಗಿಯೇ ಗ್ರಾಮೀಣ ಪ್ರದೇಶಗಳ ರೇಷನ್ ಅಂಗಡಿ, ಹಾಲು ಉತ್ಪಾದಕರ ಸಂಘಗಳು ಮತ್ತಿತರೆ ಸಹಕಾರಿ ಸಂಸ್ಥೆಗಳ ಮೂಲಕ ಮಾರಾಟದ ವ್ಯವಸ್ಥೆನ್ನು ಮಾಡಬೇಕೆಂದು ಕೋರುತ್ತೇವೆ.

ಮಾನ್ಯರೇ,

ಸಂಕಷ್ಟದಲ್ಲಿರುವ ಕೃಷಿಕರಿಗೆ ಸ್ವಲ್ಪ ಮಟ್ಟಿಗೆಯಾದರೂ ಸಹಾಯ ಮಾಡುವ ಉದ್ದೇಶದಿಂದ ಈ ಎಲ್ಲಾ ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯ ಮಾಡುವ ಸಂದರ್ಭದಲ್ಲಿಯೇ ಇದಕ್ಕಾಗಿ ಕೇಂದ್ರ ಸರ್ಕಾರದಿಂದ ಅಗತ್ಯವಿರುವ ನೆರವನ್ನು ಪಡೆಯಲು ತಾವೂ ಎಲ್ಲಾ ರೀತಿಯ ಪ್ರಯತ್ನಗಳನ್ನು ನಡೆಸಬೇಕೆಂದು ಆಗ್ರಹಿಸುತ್ತೇವೆ.

ಜಿ.ಸಿ.ಬಯ್ಯಾರೆಡ್ಡಿ ಅಧ್ಯಕ್ಷರು, ಯು. ಬಸವರಾಜ ಪ್ರಧಾನ ಕಾರ್ಯದರ್ಶಿ (28.08.2020)

ಕೋವಿಡ್ 19: ಹೆಚ್ಚಿದ ಗ್ರಾಮೀಣ ಯಾತನೆ

ಕೋವಿಡ್ 19 ರಿಂದಾಗಿ ಗ್ರಾಮೀಣ ಪ್ರದೇಶಗಳಲ್ಲಿ ಜನರ ಗೋಳು ಹೆಚ್ಚಿರುವುದನ್ನು 'ಫ್ರಂಟ್ ಲೈನ್' ಪತ್ರಿಕೆಯ ನೆಲಮಟ್ಟದ ಸಮೀಕ್ಷೆ ವರದಿ ಮಾಡಿದೆ. ಏಪ್ರಿಲ್ 15 ರಿಂದ 18 ರ ವರೆಗೆ ಕಾರ್ಷಕ ಅಧ್ಯಯನ ಪ್ರತಿಷ್ಟಾನ (ಎಫ್‌ಎಎಸ್) ಈ ಸಮೀಕ್ಷೆ ಯನ್ನು ನಡೆಸಿತ್ತು. ಕರ್ನಾಟಕವೂ ಸೇರಿ ಹಲವು ರಾಜ್ಯಗಳ ದೊಡ್ಡ ಜಮೀನುದಾರರು, ಆಶಾ ಕಾರ್ಯಕರ್ತರು, ಕೃಷಿ ಮತ್ತು ಇತರ ಕೂಲಿಕಾರರು, ದೊಡ್ಡ ಮತ್ತು ಸಣ್ಣ ವ್ಯಾಪಾರಿಗಳಲ್ಲಿ ಮತ್ತು ಕೃಷಿಯೆತರ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವ ವ್ಯಕ್ತಿಗಳನ್ನು ಈ ಸಮೀಕ್ಷೆ ಒಳಗೊಂಡಿತ್ತು. ಮೂರು ವಾರಗಳ ದಿಗ್ಭಂಧನ (ಲಾಕ್ ಡೌನ್) ಗ್ರಾಮೀಣ ಜನರ ಕೆಲಸ ಮತ್ತು ಆರ್ಥಿಕ ಪರಿಸ್ಥಿತಿಯ ಮೇಲೆ ಎಂಥ ಪರಿಣಾಮ ಬೀರಿದೆ ಎಂಬುದರ ಬಗೆಗೆ ಸಮೀಕ್ಷೆಯ ಪ್ರಶ್ನೆಗಳಾದ್ದವು. ಸಮೀಕ್ಷೆ ಕರ್ನಾಟಕ ಸೇರಿ 10 ರಾಜ್ಯಗಳ 21 ಹಳ್ಳಿಗಳ 43 ಜನರೊಡನೆ ದೂರವಾಣಿಯ ಮೂಲಕ ಮಾತನಾಡಿ ಪಡೆದ ಪ್ರತಿಕ್ರಿಯೆಗಳ ವಿಶ್ಲೇಷಣೆಯನ್ನು ಈ ಮುಂದೆ ಕೊಡಲಾಗಿದೆ:



ಸಂಗ್ರಹಾನುವಾದ: ಸುಬ್ರಮಣ್ಯ ಗುಡಿಗೆ

ಗ್ರಾಮೀಣ ಪ್ರದೇಶಗಳಲ್ಲಿ ನಾಗರಿಕ ಮತ್ತು ಸಾಮಾಜಿಕ ಸೌಲಭ್ಯಗಳ ಒಟ್ಟಾರೆ ಕೊರತೆ ಎಂದಿನಿಂದಲೂ ಇದೆ ಮತ್ತು ಅದು ಸಾಮಾಜಿಕ ಆರ್ಥಿಕ ಅಸಮಾನತೆಗಳನ್ನು ಪೊರೆದಿದೆ ಎಂಬುದು ಗೊತ್ತಿರುವ ವಿಷಯ. ವರ್ಗ, ಜಾತಿ ಮತ್ತು ಲಿಂಗ ಅಸಮಾನತೆಗಳು ಸಹಜ ದಿನಗಳಲ್ಲೂ ಇದ್ದು ಬಹುತೇಕ ಗ್ರಾಮೀಣ ವಾಸಿಗಳಿಗೆ ಅಭಾವ ಸ್ಥಿತಿ ಉಂಟು ಮಾಡುತ್ತದೆ ಎಂಬುದು ವಾಸ್ತವ. ಇಂತಹ ಹೀನ ತಳಹದಿಯ ಮೇಲೆ ದಿಗ್ಬಂಧನ ದೊಡ್ಡ ಹೊಡೆತ ನೀಡಿದೆ. ಕೋವಿಡ್ 19 ರಂತಹ ಮಾರಿಯನ್ನು ಮಣಿಸಲು ದಿಗ್ಬಂಧನ ಅವಶ್ಯವಾಗಿತ್ತು ಎಂಬುದು ನಿಜ. ಆದರೆ ಇಂತಹ ಕ್ರಮ ತಡೆದುಕೊಳ್ಳುವ ಸಾಮರ್ಥ್ಯವಿಲ್ಲದ ಜನವಿಭಾಗಗಳ ಮೇಲೆ ಅತೀವ ದೊಡ್ಡ ಹೊಡೆತ ನೀಡಿದೆ ಎಂಬುದೂ ಅಷ್ಟೇ ನಿಜ.

ಸಮೀಕ್ಷೆಯಲ್ಲಿ ಕೆಳಗಿನ ಮೂರು ತರಹದ ಪ್ರಶ್ನೆಗಳಿದ್ದವು:

1. ಕೋವಿಡ್ 19 ಮಹಾಮಾರಿಯ ಬಗೆಗಿನ ತಿಳುವಳಿಕೆ ಮತ್ತು ಪರಿಸ್ಥಿತಿಯ ಸವಾಲುಗಳನ್ನು ನಿಭಾಯಿಸಲು ಬೇಕಾಗುವ ಮೂಲ ಸೌಕರ್ಯಗಳ ಲಭ್ಯತೆ
2. ದಿಗ್ಬಂಧನದ ಸಮಯದಲ್ಲಿ ಕುಟುಂಬಗಳ ಮೂಲಭೂತ ಆವಶ್ಯಕತೆಗಳನ್ನು ಹೇಗೆ ಪಡೆದುಕೊಳ್ಳಲಾಗುತ್ತಿದೆ ಎಂಬುದರ ಬಗೆಗೆ
3. ಕುಟುಂಬಗಳ ವರಮಾನ ಮತ್ತು ಉದ್ಯೋಗಗಳ ಬಗೆಗೆ ಸಂಬಂದಿಸಿದ್ದು. ಕಳೆದುಕೊಂಡ ಉದ್ಯೋಗಗಳು ಮತ್ತು ಅದರ ಕಾರಣಗಳು. ಪರಿಣಾಮವಾಗಿ ಕಳೆದುಹೋದ ವರಮಾನಗಳು ಎಷ್ಟು ಎಂಬುದು.

i. ಮೊದಲನೆಯದಾಗಿ, ಕೋವಿಡ್ 19 ಮಹಾಮಾರಿ ಮತ್ತು ದಿಗ್ಬಂಧನದ ಬಗೆಗೆ ಬಹುತೇಕ ಪ್ರಾಥಮಿಕ ಮಾಹಿತಿ ಟಿವಿ, ಅಂತರಜಾಲ ಮತ್ತು ಸಾಮಾಜಿಕ ಜಾಲತಾಣಗಳ ಮೂಲಕ ಬಂದಿತು. ಸ್ವಲ್ಪ ಮಟ್ಟಿಗೆ ಅದು ಪಂಚಾಯತಿ ಗಳು ಮತ್ತು ಆಶಾ ಕಾರ್ಯಕರ್ತೆಯರ ಮೂಲಕವೂ ಬಂದಿತು.

ii. ಸಾಮಾಜಿಕ ಅಂತರ ಕಾಯಿದುಕೊಳ್ಳುವುದು, ಮುಖಗವಸು ಬಳಸುವುದು, ಕೈಗಳ ಸ್ವಚ್ಛತೆ, ಕಾಯಿಲೆಯ ಲಕ್ಷಣಗಳ ಬಗೆಗೆ ವ್ಯಾಪಕ ತಿಳುವಳಿಕೆ ಇರುವಂತೆ ಕಂಡುಬಂದರೂ ಕೆಲವರು ಕೈತೊಳೆಯಲು ಮರಳು ಅಥವಾ ಮಣ್ಣನ್ನು ಉಪಯೋಗಿಸುತ್ತೇವೆ ಎಂದರು! ಸಾಮಾಜಿಕ ಅಂತರದ ಬಗೆಗೆ ತಿಳುವಳಿಕೆ ಇದ್ದರೂ ಹಲವು ಅನೌಪಚಾರಿಕ ಸಾಮಾಜಿಕ ಕಾರ್ಯಕ್ರಮಗಳು ನಡೆದರೂ ವರದಿಯಾಗಿಲ್ಲ.

iii. ಈ ಮಹಾಮಾರಿಯನ್ನು ಎದುರಿಸುವಲ್ಲಿ ಆರೋಗ್ಯ ವ್ಯವಸ್ಥೆಯ ಸಾಂಸ್ಥಿಕ ತಯಾರಿ ಎಲ್ಲ ಕಡೆ ಒಂದೇ ರೀತಿಯಲ್ಲಿ ಇರುವಂತೆ ಕಾಣುವುದಿಲ್ಲ. ದೇಶಾದ್ಯಂತ ಪ್ರಶ್ನೆ ಮಾಡಿದ ಹಳ್ಳಿಗರಲ್ಲಿ ಕರ್ನಾಟಕ, ಮಹಾರಾಷ್ಟ್ರ, ಮಧ್ಯ ಪ್ರದೇಶ, ಪಂಜಾಬ್, ತ್ರಿಪುರ, ಬಿಹಾರ ಮತ್ತು ಪಶ್ಚಿಮ ಬಂಗಾಲದವರು ತಮ್ಮ ಹಳ್ಳಿಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವೇ ಇಲ್ಲವೆಂದರು. ಆಂಬ್ಯುಲೆನ್ಸ್ ನಂತಹ ತುರ್ತು ಸೇವೆಗಳು ಲಭ್ಯವಿಲ್ಲದೆ ಇರುವುದೂ ತಿಳಿದು ಬಂತು.

ಉದ್ಯೋಗ, ವರಮಾನ ಇತ್ಯಾದಿ:

ನೀರಾವರಿ ಇಲ್ಲದ ಪ್ರದೇಶಗಳಲ್ಲಿ ಬೆಳೆ ಸಂಬಂದಿತ ಕೆಲಸಗಳು ಅಷ್ಟೇನೂ ಇಲ್ಲವಾದ್ದರಿಂದ ಪರಿಣಾಮಗಳು ಕಡಿಮೆ. ಕೋಲಾರದ ಸಿರೆಸಂದ್ರದಲ್ಲಿ ತರಕಾರಿ ಬೆಳೆಯುತ್ತಾರೆ. ದಿಗ್ಬಂಧನದ ಪರಿಣಾಮವಾಗಿ ಕೆಲಸಗಳು ಕಡಿಮೆಯಾಗಿವೆ. ಯಾಕೆಂದರೆ, ತರಕಾರಿಗಳಿಗೆ ಬೇಡಿಕೆ ಕಡಿಮೆಯಾಗಿದೆ. ಅಲ್ಲದೆ ಮನೆಯ ಜನರೇ ಕೆಲಸ ಮಾಡುವುದರಿಂದ ಬೇರೆಯವರಿಗೆ ಕೆಲಸವಿಲ್ಲ. ನೀರಾವರಿ ಇರುವಲ್ಲಿ ಈಗ ಬೆಳೆಯ ಹಂಗಾಮು. ಆದ್ದರಿಂದ ಕೆಲಸಗಳು ಅಪಾರ. ಹೀಗೆ ಬೆಳೆ ಕಟಾವಿಗೆ ಬಂದಿರುವಲ್ಲಿ ಈ ಸಾರಿ ಉದ್ಯೋಗದ ಭಾರೀ ಕಡಿತ ಕಂಡು ಬಂದಿದೆ. ಕೆಲಸ ಸಿಕ್ಕಿದರೂ ಸಂಬಳ ಕಡಿತವಾಗಿದೆ.

ಕಟ್ಟಡ ಕೆಲಸ, ಕಲ್ಲು ಗಣಿಗಾರಿಕೆ, ಇಟ್ಟಿಗೆ ಗೂಡಿನಂತಹ ಕೃಷಿಯೆತರ ಉದ್ಯೋಗಗಳು ಸಾಮಾನ್ಯವಾಗಿ ಕೃಷಿ ಕೂಲಿಕಾರರನ್ನು ಇಂತಹ ಸಮಯದಲ್ಲಿ ದೊಡ್ಡ ಪ್ರಮಾಣದಲ್ಲಿ ತೊಡಗಿಸಿಕೊಳ್ಳುತ್ತಿದ್ದವು. ಈ ಸಾರಿ ಇಂತಹ ಉದ್ಯೋಗಗಳೆ ಇಲ್ಲವಾಗಿವೆ.

ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ದಿನಗೂಲಿ ಉದ್ಯೋಗಗಳೆ? ಇಲ್ಲದಂತಾಗಿದೆ. ಇದಕ್ಕೆ ಒಂದೇ ಅಪವಾದವೆಂದರೆ ಮಹಾರಾಷ್ಟ್ರದ ವಾರ್ವತ್ ಖಂಡೇರಾವ್ ಗ್ರಾಮದಲ್ಲಿ ದಿಗ್ಬಂಧನದ ಸಮಯದಲ್ಲಿ ನರೇಗಾ ಕೆಲಸಗಳು ಮಿತ ಪ್ರಮಾಣದಲ್ಲಿ ನಡೆದವಂತೆ.



ಒಟ್ಟಾರೆ ಹೇಳುವುದಾದರೆ:

ಜಮೀನುದಾರರು ಮತ್ತು ಇತರೆ ವರಮಾನವಿರುವವರಿಗೆ ಈ ದಿಗ್ಬಂಧನ ತೀರ ಹೊರೆಯಾಗಲಿಲ್ಲ. ಆದರೆ ಒಂದೇ ವರಮಾನವಿರುವ ದಿನಗೂಲಿಗಳು ಮತ್ತು ಬಡ ಕೃಷಿಕರಿಗೆ ಇದು ದೊಡ್ಡ ಹೊಡೆತ ನೀಡಿತು. ಈ ಅವಧಿಯಲ್ಲಿ ಉದ್ಯೋಗ ಮತ್ತು ವರಮಾನದ ಕುಗ್ಗುವಿಕೆಯಿಂದ ಬಡ ಕುಟುಂಬಗಳ ಆಹಾರದ ಪೌಷ್ಟಿಕತೆಯ ಮೇಲೆ ಘೋರ ಪರಿಣಾಮ ಆಗಿದೆ. ಕಡಿಮೆ ವರಮಾನದ ಜೊತೆಗೆ ಆಹಾರ ಬೆಲೆ ಏರಿಕೆ ಸೇರಿ ದುರ್ಭಿಕ್ಷದಲ್ಲಿ ಅಧಿಕ ಮಾಸ ಎಂಬಂತ ಪರಿಸ್ಥಿತಿ ಉಂಟುಮಾಡಿದೆ. ಸಮೀಕ್ಷೆಯಲ್ಲಿ ಬಹಳ ಜನ ಕಡಿಮೆ ಮತ್ತು ಅದರಲ್ಲೂ ಕಡಿಮೆ ಗುಣಮಟ್ಟದ ಆಹಾರ ತಿನ್ನುತ್ತಿರುವುದಾಗಿ ಪ್ರತಿಕ್ರಿಯಿಸಿದ್ದಾರೆ.

ಇದೇ ಸಮಯದಲ್ಲಿ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಬಗ್ಗೆ ಮಿಶ್ರ ಪ್ರತಿಕ್ರಿಯೆ ದೊರೆತಿದೆ. ಕರ್ನಾಟಕ, ತಮಿಳು ನಾಡುಗಳಲ್ಲಿ ಕುಟುಂಬಕ್ಕೆ 5 ಕಿಲೋ ಅಕ್ಕಿ ದೊರೆತರೆ ಪ ಬಂಗಾಳದಲ್ಲಿ 2 ಕಿಲೋ ದೊರಕಿತು ಎಂದಿದ್ದಾರೆ. ಹಲವು ರಾಜ್ಯಗಳಲ್ಲಿ ದ್ವಿದಳ ಧಾನ್ಯಗಳನ್ನು ವಿತರಿಸಿಲ್ಲ. ಇದೇ ರೀತಿ ಊಟ ವಿತರಣೆ ಹಲವು ಕಡೆ ಆಗಿಲ್ಲ.

ಸಾಲಬಾಧೆ ಹೆಚ್ಚಳ:

ಇನ್ನೊಂದು ಘೋರ ಪರಿಣಾಮವೆಂದರೆ ಜನರ ಸಾಲದ ಹೊರೆ ಹೆಚ್ಚುತ್ತಿರುವುದು. ಬಹುತೇಕ ಸಾಲಗಳು ಖಾಸಗಿಯವರಿಂದ ಪಡೆದವುಗಳು. ಉದ್ಯೋಗವಿಲ್ಲದೆ ವರಮಾನವಿಲ್ಲ. ವರಮಾನವಿಲ್ಲದೆ ನಗದಿಲ್ಲ. ಆವಶ್ಯಕ ಸಾಮಾನುಗಳ ಖರೀದಿಗೆ ಹಣವಿಲ್ಲದವರು ಸಾಲವನ್ನು ಎಲ್ಲಿಂದ ತುಂಬಿಯಾರು? ಇನ್ನೂ ಹೆಚ್ಚು ಸಾಲದ ಬಲೆಗೆ ಬಿದ್ದಾರು.

ಸರ್ಕಾರಗಳ ಜವಾಬುದಾರಿ:


ಸಮೀಕ್ಷೆ ಸರ್ಕಾರಗಳ ಜನತೆಗೆ ನಗದು ಮತ್ತು ಆಹಾರ ವರ್ಗವಣೆಯ ಮೂಲಕ ಬೆಂಬಲ ನೀಡುವ ಅವಶ್ಯಕತೆಯನ್ನು ಎತ್ತಿ ತೋರಿಸುತ್ತದೆ. ಉದ್ಯೋಗ ಸೃಷ್ಟಿ ಮಾಡುವ ಮೂಲಕ ಈ ಬೆಂಬಲವನ್ನು ಗಟ್ಟಿಗೊಳಿಸಬೇಕು. ಈ ಮಹಾಮಾರಿಯ ವಿರುದ್ದದ ಹೋರಾಟದಲ್ಲಿ ಭೌತಿಕ ಅಂತರ ಕಾಯ್ದುಕೊಳ್ಳುವುದೂ ಮುಖ್ಯ.

ಕೇರಳದ ಪಿಣರಾಯಿ ಸರಕಾರಕ್ಕೆ ಮೋದಿಯತ್ತ ಕೈ ತೋರಿಸಿ ಜನರನ್ನು ಹಸಿವಿಗೆ ತಳ್ಳಿ ಕೈ ಎತ್ತ ಬಹುದಿತ್ತು. ಆದರೆ ಹೆಚ್ಚುವರಿ ಜವಾಬ್ದಾರಿ ಹೊತ್ತು ಪರಿಹಾರ ಬಿಡುಗಡೆ ಮಾಡಿದರು. ಇಂತಹ ಬಿಕ್ಕಟ್ಟಿನ ಸಂದರ್ಭದಲ್ಲಿ, ನಾಲ್ಕು ಕೋಟಿ ಜನರ ಬದುಕಿನ ಜವಾಬ್ದಾರಿ ಹೊತ್ತು ಸರಕಾರಿ ನೌಕರರ ತಿಂಗಳ ವೇತನದಲ್ಲಿ ಆರು ದಿನದ ವೇತನ ಕಡಿತ ಮಾಡುವುದು ಅಪರಾಧ ಅಲ್ಲ. ಸಾಧ್ಯ ಆದರೆ ಭಾಷಣದಲ್ಲೆ ಆಕಾಶ ತೋರಿಸುವ ಮೋದಿಗೆ ಹೇಳಿ ರಾಜ್ಯ ಸರಕಾರಗಳಿಗೆ ಹೆಚ್ಚುವರಿ ನಿಧಿ ಬಿಡುಗಡೆ ಮಾಡಿಸಿ ಮಿಸ್ಟರ್ ಬಿ ಎಲ್ ಸಂತೋಷ್. ಒಕ್ಕೂಟ ವ್ಯವಸ್ಥೆಯ ಅಡಿಯಲ್ಲಿ ರಾಜ್ಯ ಸರಕಾರ ಜನತೆಗಾಗಿ ಏನೆಲ್ಲಾ ಮಾಡಲು ಸಾಧ್ಯವೋ ಅದೆಲ್ಲವನ್ನೂ ಪಿಣರಾಯಿ ಸರಕಾರ ಮಾಡಿದೆ. ಮೋದಿಯ ಸರಕಾರದ ಹಾಗೆ ಕಳ್ಳ ಶ್ರೀಮಂತರ 68 ಸಾವಿರ ಕೋಟಿ ರೂಪಾಯಿ ಸಾಲವನ್ನು ಇಂತಹ ಸಂದರ್ಭದಲ್ಲಿಯೂ ಮನ್ನಾ ಮಾಡಿ, ಬಡವರಿಗೆ,ಜನ ಸಾಮಾನ್ಯರಿಗೆ ಹಿಡಿ ಅನ್ನ ನೀಡದ ಭಂಡತನ ಅಲ್ಲ ಪಿಣರಾಯಿ ಸರಕಾರದ್ದು. ಸಾಧ್ಯ ಆದರೆ ಬಿಜೆಪಿ ಆಡಳಿತ ಇರುವ ಕರ್ನಾಟಕ, ಗುಜರಾತ್ ,ಮಧ್ಯಪ್ರದೇಶಗಳ ಸ್ಥಿತಿ ಏನಾಗಿದೆ ಎಂದು ಮೊದಲು ನೋಡಿ. ಒಕ್ಕೂಟ ವ್ಯವಸ್ಥೆಯ ಅಡಿಯಲ್ಲಿ ಕೇಂದ್ರ ಸರಕಾರದ ಜವಾಬ್ದಾರಿಗಳು ಏನು ಎಂದು ಅರ್ಥ ಮಾಡಿಕೊಳ್ಳಿ. ಮೋದಿಯವರನ್ನು ಅಮೆರಿಕಾದ ವೈಟ್ ಹೌಸ್ ಟ್ವಿಟರ್ ನಲ್ಲಿ ಅನ್ ಫಾಲೊ ಮಾಡಿದ್ದೇಕೆ ಎಂದು ಹೇಳಿ, ಗಲ್ಫ್ ರಾಷ್ಟದಲ್ಲಿ ಅತಂತ್ರರಾಗಿರುವ ಲಕ್ಷಾಂತರ ಭಾರತೀಯರಿಗಾಗಿ ಕೇಂದ್ರ ಸರಕಾರದ ಯೋಜನೆ ಏನು ಎಂದು ವಿವರಿಸಿ. ರಾಜ್ಯ ಗಳ ನ್ಯಾಯಯುತ ಪಾಲು, ಇಂತಹ ಬಿಕ್ಕಟ್ಟಿನ ಸಂದರ್ಭ ನೀಡಬೇಕಾದ ವಿಶೇಷ ಅನುದಾನ ನೀಡಲಾಗಿದೆಯೆ ಎಂದು ವಿಚಾರಿಸಿ, ಯಡಿಯೂರಪ್ಪನವರಲ್ಲಿ ಈ ಕುರಿತು ತುಂಬಾ ಮಾಹಿತಿ ಇದೆ, ಮಾಹಿತಿಗಾಗಿ ಅವರನ್ನು ಸಂಪರ್ಕಿಸಿ. ಒಟ್ಟು ಕೊರೋನ ಬಿಕ್ಕಟ್ಟು ಎದುರಿಸಲು ಜಗತ್ತಿನ ವಿವಿಧ ದೇಶಗಳು ಜಿಡಿಪಿಯ ಎಷ್ಟು ಶೇಕಡಾ ಮೀಸಲಿಟ್ಟಿದೆ, ಮೋದಿ ಸರಕಾರ ಎಷ್ಟು ಮೀಸಲಿಟ್ಟಿದೆ ಎಂದು ಅರಿತು ಬಹಿರಂಗ ಪಡಿಸಿ. ಆ ಮೇಲೆ ಕೇರಳದ ಎಡ ಸರಕಾರದ ಕುರಿತು ಬೇಕಾದಷ್ಟು ಮಾತಾಡುವ ಸಂತೋಷ್ ಅವರೆ.

ಅಂದ ಹಾಗೆ ಬಿ ಎಲ್ ಸಂತೋಷ್ ಆದ ತಮ್ಮನ್ನು ಸಂತೋಷ್ ಜಿ ಎಂದು ಬಣ್ಣಿಸುವುದು ಏತಕ್ಕೆ ?

– ಮುನೀರ್ ಕಾಟಿಪಳ್ಳ

ಸಮಾಜವಾದಿ ಐಕ್ಯತೆ ಅಥವಾ ಬರ್ಬರತೆ–ಆಯ್ಕೆ ನಮ್ಮದು



ಪ್ರೊ. ವಿ.ಎನ್. ಲಕ್ಷ್ಮೀನಾರಾಯಣ

ನಾಲ್ಕನೆಯ ಘಟ್ಟದ ತಂತ್ರಜ್ಞಾನದ ಕ್ರಾಂತಿಯಲ್ಲಿ 'ಫಿಜಿಟಲೀಕರಣ' ಮನಸ್ಸುಳ್ಳ ಮನುಷ್ಯ ಜೀವಿಗಳು ಮತ್ತು ಜೀವವಿಲ್ಲದ ವಸ್ತುಗಳ ನಡುವೆ ಇರುವ ಭೇದವನ್ನು ತೊಡೆದುಹಾಕುತ್ತಿದೆ. ಡಿಜಿಟಲೀಕರಣವೇ ಜೀವನ–ಸಂಜೀವನವಾಗಿರುವ ಹೊಸ ಬಂಡವಾಳಶಾಹಿಯ ಈ ಜಗತ್ತಿನಲ್ಲಿ 'ವಾಹನಗಳೇ ಇಲ್ಲದ ವಾಹನ ಕಂಪೆನಿಗಳೂ', 'ರೂಮುಗಳೇ ಇಲ್ಲದ ಹೊಟೆಲ್ ಕಂಪೆನಿಗಳೂ', 'ಗೋಡೆಗಳೇ ಇಲ್ಲದ ಶಾಲಾ ಕೊಠಡಿಗಳೂ' ಹೀಗೆ ಇನ್ನೂ ಏನೇನೋ ಇಲ್ಲದ ಏನೇನೋ ಕಂಪೆನಿಗಳು ಈ ಹೊಸ ಪ್ಯಾರಡೈಮ್ ಷಿಫ್ಟ್‌ನಿಂದಾಗಿ ಸಾಧ್ಯವಾಗುತ್ತದೆ. ಜನರ 'ಮನುಷ್ಯತನ'ವನ್ನೇ ಅಳಿಸಿಹಾಕಿ ಡಿಜಿಟಲ್ ಐಡಿ, ಆಧಾರ ಸಂಖ್ಯೆ, ಪಾಸ್‌ವರ್ಡ್, ಹೆಬ್ಬೆಟ್ಟು ಗ್ಗುರುತು, ಪರೀಕ್ಷಿಸಿದ ಕಣ್ಣಿನಪಾಪೆಯ ಗುರುತು, ವಂಶವಾಹಿನಿಯ ಸರಪಳಿಯ ಗುರುತಿಗೆ ಮಾತ್ರ ಸಿಗುವ ಇ ಗಿರಾಕಿಗಳ ಸ್ಥಿತಿಗೆ ಇಳಿಸಲಾಗುತ್ತಿದೆ.

ಡಿಜಿಟಲೀಕರಣದ ವರ್ಚುಯಲ್ ಭಾರತದಲ್ಲಿ ಈ ಎಲ್ಲ ಬದಲಾವಣೆಗಳು 2026ರ ಹೊತ್ತಿಗೆ ಸಾಕಾರಗೊಳ್ಳಬೇಕೆಂದು ಕೋವಿಡ್ ಪೂರ್ವದ ದಿನಗಳಲ್ಲಿ ಯೋಜಿಸಲಾಗಿತ್ತು. ಇದೇ ಹೊತ್ತಿಗೆ, ದೇವರೇ ಕಳಿಸಿದಂತೆ ಕೋವಿಡ್ 19 ಪ್ರತ್ಯಕ್ಷವಾಗಿದೆ. ದೇಶದ ಪ್ರಧಾನಿಯ ಪ್ರಾರ್ಥನೆ–ಸೂಚನೆಯಂತೆ ಹಣವಿದ್ದವರು ಮನೆಯಲ್ಲಿ ಕುಳಿತು ನಾಲ್ಕನೆಯ ಘಟ್ಟದ ಬಂಡವಾಳಶಾಹಿ ಪ್ರಣೀತ ಡಿಜಿಟಲೀಕರಣದ ಬದಲಾವಣೆಗಳಿಗೆ, ಅಂದರೆ ಕೋವಿಡೋತ್ತರ ಜೀವನ ಪದ್ಧತಿಗೆ ಹೊಂದಿಕೊಳ್ಳಲು ತಾಲೀಮು ನಡೆಸುತ್ತಿದ್ದಾರೆ. ಕೋವಿಡ್ ಬಂದಿದ್ದು ಒಳ್ಳೆಯದೇ ಆಯಿತು ಎನ್ನುವ ಮನಸ್ಥಿತಿಯಲ್ಲಿ ಡಿಜಿಟಲೀಕರಣದ ಶಿಲ್ಪಿಗಳು, ಸಾಫ್ಟ್‌ವೇರ್ ಉದ್ಯಮಿಗಳು ಇದ್ದಾರೆ.

ಕೋವಿಡ್ ಭಯ ನಿವಾರಣೆಯಾದ ಮೇಲೆ, ಡಿಜಿಟಲೀಕರಣದ ಬೆಳಕಿನಲ್ಲಿ, (ಅಥವಾ ಫ್ಯಾಸಿಸ್ಟ್ ಧೋರಣೆಯ ಕತ್ತಲಿನಲ್ಲಿ) ಬಂಡವಾಳವಾದದ ಮುಖ ಸ್ಪಷ್ಟವಾಗಬಹುದು. (ಝಿಝೆಕ್ ಹೇಳುವಂತೆ) ಆಗ ನಮ್ಮೆಲ್ಲರಿಗೆ ಉಳಿಯುವ ಆಯ್ಕೆ ಎರಡೇ ಎರಡು: ಬರ್ಬರತೆಯೋ, ಇಲ್ಲ ಸಮಾಜವಾದವೋ?

ಜಾಗತಿಕವಾಗಿ ಇಂದು, ಬೆರಳೆಣಿಕೆಯ ಒಂದೆರಡು ದೇಶಗಳನ್ನುಳಿದು ವಿಶ್ವದ ಎಲ್ಲಾ ದೇಶಗಳಲ್ಲಿಯೂ ಇರುವುದು ಬಂಡವಾಳಶಾಹಿ ಆರ್ಥಿಕತೆಯೇ. ಅಮೆರಿಕಾ ಬೂರ್ಷ್ವಾ ಪ್ರಜಾಪ್ರಭುತ್ವವನ್ನು ತನ್ನ ರಾಷ್ಟ್ರೀಯ ಆಯ್ಕೆಯನ್ನಾಗಿ ಮಾಡಿಕೊಂಡಿದೆ. ಅಷ್ಟೇ ಆಗಿದ್ದಿದ್ದರೆ ಜಾಗತಿಕ ರಾಜಕೀಯಕ್ಕೆ ಏನೂ ತೊಂದರೆ ಇರಲಿಲ್ಲ. ಆದರೆ ಅಮೆರಿಕಾ ಸರ್ಕಾರ, ತನ್ನ ಬ್ರಾಂಡ್ ಪ್ರಜಾಪ್ರಭುತ್ವವನ್ನು ಒಪ್ಪದ ಅಥವಾ ವಿರೋಧಿಸುವ ಯಾವುದೇ ಸರ್ಕಾರ ವಿಶ್ವದ ಯಾವ ಮೂಲೆಯಲ್ಲಿದ್ದರೂ ಅದನ್ನು ಆರ್ಥಿಕ ನಿರ್ಬಂಧಗಳು, ಮತ್ತು ಮಿಲಿಟರಿ ಆಕ್ರಮಣ ಮುಂತಾದ ಪ್ರಜಾತಾಂತ್ರಿಕವಲ್ಲದ ವಿಧಾನಗಳಿಂದ ಬಗ್ಗಿಸುತ್ತದೆ. ಆಮೇಲೆ ತನ್ನ ನೀತಿಗೆ ಅನುಕೂಲಕರವಾಗಿರುವಂಥ ಕೈಗೊಂಬೆ ಸರ್ಕಾರವನ್ನು ಅಲ್ಲಿ ಪ್ರತಿಷ್ಠಾಪಿಸಿ, ಪ್ರಜಾಪ್ರಭುತ್ವವನ್ನು ನೆಲೆಗೊಳಿಸಿದ್ದಾಗಿ ಪ್ರಚಾರ ಮಾಡುತ್ತದೆ. ಅದು ಸಾಲದೆಂಬಂತೆ, ಸಾಮ್ಯವಾದಿ, ಸಮತಾವಾದಿ ಅಥವಾ ಸಮಾಜವಾದಿ ಸಿದ್ಧಾಂತದ ಅಡಿಯಲ್ಲಿ ಸಂಘಟಿತವಾದ ಸಮಾಜವು ಯಾವುದೇ ದೇಶದಲ್ಲಿದ್ದರೂ ಅದನ್ನು ವಿಘಟನೆಗೊಳಿಸುವುದನ್ನು ತನ್ನ ವಿದೇಶೀ ನೀತಿಯನ್ನಾಗಿ ಘೋಷಿಸಿಕೊಂಡಿದೆ. ಇದೇ ಕಾರಣಕ್ಕಾಗಿ ಹಿಂದಿನ ಸಮಾಜವಾದೀ ಸೋವಿಯತ್ ಒಕ್ಕೂಟದ ಮೇಲೆ 1945ರಿಂದಲೂ 'ಶೀತಲ ಯುದ್ಧ' ಮಾಡಿ ಅದರ ವಿಘಟನೆಯಲ್ಲಿ ಬಹುಮುಖ್ಯ ಪಾತ್ರ ವಹಿಸಿತು. ಮಾವೋ ಸಂಘಟಿಸಿದ ಸಮಾಜವಾದೀ ಕ್ರಾಂತಿಯ ಫಲವಾಗಿ ಅಸ್ತಿತ್ವಕ್ಕೆ ಬಂದ ಕಮ್ಯುನಿಸ್ಟ್ ಚೀನಾ ತನ್ನ ಜನಬಲ, ಅಗ್ಗದ ಶ್ರಮಬಲ, ಅದ್ವಿತೀಯ ತಾಂತ್ರಿಕ ಪರಿಣತಿ ಮತ್ತು ಸಂಘಟನಾ ಶಕ್ತಿಗಳಿಂದಾಗಿ ಇಡೀ 'ಜಗತ್ತಿನ ಫ್ಯಾಕ್ಟರಿ' ಯಾಗಿ, ದೈತ್ಯ ಮಾರುಕಟ್ಟೆಯಾಗಿ ಬೆಳೆದ ಮೇಲೆ, ಅದನ್ನು ಬಗ್ಗಿಸಲು ನಾನಾ ರೀತಿಗಳಲ್ಲಿ ಅಮೇರಿಕಾ ಯತ್ನಿಸುತ್ತಲೇ ಇತ್ತು. ಕೋವಿಡ್ 19 ಚೀನಾ ಮೂಲದ, ಅಗೋಚರ, ವಿಧ್ವಂಸಕ ಜಾಡ್ಯವಾಗಿ ಇಡೀ ಜಗತ್ತನ್ನೇ ವ್ಯಾಪಿಸಿದಾಗ ಅಮೆರಿಕಾ ಸರ್ಕಾರಕ್ಕೆ ಚೀನಾ ಸರ್ಕಾರದೊಂದಿಗೆ ವ್ಯಾಪಾರೀ ಯುದ್ಧವನ್ನು ಹೂಡಲು ಹೊಸ ಅಸ್ತ್ರವೊಂದು ಸಿಕ್ಕಂತಾಯಿತು.

'ದೇಶ ಎಂದರೆ ಅದರ ವ್ಯಾಪಾರಿಗಳು' ಎಂದು ಪ್ರಸಿದ್ಧ ಬ್ರಿಟಿಷ್ ಕಾದಂಬರಿಕಾರ, ಮತ್ತು 'ಅರಾಜ್ಯವಾದಿ' (ಅನಾರ್ಕಿಸ್ಟ್) ಡಿ.ಎಚ್.ಲಾರೆನ್ಸ್ ಹೇಳಿ ಒಂದು ಶತಮಾನವೇ ಕಳೆದಿದೆ. ಅಮೇರಿಕಾ, ಹೇಳಿಕೇಳಿ ಬಂಡವಳಿಗರ ಹಿಡಿತದಲ್ಲಿರುವ ಸರ್ಕಾರವು ಆಳುವ ದೇಶ. ಅದರ ಎರಡು ಪಕ್ಷಗಳಾದ ರಿಪಬ್ಲಿಕನ್ ಮತ್ತು ಡಮೊಕ್ರಾಟ್ ಪಕ್ಷಗಳಲ್ಲಿ ಯಾವುದೇ ಪಕ್ಷ ಅಧಿಕಾರಕ್ಕೆ ಬಂದರೂ ಪ್ರಜಾಪ್ರಭುತ್ವದ ಹೆಸರಿನಲ್ಲಿ ಚೂರು ಪಾರು ಜನಪರವಾದ ಬದಲಾವಣೆಗಳನ್ನು ಅಮೆರಿಕಾದ ಸಮಾಜದಲ್ಲಿ ತರಬಹುದೇ ಹೊರತು ಅದರ ಬಂಡವಳಿಗ ಸ್ವರೂಪವನ್ನು ಬದಲಾಯಿಸುವುದು ಸಾಧ್ಯವಿಲ್ಲ.

ಯೂರೋಪಿನಲ್ಲಿ 18ನೇ ಶತಮಾನದ ಆಸುಪಾಸಿನಲ್ಲಿ ಆವಿಷ್ಕಾರಗೊಳ್ಳಲು ಪ್ರಾರಂಭಿಸಿದ ಯಂತ್ರ ನಾಗರಿಕತೆಯ ಸಹಾಯದಿಂದ ಗಟ್ಟಿಗೊಂಡ ಬಂಡವಾಳಶಾಹಿಯು ಇಲ್ಲಿಯವರೆಗೂ ನಾಲ್ಕು ಪ್ರಮುಖ ಘಟ್ಟಗಳನ್ನು ಹಾದುಬಂದಿದೆ. ಮೈಬಲ ಮತ್ತು ಪ್ರಾಣಿಗಳ ಬಲದಿಂದ ನಡೆಯುತ್ತಿದ್ದ ಬಿಡಿ ಬಿಡಿ ಮನುಷ್ಯರ ಉತ್ಪಾದನೆಯು ಉಗಿಶಕ್ತಿ ಮತ್ತು ತೈಲ–ವಿದ್ಯುತ್ ಶಕ್ತಿಯ ಬಲದಿಂದ ಸಾಮೂಹಿಕವಾಗಿ ನಡೆಯುವ ಉತ್ಪಾದನೆಯಾಗಿದ್ದು ಮೊದಲನೆಯ ಘಟ್ಟ. ಸ್ವಯಂಚಾಲಿತ ಯಂತ್ರಗಳೊಂದಿಗೆ ಮನುಷ್ಯರೂ ಯಂತ್ರವಾಗಿ ದುಡಿದು ಬಂಡವಳಿಗರ ಸಂಪತ್ತನ್ನು ಹೆಚ್ಚಿಸುತ್ತ ಹೋಗಿದ್ದು ಎರಡನೆಯ ಘಟ್ಟ.



ಕೊರೊನಾ ಒಂದು ವೈರಸ್ ಅಷ್ಟೇ!
ಆದರೆ ಬಂಡವಾಳವಾದ ಒಂದು ಮಹಾಮಾರಿ !!

ಕಂಪ್ಯೂಟರೀಕರಣ ಮತ್ತು ಕೇಂದ್ರೀಕೃತ ವ್ಯವಸ್ಥೆಗಳ ಮೂಲಕ ನಡೆಯುವ ಉತ್ಪಾದನೆಯು ಮೂರನೆಯ ಘಟ್ಟ. ಅಂತರ್ಜಾಲ, ಆನ್‌ಲೈನ್ ವ್ಯವಹಾರ, ದೂರಶಿಕ್ಷಣ ಕೃತಕ ಬುದ್ಧಿಮತ್ತೆ, ರೊಬೋಟ್‌ಗಳು ಮತ್ತು ತಂತ್ರಾಂಶಗಳ ಮೂಲಕ ಕೆಲವೇ ಕೆಲವು ಜನರಿಂದ ನಿರ್ವಹಿಸಬಹುದಾದ ಉತ್ಪಾದನೆಯ ಡಿಜಿಟಲೀಕರಣ ನಾಲ್ಕನೆಯ ಘಟ್ಟ.

ಬಂಡವಾಳಶಾಹಿಯು ಈ ಘಟ್ಟಗಳಲ್ಲಾದ ತಂತ್ರಜ್ಞಾನದ ಬದಲಾವಣೆಗಳ ಸೌಲಭ್ಯಗಳನ್ನು ಜನಸಾಮಾನ್ಯರೊಂದಿಗೆ ಹಂಚಿಕೊಳ್ಳುವ ಬದಲು ಅವನ್ನೂ ತನ್ನ ಲಾಭಗಳಿಕೆಗೆ ಬಳಸುತ್ತಾ ಬಂದಿರುವುದರಿಂದ ಪ್ರತಿಯೊಂದು ಘಟ್ಟದ ಬದಲಾವಣೆಯಲ್ಲೂ ಸಾಕಷ್ಟು ಸಂಖ್ಯೆಯ ದುಡಿಯುವ ಜನರು ಕೆಲಸ ಕಳೆದುಕೊಂಡು ಒಟ್ಟು ಜನಜೀವನವೇ ಹೆಚ್ಚು ಹೆಚ್ಚು ದುರ್ಭರವಾಗುತ್ತಾ ಸಾಗಿದೆ. ಅದರಿಂದ ಹುಟ್ಟುವ ಸಾಮಾಜಿಕ ವಿಷಮತೆಗಳು ಹೆಚ್ಚಾಗುತ್ತಲೇ ಇವೆ. 'ಷಾಕ್ ಡಾಕ್ಟ್ರಿನ್' ಗ್ರಂಥಕರ್ತೆ ನೋಮೀ ಕ್ಲೀನ್ ಹೇಳುವಂತೆ, ನಾವು 'ಅನಾಹುತ ಬಂಡವಾಳವಾದ'ದ (ಡಿಸಾಸ್ಟರ್ ಕ್ಯಾಪಿಟಲಿಸಂ) ಕೈಗೆ ಸಿಕ್ಕು ನರಳುತ್ತಿದ್ದೇವೆ. ಅದರಂತೆ ಸತತವಾಗಿ ಹರಡುತ್ತಲೇ ಇರುವ ಕೋವಿಡ್ ಕಷ್ಟಗಳಿಂದಾಗಿ ಜಾಗತಿಕ ಬಂಡವಾಳವಾದವು ಕೋವಿಡ್ ಬಂಡವಾಳವಾದವಾಗಿದೆ.

ಬಂಡವಾಳವಾದವು ಪ್ರತಿಯೊಂದು ಬದಲಾವಣೆಯನ್ನೂ ತನ್ನ ಲಾಭಕ್ಕೆ ಬಳಸಿಕೊಳ್ಳುವಂತೆ ಕೋವಿಡ್ ವೈರಸ್ಸನ್ನೂ ಬಳಸಿಕೊಳ್ಳುತ್ತಿದೆ. ಆ ಮೂಲಕ ತಾನೇ ವಿಶ್ವವ್ಯಾಪಿಯಾದ ವ್ಯಾಧಿಯಾಗಿದ್ದು ಕೋವಿಡ್‌ನಂತೆಯೇ ಅಗೋಚರವಾಗಿದೆ. ಇನ್ನೂ ದೊಡ್ಡ ದುರಂತವೆಂದರೆ, ಕೋವಿಡ್‌ಗೆ ಹೆದರಿ ಮನೆಯೊಳಗೇ ಇರಬೇಕಾಗಿ ಬಂದಿರುವ ಮಧ್ಯಮವರ್ಗದ ಜನರು, ತಮಗೆ ಬಂದೊದಗಿರುವ ಕಷ್ಟಗಳಿಗೆ ಬಂಡವಾಳವಾಳಶಾಹಿಯಲ್ಲೇ ಪರಿಹಾರವನ್ನು ಹುಡುಕುತ್ತಾ ನಾಲ್ಕನೆಯ ಘಟ್ಟದ ಡಿಜಿಟಲೀಕರಣದ ಸಾಮಾಜಿಕ ಜಾರಿಗಾಗಿ ಕಾಯುತ್ತಿದ್ದಾರೆ.

ಇದು ಹಾವಿನ ಹೆಡೆಯ ನೆರಳಿನಲ್ಲಿ ಕುಳಿತು ದಣಿವಾರಿಸಿಕೊಳ್ಳುವ ಕಪ್ಪೆಯನ್ನು ನೆನಪಿಗೆ ತರುತ್ತದೆ.

ಜಾಗತಿಕ ಬಂಡವಾಳವು ಡಿಜಿಟಲೀಕರಣದ ಮೂಲಕ 'ಪರಿಸರಸ್ನೇಹಿ' ಎನ್ನುವ ವಿದ್ಯುತ್‌ಚಾಲಿತ ವಾಹನಗಳು, ಚಾಲಕರಹಿತ ಕಾರುಗಳು, ಹಣರಹಿತ ವ್ಯಹಾರಕ್ಕಾಗಿ ತಂತ್ರಾಂಶಗಳು, 'ಗೋಡೆರಹಿತ ತರಗತಿ'ಗಳಿಗಾಗಿ ಆನ್‌ಲೈನ್ ಶಾಲೆಗಳು, ಇ ಪುಸ್ತಕ, ಇ ಕಲಿಕೆಯ ಸಾಮಗ್ರಿಗಳು ಮತ್ತು ಹಲವು ವಿದ್ಯಾರ್ಥಿಗಳು ಒಟ್ಟಿಗೆ ಬಳಸಬಹುದಾದ ಸಣ್ಣ ಕಂಪ್ಯೂಟರ್‌ಗಳು, ಆನ್‌ಲೈನ್ ಮಿಲಿಟರಿ ಮತ್ತು ವೈದ್ಯೋಪಚಾರಕ್ಕಾಗಿ ಮಾತ್ರವಲ್ಲದೆ, ದಿನನಿತ್ಯದ ಸೌಲಭ್ಯಗಳಿಗಾಗಿ ರೊಬೋಟ್‌ಗಳು, ನಗರಪ್ರದೇಶಗಳಲ್ಲಿ ಮಾತ್ರವಲ್ಲದೆ ಅರೆಗ್ರಾಮೀಣ ಮತ್ತು ಗ್ರಾಮೀಣ ಪ್ರದೇಶಗಳ ಬಹುಸಂಖ್ಯಾತ ಗಿರಾಕಿಗಳ ಆನ್‌ಲೈನ್ ಖರೀದಿ–ಸೌಲಭ್ಯಗಳಿಗಾಗಿ ಅಂತರ್ಜಾಲ, ಕಂಪ್ಯೂಟರ್ ಮತ್ತು ಸ್ಮಾರ್ಟ್‌ಫೋನ್‌ಗಳ ಸಂಪರ್ಕಗಳು, ಫ್ಲಿಪ್‌ಕಾರ್ಟ್, ಬಿಗ್ ಬಾಸ್ಕೆಟ್, ಮೆಡ್‌ಲೈಫ್, ಗ್ರೋಫರ್ಸ್ ಮೊದಲಾದ ವಾಣಿಜ್ಯ ಜಾಲತಾಣ ಕಂಪೆನಿಗಳು, ಸೊನ್ನೆ ಠೇವಣಿಯ ಬ್ಯಾಂಕ್‌ಅಕೌಂಟ್‌ಗಳು, ಈಗಾಗಲೇ 'ಗಿರಾಕಿಗಳ ಸೇವೆ'ಗೆ ಸನ್ನದ್ಧವಾಗಿವೆ. ಗ್ರಾಮೀಣ ಯುವಕ–ಯುವತಿಯರಿಗೆ ಮನರಂಜನೆ ಮತ್ತು ಆನ್‌ಲೈನ್ ಕ್ರೀಡೆ, ಸಂಗೀತ, ಸಿನೆಮಾಗಳನ್ನು ಒದಗಿಸಲು ನೆಟ್‌ಫ್ಲಿಕ್ಸ್, ಯೂಟ್ಯೂಬ್, ಗೂಗಲ್, ಟಿಕ್‌ಟಾಕ್ ವಾಟ್ಸ್‌ಆಪ್ ತುದಿಗಾಲಮೇಲೆ ನಿಂತಿವೆ. ಆನ್‌ಲೈನ್ ಖರೀದಿಯು, ಜನರಿಗೆ ಸುಲಭವಾಗಿ ಎಡತಾಗುವ ಕಿರಾಣಿ ಅಂಗಡಿಗಳಿಂದ ಎಫ್‌ಎಂಸಿಜಿ (ಫಾಸ್ಟ್ ಮೂವಿಂಗ್ ಕನ್ಸ್ಯೂಮರ್ ಗೂಡ್ಸ್) ಅಂದರೆ, ಮನೆ ಸಾಮಾನುಗಳನ್ನು ಜನರು ಕೂತಲ್ಲಿಂದಲೇ ಖರೀದಿಸಲೆಂದೇ ರಿಲಯನ್ಸ್ ಕಂಪೆನಿಯು ವಾಟ್ಸ್ ಆಪ್ ಜೊತೆಗೆ ಕೈಜೋಡಿಸಿದೆ. ಅವನ್ನು ಮನೆಬಾಗಿಲಿಗೆ ತಲುಪಿಸಲು ಊಬರ್, ಮೆರು ವಾಹನಗಳು ಸಜ್ಜಾಗಿ ನಿಂತಿವೆ. ಭಾರಗಳನ್ನು ಎತ್ತಿ ಇಳಿಸಲು ವಲಸೆ ಕಾರ್ಮಿಕರು ಇದ್ದೇ ಇದ್ದಾರೆ. ಓಬೀರಾಯನ ಕಾಲದ 'ಸಗಟು ವ್ಯಾಪಾರಿ–ವಿತರಕ– ಚಿಲ್ಲರೆ ವ್ಯಾಪಾರಿ' ಎಂಬ ಸರಪಳಿ ಹರಿದು ವ್ಯಾಪಾರಿ–ಗಿರಾಕಿ ಇಬ್ಬರೂ 'ಮುಕ್ತ'ರಾಗಿದ್ದಾರೆ. ಮೂರನೆಯ ಘಟ್ಟದ ಬದಲಾವಣೆಯ 'ತಂತ್ರಜ್ಞಾನದ ಕ್ರಾಂತಿ'ಯಲ್ಲಿ, ಬಂಡವಾಳಶಾಹಿಯ ಎಲ್‌ಪಿಜಿ ಕಾಲದಲ್ಲಿ, ಹೊಸ ಪ್ಯಾರಡೈಮ್ ಷಿಫ್ಟ್ ಸಂಭವಿಸಿ ಜೀವ ವಿಜ್ಞಾನ, ಮಾಹಿತಿ ತಂತ್ರಜ್ಞಾನ ಮತ್ತು ನ್ಯಾನೋ ತಂತ್ರಜ್ಞಾನಗಳು ಮುನ್ನೆಲೆಗೆ ಬಂದಂತೆ, ನಾಲ್ಕನೆಯ ಘಟ್ಟದ ತಂತ್ರಜ್ಞಾನದ ಕ್ರಾಂತಿಯಲ್ಲಿ 'ಫಿಜಿಟಲೀಕರಣ' ಮನಸ್ಸುಳ್ಳ ಮನುಷ್ಯ ಜೀವಿಗಳು ಮತ್ತು ಜೀವವಿಲ್ಲದ ವಸ್ತುಗಳ ನಡುವೆ ಇರುವ ಭೇದವನ್ನು ತೊಡೆದುಹಾಕುತ್ತಿದೆ. ಡಿಜಿಟಲೀಕರಣವೇ ಜೀವನ–ಸಂಜೀವನವಾಗಿರುವ ಹೊಸ ಬಂಡವಾಳ ಶಾಹಿಯ ಈ ಜಗತ್ತಿನಲ್ಲಿ 'ವಾಹನಗಳೇ ಇಲ್ಲದ ವಾಹನ ಕಂಪೆನಿಗಳೂ', 'ರೂಮುಗಳೇ ಇಲ್ಲದ ಹೊಟೆಲ್ ಕಂಪೆನಿಗಳೂ', 'ಗೋಡೆಗಳೇ ಇಲ್ಲದ ಶಾಲಾ ಕೊಠಡಿಗಳೂ' ಹೀಗೆ ಇನ್ನೂ ಏನೇನೋ ಇಲ್ಲದ ಏನೇನೋ ಕಂಪೆನಿಗಳು ಈ ಹೊಸ ಪ್ಯಾರಡೈಮ್ ಷಿಫ್ಟ್‌ನಿಂದಾಗಿ ಸಾಧ್ಯವಾಗುತ್ತದೆ. ಜನರ 'ಮನುಷ್ಯತನ'ವನ್ನೇ ಅಳಿಸಿಹಾಕಿ ಡಿಜಿಟಲ್ ಐಡಿ, ಆಧಾರ ಸಂಖ್ಯೆ, ಪಾಸ್‌ವರ್ಡ್, ಹೆಬ್ಬೆಟ್ಟು ಗುರುತು, ಪರೀಕ್ಷಿಸಿದ ಕಣ್ಣಿನಪಾಪೆಯ ಗುರುತು, ವಂಶವಾಹಿನಿಯ ಸರಪಳಿಯ ಗುರುತಿಗೆ ಮಾತ್ರ ಸಿಗುವ ಇ ಗಿರಾಕಿಗಳ ಸ್ಥಿತಿಗೆ ಇಳಿಸಲಾಗುತ್ತಿದೆ.

ಸಾಮಾನ್ಯ ಜನರ ಆದಾಯ ಮೂಲಗಳ ಅಭಿವೃದ್ಧಿ ಹೇಗೆ, ಕೃಷಿ ಉತ್ಪಾದನೆಯ ಗತಿ ಏನು, 40 ಕೋಟಿ ಉದ್ಯೋಗಿಗಳು ಮತ್ತು ಕಾರ್ಮಿಕರ ಜೀವನ ನಿರ್ವಹಣೆ ಹೇಗೆ, ಭೂತಾಪದ ಹೆಚ್ಚಳ ಮತ್ತು ಪರಿಸರ ನಾಶದ ಘೋರ ಪರಿಣಾಮಗಳನ್ನು ಎದುರಿಸುವ ಬಗೆ ಹೇಗೆ, ಇ ವ್ಯಾಪಾರಿಗಳು ತೋರಿಸುವ ಕೃತಕ ವಾಸ್ತವದ ಸಮೃದ್ಧಿಯನ್ನು ಅನುಭವಿಸಲು ಜನರಿಗೆ ಕೊಳ್ಳುವ ಶಕ್ತಿ ಎಲ್ಲಿಂದ ಬರುತ್ತದೆ, ಎಂಬ ಯಾವ ಗಂಭೀರ ಪ್ರಶ್ನೆಗೂ ಉತ್ತರವಿಲ್ಲದ ಡಿಜಿಟಲೀಕರಣದ ಭಾರತದಲ್ಲಿ, ಒಟ್ಟು 6ಕೋಟಿ, 27 ಲಕ್ಷ ಜನರು ಈಗಾಗಲೇ ಅಂತರ್ಜಾಲವನ್ನು ಬಳಸುತ್ತಿದ್ದಾರೆ. ಗ್ರಾಮೀಣ ಭಾರತದಲ್ಲಿ ಪ್ರತಿವರ್ಷ ಶೇಕಡಾ 35 ಜನರು ಅಂತರ್ಜಾಲ ಸಂಪರ್ಕವನ್ನು ಪಡೆದುಕೊಳ್ಳುತ್ತಿದ್ದಾರೆ. ಜನರು ಎಂದರೆ, ಯುವಜನರು, ಯುವಜನರೆಂದರೆ ದೈತ್ಯ ಇ ವಾಣಿಜ್ಯ ವ್ಯಾಪಾರಿಗಳಿಗೆ ಗಿರಾಕಿಗಳು ಎಂಬಂಥ 'ಇ ರೋಗ'ಕ್ಕೆ ಜನಸಾಮಾನ್ಯರನ್ನು ಒಡ್ಡುವ ಮೂಲಕ ಬಂಡವಾಳವಾದವೇ ಅತ್ಯಂತ ಸಾಂಕ್ರಾಮಿಕವಾದ ಜಾಡ್ಯವಾಗಿದೆ,

ಡಿಜಿಟಲೀಕರಣದ ವರ್ಚುಯಲ್ ಭಾರತದಲ್ಲಿ ಈ ಎಲ್ಲ ಬದಲಾವಣೆಗಳು 2026ರ ಹೊತ್ತಿಗೆ ಸಾಕಾರಗೊಳ್ಳಬೇಕೆಂದು ಕೋವಿಡ್ ಪೂರ್ವದ ದಿನಗಳಲ್ಲಿ ಯೋಜಿಸಲಾಗಿತ್ತು. 'ಕಡಿಮೆ ಶ್ರಮದಲ್ಲಿ, ಹೆಚ್ಚಿನ ಉತ್ಪಾದನೆಯನ್ನು, ಶೀಘ್ರಗತಿಯಲ್ಲಿ ಮತ್ತು ಅತ್ಯಂತ ಕಡಿಮೆ ಕಾಲದಲ್ಲಿ' ಸಾಧಿಸುವ ಈ ಸ್ವರ್ಗವು ಭರತಭೂಮಿಗೆ ಇಳಿಸಲು ಈಗಿರುವ ನೌಕರರ ಸಂಖ್ಯೆಯಲ್ಲಿ ಅರ್ಧಕ್ಕಿಂತ ಕಡಿಮೆ ಜನರು ಸಾಕಾಗುತ್ತಾರೆ. ಅಂದರೆ ಅರ್ಧಕ್ಕಿಂತಾ ಹೆಚ್ಚಿನ ಜನರು ಕೈಲಿರುವ ಉದ್ಯೋಗಗಳನ್ನು ಕಳೆದುಕೊಳ್ಳುತ್ತಾರೆ. ಹೊಸ ಹೊಸ ರೊಬೋಟ್‌ಗಳಿಗೆ ಅಗತ್ಯವಾದ ತಂತ್ರಾಶಗಳನ್ನು ಬರೆಯ ಬಲ್ಲ ಟೆಕ್ಕಿಗಳಿಗೆ ಮಾತ್ರ ಉದ್ಯೋಗ. ಉದ್ಯೋಗ ಕಳೆದುಕೊಳ್ಳುವ, ಅಥವಾ ಉದ್ಯೋಗವೇ ಇಲ್ಲದ ನಿರುದ್ಯೋಗಿಗಳಿಗೆ ಕೆಲಸ ಕಳೆದುಕೊಳ್ಳುವ ಆ ಭಯವಿಲ್ಲ ಎಂದು ಧನಾತ್ಮಕವಾಗಿ ಯೋಚಿಸಬೇಕೆಂದು ಹೇಳುವ ಮನೋವಿಜ್ಞಾನಿಗಳು, ಆಪ್ತಸಮಾಲೋಚಕರು ಸಹಾಯಕ್ಕೆ ಇದ್ದಾರೆ.

ಇದೇ ಹೊತ್ತಿಗೆ, ದೇವರೇ ಕಳಿಸಿದಂತೆ ಕೋವಿಡ್ 19 ಪ್ರತ್ಯಕ್ಷವಾಗಿದೆ. ದೇಶದ ಪ್ರಧಾನಿಯ ಪ್ರಾರ್ಥನೆ–ಸೂಚನೆಯಂತೆ ಹಣವಿದ್ದವರು ಮನೆಯಲ್ಲಿ ಕುಳಿತು ನಾಲ್ಕನೆಯ ಘಟ್ಟದ ಬಂಡವಾಳಶಾಹಿ ಪ್ರಣೀತ ಡಿಜಿಟಲೀಕರಣದ ಬದಲಾವಣೆಗಳಿಗೆ, ಅಂದರೆ ಕೋವಿಡೋತ್ತರ ಜೀವನ ಪದ್ಧತಿಗೆ ಹೊಂದಿಕೊಳ್ಳಲು ತಾಲೀಮು ನಡೆಸುತ್ತಿದ್ದಾರೆ. ಕೋವಿಡ್ ಬಂದಿದ್ದು ಒಳ್ಳೆಯದೇ ಆಯಿತು ಎನ್ನುವ ಮನಸ್ಥಿತಿಯಲ್ಲಿ ಡಿಜಿಟಲೀಕರಣದ ಶಿಲ್ಪಿಗಳು, ಸಾಫ್ಟ್‌ವೇರ್ ಉದ್ಯಮಿಗಳು ಇದ್ದಾರೆ. ಮಾತ್ರವಲ್ಲ. ಆದಷ್ಟು ಬೇಗ ದೇಶಕ್ಕೆ ಹಾಕಿರುವ **ಪುಟ 10 ಕ್ಕೆ**

ಚೀನಾವನ್ನು ಬಲಿಪಶು ಮಾಡುವ ಟ್ರಂಪ್ ಆಟ



ಈ ಮಹಾಮಾರಿಯ ವಿರುದ್ಧ ಹೋರಾಡುವಲ್ಲಿ ಜಾಗತಿಕ ಐಕ್ಯತೆ ಮತ್ತು ಸೌಹಾರ್ದತೆ ಬೇಕಾಗಿರುವ ಸಮಯದಲ್ಲಿ ಟ್ರಂಪ್ ಆಡಳಿತ ಹಸಿ ಸುಳ್ಳಿನ ಮತ್ತು ವಿಭಜನಕಾರಿ ಪ್ರಚಾರವನ್ನು ನಡೆಸಿರುವುದಕ್ಕೆ ಮೂರು ಕಾರಣಗಳಿವೆ. ಇವುಗಳಲ್ಲಿ ಮೂಲ ಕಾರಣವೆಂದರೆ, ಚೀನಾ ಕೊವಿಡ್ ನಂತರದ ಅವಧಿಯಲ್ಲಿ ಇನ್ನೂ ಬಲಶಾಲಿಯಾಗಿ ಮೂಡಿ ಬರುತ್ತದೆ ಎಂಬ ಸಾಮ್ರಾಜ್ಯಶಾಹಿ ಆಳುವ ವಲಯಗಳಲ್ಲಿನ ಭಯ. ಭಾರತ ಇಂತಹ ಸಂದರ್ಭದಲ್ಲಿ ಚೀನಾ-ವಿರೋಧಿ ಪಡೆಯನ್ನು ಸೇರಿಕೊಳ್ಳುವುದು ಎಂದರೆ ಒಬ್ಬ ತರ್ಕಹೀನ ಮತ್ತು ಸ್ವಾರ್ಥಪರ ಅಧ್ಯಕ್ಷನ ತಿಕ್ಕಲುತನಗಳಿಗೆ ದೇಶವನ್ನು ಒಳಪಡಿಸಿದಂತಾಗುತ್ತದೆ.



ಪ್ರಕಾಶ ಕಾರಟ್

ಕೊರೊನ ವೈರಸ್ ಈಗಲೂ ಕೇಕೆ ಹಾಕುತ್ತಿದೆ, ಅಮೆರಿಕ ಸಂಯುಕ್ತ ಸಂಸ್ಥಾನ ಅದರ ಕೇಂದ್ರ ಪ್ರದೇಶವಾಗಿದೆ. ಈ ಸಮಯದಲ್ಲೇ ಅಧ್ಯಕ್ಷ ಟ್ರಂಪ್ ಮತ್ತು ಅವರ ಆಡಳಿತ ಚೀನಾದ ವಿರುದ್ಧ ನೇರ ದಾಳಿಗಿಳಿದಿದ್ದಾರೆ, ಈ ವೈರಸ್‌ನ ಸೃಷ್ಟಿಗೆ ಮತ್ತು ಹರಡಿಕೆಗೆ ಚೀನಾವೇ ಕಾರಣ ಎಂದು ದೂಷಿಸುತ್ತಿದ್ದಾರೆ; ಎಷ್ಟರ ಮಟ್ಟಿಗೆ ಎಂದರೆ ಇದರಿಂದಾಗಿರುವ ಅನಾಹುತಕ್ಕೆ ಪರಿಹಾರ ಕೊಡಬೇಕೆಂದು ಅಗ್ರಹಿಸುತ್ತಿದ್ದಾರೆ.

ಕೊವಿಡ್-19 ವೈರಸ್ಸನ್ನು 'ಚೀನೀ ವೈರಸ್' ಎಂದು ಹೇಳಿ ಟ್ರಂಪ್ ಇದರ ನೇತೃತ್ವ ವಹಿಸಿದರು. ನಂತರ, ಇದನ್ನು ವುಹಾನ್ ನಲ್ಲಿ ಪ್ರಯೋಗಾಲಯದಲ್ಲಿ ಸೃಷ್ಟಿಸಲಾಯಿತು ಎಂದರು. ಮಾಜಿ ಸಿಐಎ ಮುಖ್ಯಸ್ಥ, ಈಗ ವಿದೇಶಾಂಗ ಕಾರ್ಯದರ್ಶಿ ಮೈಕ್ ಪೊಂಪಿಯೊ ಇದನ್ನು ಪುನರುಚ್ಚರಿಸಿದರು. ಅದನ್ನು 'ವುಹಾನ್ ವೈರಸ್' ಎಂದ ಪೊಂಪಿಯೊ ಚೀನಾ ಈ ಮಾಹಿತಿಯನ್ನು ಹಂಚಿಕೊಳ್ಳಲಿಲ್ಲ, ಅದರಿಂದಾಗಿ ಅಮೆರಿಕಾ ಮತ್ತು ಜಗತ್ತು ಅಪಾರ ಹಾನಿಗಳನ್ನು ಅನುಭವಿಸಿದೆ, "ಚೀನೀ ಸರಕಾರ ಅವರು ಮಾಡಿದ್ದಕ್ಕೆ ಬೆಲೆ ತೆರಬೇಕಾಗುತ್ತದೆ" ಎಂದು ಅವರು ಸಾರಿದ್ದಾರೆ.

ಮಾರ್ಚ್ 29 ರಂದು ಟ್ರಂಪ್ ತಾನು ಚೀನಾದ ವಿರುದ್ಧ ಈ ಹಾನಿಯುಂಟು ಮಾಡಿದ್ದಕ್ಕೆ ಪರಿಹಾರ ಕೊಡಬೇಕು ಎಂದು ಮೊಕದ್ದಮೆ ಹೂಡುವ ಬಗ್ಗೆ ಪರಿಶೀಲಿಸುತ್ತಿದ್ದೇನೆ ಎಂದಿದ್ದಾರೆ. ಆತನ ಈ ಹೇಳಿಕೆಯ ಮೊದಲೇ ಮಿಸ್ಸೂರಿ, ಫ್ಲೋರಿಡ ಮತ್ತು ನ್ಯೂಯಾರ್ಕ್ ಕೋರ್ಟುಗಳಲ್ಲಿ ಚೀನೀ ಸರಕಾರದ ವಿರುದ್ಧ ಪರಿಹಾರಕ್ಕೆ ಮೊಕದ್ದಮೆಗಳನ್ನು ಹಾಕಲಾಗಿದೆ. ಮಿಸ್ಸೂರಿಯಲ್ಲಿ ಆ ಪ್ರಾಂತ್ಯದ ಅಟಾರ್ನಿ ಜನರಲ್ ಪರಿಹಾರ ಕೊಡಬೇಕು ಎಂದು ಮೊಕದ್ದಮೆ ಹಾಕಿದ್ದಾರೆ. ಒಬ್ಬ ಅಮೆರಿಕನ್ ವಕೀಲ ಅಂತರ್ರಾಷ್ಟ್ರೀಯ ಕ್ರಿಮಿನಲ್ ಕೋರ್ಟಿನಲ್ಲಿ ಒಂದು ಮೊಕದ್ದಮೆಯನ್ನು ಹಾಕಿದ್ದಾರೆ, ಚೀನಾ ಉದ್ದೇಪೂರ್ವಕವಾಗಿಯೆ ಒಂದು ಜೈವಿಕ ಶಸ್ತ್ರಾಸ್ತ್ರವಾಗಿ ಈ ವೈರಸನ್ನು ಬೆಳೆಸಿದೆ, ಇದು "ಮಾನವಕುಲದ ವಿರುದ್ಧ ಮಾಡಿರುವ ಒಂದು ಅಪರಾಧ" ಎಂದು ಆಪಾದಿಸಿದ್ದಾರೆ.

ಚೀನಾವನ್ನು ಬಲಿಪಶು ಮಾಡುವುದನ್ನು ಪಾಶ್ಚಿಮಾತ್ಯ ಕಾರ್ಪೊರೇಟ್ ಮಾಧ್ಯಮಗಳು ಒಂದು ಕಸುಬಾಗಿ ಮಾಡಿಕೊಂಡಿವೆ. ವಿವಿಧ ಛಾಯೆಗಳ ರಾಜಕೀಯ ಟಿಪ್ಪಣಿಕಾರರು ಈ ವಾದ್ಯವೃಂದವನ್ನು ಸೇರಿಕೊಳ್ಳುತ್ತಿದ್ದಾರೆ.

ಈ ಮಹಾಮಾರಿಯ ವಿರುದ್ಧ ಹೋರಾಡುವಲ್ಲಿ ಜಾಗತಿಕ ಐಕ್ಯತೆ ಮತ್ತು ಸೌಹಾರ್ದತೆ ಬೇಕಾಗಿರುವ ಸಮಯದಲ್ಲಿ ಟ್ರಂಪ್ ಆಡಳಿತ ಇಂತಹ ಹಸಿ ಸುಳ್ಳಿನ ಮತ್ತು ವಿಭಜನಕಾರಿ ಪ್ರಚಾರವನ್ನು ಕೈಗೆತ್ತಿಕೊಂಡಿದೆ? ಇದಕ್ಕೆ ಮೂರು ಕಾರಣಗಳಿವೆ: ಮೊದಲನೆಯದಾಗಿ, ಈ ಕೊರೊನ ವೈರಸ್ ಬೆದರಿಕೆಯನ್ನು ಟ್ರಂಪ್ ಆಡಳಿತ ಎಷ್ಟು ವಿನಾಶಕಾರಿ ರೀತಿಯಲ್ಲಿ ನಿಭಾಯಿಸಿದೆ ಎಂಬುದರಿಂದ ಜನಗಳ ಗಮನವನ್ನು ಬೇರೆಡೆಗೆ ತಿರುಗಿಸಲು.

ಎರಡನೆಯದಾಗಿ, ಈ ಅಧ್ಯಕ್ಷೀಯ ಚುನಾವಣೆಗಳ ವರ್ಷದಲ್ಲಿ, ಟ್ರಂಪ್ ಮತ್ತು ಆಳುವ ರಿಪಬ್ಲಿಕನ್ ರಾಜಕಾರಣಿಗಳು ತಮ್ಮ ರಾಷ್ಟ್ರವಾದಿ ಮತ್ತು ಬಲಪಂಥೀಯ ಬೆಂಬಲಿಗರಲ್ಲಿ ಹುರುಪು ತುಂಬಲು ಚೀನಾದ ಮೇಲೆ ಗುರಿಯಿಟ್ಟು, ಚೀನೀ-ವಿರೋಧಿ ಭಾವನೆಗಳನ್ನು ಬಡಿದೆಬ್ಬಿಸ ಬಯಸುತ್ತಿದ್ದಾರೆ, ಆಮೂಲಕ ಸರಕಾರ ನಡೆಸುವಲ್ಲಿ ತಮ್ಮ ಒಟ್ಟಾರೆ ಅಸಮರ್ಥತೆಯನ್ನು ಮುಚ್ಚಿಕೊಳ್ಳ ಬಯಸುತ್ತಿದ್ದಾರೆ.

ಅಂತಿಮವಾಗಿ, ಇದರ ಹಿಂದಿರುವ ಮೂಲ ಕಾರಣವೆಂದರೆ, ಚೀನಾ ಕೊವಿಡ್ ನಂತರದ ಅವಧಿಯಲ್ಲಿ ಇನ್ನೂ ಬಲಶಾಲಿಯಾಗಿ ಮೂಡಿ ಬರುತ್ತದೆ ಎಂಬ ಸಾಮ್ರಾಜ್ಯಶಾಹಿ ಆಳುವ ವಲಯಗಳಲ್ಲಿನ ಭಯ. ಏಕೆಂದರೆ ಒಂದೆಡೆಯಲ್ಲಿ ಚೀನಾ ಇದನ್ನು ಪರಿಣಾಮಕಾರಿಯಾಗಿ ಎದುರಿಸಿದೆ ಮತ್ತು ಸಮರೋಪಾದಿಯಲ್ಲಿ ಈ ಮಹಾಮಾರಿಯನ್ನು ತಡೆಗಟ್ಟಿದ್ದರೆ, ಇನ್ನೊಂದೆಡೆಯಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನದ ಜಾಗತಿಕ ಪಾತ್ರ ಅವನತಿಯನ್ನು ಕಾಣುತ್ತಿದ್ದು, ಈ ಮಹಾಮಾರಿಯನ್ನು ಅದು ಎಷ್ಟು ಎರ್ರಾಬಿರ್ರಿಯಾಗಿ ಎದುರಿಸಿದೆ ಎಂಬುದು ಅದನ್ನು ಇನ್ನಷ್ಟು ಉಲ್ಬಗೊಳಿಸುತ್ತಿದೆ.

ಚೀನಾದ ವಿರುದ್ಧ ಹಾಕಿರುವ ಆಪಾದನೆಗಳೇ ಅಮೆರಿಕನ್ ಆಡಳಿತ ಎಷ್ಟು ದೂಷಣಾರ್ಹವಾಗಿದೆ ಎಂಬುದನ್ನು ತೆರೆದು ತೋರಿಸುತ್ತಿದೆ. ಈ ವೈರಸನ್ನು ಪ್ರಯೋಗಾಲಯದಲ್ಲಿ ತಯಾರಿಸಲಾಗಿದೆ ಎಂಬ ಆರೋಪವನ್ನು ಜಗತ್ತಿನಾದ್ಯಂತ ವಿಜ್ಞಾನಿಗಳು ತಳ್ಳಿ ಹಾಕಿದ್ದಾರೆ. ಅಲ್ಲದೆ, ಚೀನೀ ಸರಕಾರ ವೈರಸ್ ದಾಳಿಯ ಸ್ವರೂಪವನ್ನು ಅಡಗಿಸಿಟ್ಟಿಲ್ಲ, ಅಥವ ಅದರ ಮಾಹಿತಿಯನ್ನು ಅಂತರ್ರಾಷ್ಟ್ರೀಯವಾಗಿ ಹಂಚಿಕೊಳ್ಳುವುದನ್ನು ತಡೆದಿಲ್ಲ.

ವುಹಾನ್‌ನಲ್ಲಿ ಕೊರೊನ ವೈರಸ್‌ನ ಮೊದಲ ಸೋಂಕು ಕಂಡುಬಂದದ್ದು ಡಿಸೆಂಬರ್ 2019ರಲ್ಲಿ. ಡಿಸೆಂಬರ್ 1ರಂದು ಮೊದಲ ರೋಗಿಯಿಂದ ಹಿಡಿದು, ಡಿಸೆಂಬರ್ ಮೂರನೇ ವಾರದಲ್ಲಿ ಹಲವಾರು ಪ್ರಕರಣಗಳು ಕಾಣಿಸಿಕೊಳ್ಳುವ ವರೆಗೆ , ಇದು ಅಸ್ತಿತ್ವದಲ್ಲಿರುವ ಕಾಯಿಲೆ ಅಲ್ಲ ಎಂದು ಅರ್ಥಮಾಡಿಕೊಳ್ಳಲು ವೈದ್ಯರಿಗೆ ಮತ್ತು ವೈದ್ಯಕೀಯ ಪರಿಣಿತರಿಗೆ ಸ್ವಲ್ಪ ಸಮಯ ತಗುಲಿತ್ತು. ಪರೀಕ್ಷಣೆಗಳ ನಂತರವೇ, ವುಹಾನ್ ಇರುವ ಹುಬೈ ಪ್ರಾಂತ್ಯದ ರೋಗ ಹತೋಟಿ ಮತ್ತು ತಡೆ ಕೇಂದ್ರ ಇದೊಂದು ಹೊಸ ವೈರಸ್ ಎಂಬ ತೀರ್ಮಾನಕ್ಕೆ ಬಂತು. ಮರುದಿನವೇ, ಅಂದರೆ ಡಿಸೆಂಬರ್ 30ರಂದು ಅವರು ರೋಗ ಹತೋಟಿಯ ಚೀನೀ ರಾಷ್ಟ್ರೀಯ ಕೇಂದ್ರಕ್ಕೆ ಇದನ್ನು ತಿಳಿಸಿದರು. ಡಿಸೆಂಬರ್ 31ರಂದು ಈ ಕೇಂದ್ರಿಯ ರೋಗ ಹತೋಟಿ ಸಂಸ್ಥೆ ವಿಶ್ವ ಆರೋಗ್ಯ ಸಂಘಟನೆ(ಡಬ್ಲ್ಯುಹೆಚ್‌ಒ)ಗೆ ಇದನ್ನು ತಿಳಿಸಿತು.

ಜನವರಿ 3 ರಂದು, ಈ ವೈರಸನ್ನು ಸಾರ್ಸ್-ಕೊವ್-2 (SARS-CoV-2) ಎಂದು ಗುರುತಿಸಲಾಯಿತು. ಮುಂದೆ ಇದನ್ನು ಕೊವಿಡ್-19 ಎಂದು ಹೆಸರಿಸಲಾಯಿತು. ಈ ವೈರಸ್‌ನ ಜಿನೋಮ್ ಸರಣಿಯನ್ನು ಅನಾವರಣಗೊಳಿಸಲು ಚೀನೀ ವಿಜ್ಞಾನಿಗಳು ಹಗಲು ರಾತ್ರಿ ಕೆಲಸ ಮಾಡಿದರು. ಜನವರಿ 9 ರಂದು ಅವರು ಈ ಹೊಸ ಕೊರೊನ ವೈರಸಿನ ಜೆನೆಟಿಕ್ ಸರಣಿಯನ್ನು ಡಬ್ಲ್ಯು.ಹೆಚ್.ಒ.ದೊಂದಿಗೆ ಹಂಚಿ ಕೊಂಡರು. ಅಂದಿನಿಂದಲೇ ಇದರ ಮಾಹಿತಿ ಸಾರ್ವಜನಿಕವಾಗಿ ಲಭ್ಯವಿದೆ

ಈ ವೈರಸ್‌ನ ಜೆನೆಟಿಕ್ ಸಂರಚನೆಯ ತ್ವರಿತ ವಿಶ್ಲೇಷಣೆಯಿಂದಾಗಿಯೇ ಈಗ ಒಂದು ನಿರೋಧಕ ಚುಚ್ಚು ಮದ್ದನ್ನು ಕಂಡು ಹಿಡಿಯುವ ಜಗದ್ವ್ಯಾಪಿ ಪರಿಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಹುಬೈ ಸರಕಾರದ ಮಟ್ಟದಲ್ಲಿ ಕೆಲವು ಅಧಿಕಾರಿಗಳು ಜನವರಿ ಆರಂಭದಲ್ಲಿ ಈ ವೈರಸ್‌ನ ಗಂಭೀರ ಸ್ವರೂಪವನ್ನು ಕಡೆಗಣಿಸಿದರು. ಆದರೆ ಅವರನ್ನು ತ್ವರಿತವಾಗಿ ತೆಗೆದು ಹಾಕಲಾಯಿತೇ ವಿನಃ ಮರೆಮಾಚುವ ಪ್ರಯತ್ನವೇನೂ ನಡೆಯಲಿಲ್ಲ.

ಜನವರಿ 1, 2020ರಂದು ಚೀನೀ ರೋಗ ಹತೋಟಿ ಕೇಂದ್ರದ ಅಧಿಕಾರಿಗಳು ಅಮೆರಿಕ ಸಂಯುಕ್ತ ಸಂಸ್ಥಾನಗಳ ರೋಗ ಹತೋಟಿ ಮತ್ತು ನಿರೋಧ ಕೇಂದ್ರದ ಮುಖ್ಯಸ್ಥ ರಾಬರ್ಟ್ ರೆಡ್‌ಫೀಲ್ಡ್‌ರವರಿಗೆ ಹೊಸ ವೈರಸ್‌ನ ಮಾಹಿತಿಯನ್ನು ನೀಡಿದರು. ಕೆಲವು ದಿನಗಳ ನಂತರ ಚೀನೀ ಕೇಂದ್ರದ ಮುಖ್ಯಸ್ಥ ಡಾ. ಜಾರ್ಜ್ ಎಫ್ ಗಾವೊ ರೆಡ್‌ಫೀಲ್ಡ್ ಜತೆ ಮಾತಾಡಿ ಈ ವೈರಸ್‌ನ ಬೆದರಿಕೆಯ ಗಂಭೀರತೆಯನ್ನು ತಿಳಿಯ ಪಡಿಸಿದರು. ಆದ್ದರಿಂದ ಚೀನಾ ಮಾಹಿತಿಯನ್ನು ಹಂಚಿಕೊಳ್ಳಲಿಲ್ಲ ಎಂದು ಟ್ರಂಪ್ ಹಾಗೂ ಪೊಂಪಿಯೊ ಹೇಳುತ್ತಿರುವುದು ಸುಳ್ಳು ಎಂದು ಸ್ಪಷ್ಟವಾಗುತ್ತದೆ.

ಟ್ರಂಪ್ ಅವರ ವ್ಯಾಪಾರ ಸಲಹೆಗಾರ ಪೀಟರ್ ನವರ್ರೊ ಜನವರಿ ಕೊನೆಯಲ್ಲಿ ಮತ್ತು ಫೆಬ್ರುವರಿಯಲ್ಲಿ ವೈರಸ್ ಸಾಂಕ್ರಾಮಿಕದ ಬೆದರಿಕೆಯ ಅಪಾಯದ ಬಗ್ಗೆ ಎಚ್ಚರಿಸುತ್ತ ಮನವಿ ಪತ್ರಗಳನ್ನು ಸಲ್ಲಿಸಿದರು. ಆದರೆ ಟ್ರಂಪ್ ಸತತವಾಗಿ ವೈರಸ್‌ನ ಅಪಾಯವನ್ನು ತಳ್ಳಿ ಹಾಕುತ್ತ ಬಂದರು. ಈಗ ಚೀನಾ ಮಾಹಿತಿಯನ್ನು ಹಂಚಿಕೊಳ್ಳಲಿಲ್ಲ, ಈ ವೈರಸ್ ಕುರಿತ ಸತ್ಯವನ್ನು ಬಚ್ಚಿಟ್ಟಿತು ಎಂದು ಆಪಾದಿಸುವುದು ಶುದ್ಧ ಅಪ್ರಾಮಾಣಿಕತೆ ಮತ್ತು ಕುತರ್ಕವಷ್ಟೇ.

ಕೊವಿಡ್-19ನ್ನು 'ಚೀನೀ ವೈರಸ್' ಎಂದು ಕರೆದಿರುವುದು ಸಂಕುಚಿತ ಜನಾಂಗವಾದ ಎಂದು ಚೀನಾ ಟ್ರಂಪ್ ಮತ್ತು ಆತನ ಸಂಗಡಿಗನನ್ನು ಆಪಾದಿಸಿರುವುದು ಸರಿಯಾಗಿಯೇ ಇದೆ. ಎಪ್ರಿಲ್ 2009ರಲ್ಲಿ ಅಮೆರಿಕಾದ ಕ್ಯಾಲಿಫೋರ್ನಿಯಾದಲ್ಲಿ ಹೆಚ್1ಎನ್1 ವೈರಸ್ ಪತ್ತೆಯಾದಾಗ, ಮತ್ತು ಅದು ಒಂದು ಮಹಾಮಾರಿಯಾದಾಗ ಅದನ್ನು 'ಅಮೆರಿಕನ್ ವೈರಸ್' ಎಂದೇನೂ ಕರೆಯಲಿಲ್ಲ ಎಂದು ಚೀನೀ ಅಧಿಕೃತ ವಕ್ತಾರರು ನೆನಪಿಸಿದ್ದಾರೆ. 19ನೇ ಶತಮಾನದಿಂದಲೇ ಅಮೆರಿಕನ್ ಇತಿಹಾಸ 'ಹಳದಿ ಪೀಡೆ' ಮುಂತಾದ ಮಾತುಗಳಿಂದ ತುಂಬಿದೆ. ಟ್ರಂಪ್ ಈ ಕಣ್ಣೋಟವನ್ನು ಪ್ರತಿಧ್ವನಿಸುತ್ತಿದ್ದಾರಷ್ಟೇ.



ಮೂರು ತಿಂಗಳ ನಿಷ್ಕ್ರಿಯೆಯ ನಂತರ ಕ್ರಿಯೆ-ಡಬ್ಲ್ಯುಹೆಚ್‌ಒ ವಿರುದ್ಧ !
ವ್ಯಂಗ್ಯಚಿತ್ರ: ಮಂಜುಲ್, ಫಸ್ಟ್ ಪೋಸ್ಟ್

ಟ್ರಂಪ್ ವಿಶ್ವ ಆಹಾರ ಸಂಘಟನೆಯ ಮೇಲೂ ಹರಿಹಾಯ್ದಿದ್ದಾರೆ. ವಾಸ್ತವವಾಗಿ ಅದು ವುಹಾನ್‌ನಲ್ಲಿ ವೈರಸ್ ಕಂಡಬಂದದ್ದು ಮತ್ತು ಅದನ್ನು ನಿಭಾಯಿಸುವಲ್ಲಿ ಚೀನೀ ಸರಕಾರದ ಪ್ರಯತ್ನಗಳ ಬಗ್ಗೆ ಒಂದು ವಸ್ತುನಿಷ್ಟ ಮತ್ತು ವೈಜ್ಞಾನಿಕ ವರದಿಯನ್ನು ಒದಗಿಸಿದೆ. ಅದು ಮಾರ್ಚ್ 11ರಂದು ಕೊವಿಡ್-19ನ್ನು ಒಂದು ಮಹಾಮಾರಿ ಎಂದು ಘೋಷಿಸಿತು. ಟ್ರಂಪ್, ಈ ಮಾರಣಾಂತಿಕ ಕಾಯಿಲೆಯ ವಿರುದ್ಧ ಹೋರಾಟಕ್ಕೆ ಎಲ್ಲ ಸಂಪನ್ಮೂಲಗಳನ್ನೂ ಬಳಸಬೇಕಾದ ಸಮಯದಲ್ಲೇ ಈ ಜಾಗತಿಕ ಸಂಸ್ಥೆಗೆ ಅಮೆರಿಕಾದ ದೇಣಿಗೆಯನ್ನು ನಿಲ್ಲಿಸಿ ಬಿಡುವ ಕ್ರಿಮಿನಲ್ ಕ್ರಮವನ್ನು ಕೈಗೊಂಡಿದ್ದಾರೆ.

ಚೀನೀ-ವಿರೋಧಿ ಪ್ರಚಾರ ಭಾರತದಲ್ಲೂ ಹಬ್ಬಿದೆ. ಚೀನಾವನ್ನು ಟೀಕಿಸುವ, ಪಾಶ್ಚಿಮಾತ್ಯ ಮಾಧ್ಯಮಗಳಲ್ಲಿ ಬರೆದವುಗಳನ್ನು ಅರಗಿಸಿಕೊಳ್ಳಲೂ ಹೋಗದೆ ಕಣ್ಣುಮುಚ್ಚಿ ಒಪ್ಪಿಸುವ ಸಂಪಾದಕೀಯಗಳು, ಟಿಪ್ಪಣಿಗಳು ಕಾಣ ಬಂದಿವೆ. ಮೋದಿ ಸರಕಾರ ಚೀನಾವನ್ನು ದೂಷಿಸುವಲ್ಲಿ ಬ್ರೆಝಿಲ್ ಅಧ್ಯಕ್ಷ ಬೊಲ್ಸೆನಾರೊರಂತಹ ತನ್ನ ಮಿತ್ತರ ಜತೆಗೂಡಿಲ್ಲವಾದರೂ, ಬಲಪಂಥೀಯ ಹಿಂದುತ್ವ ಶಕ್ತಿಗಳು ಸಾಮಾಜಿಕ ಮಾಧ್ಯಮಗಳಲ್ಲಿ ಅಸಂಬದ್ಧ ಚೀನೀ-ವಿರೋಧಿ ಕತೆಗಳನ್ನು ಹಬ್ಬಿಸುವಲ್ಲಿ ತೊಡಗಿಕೊಂಡಿವೆ. ಈ ಬುದ್ಧಿಗೇಡಿ ಮಂದೆಗಳಿಗೆ ಕೊರೊನ ವೈರಸ್ ಎಂದರೆ ಆಂತರಿಕವಾಗಿ ಮುಸ್ಲಿಮರು, ಹೊರಗಿನಿಂದ ಚೀನೀಯರು

ಆದರೆ ಮೋದಿ ಸರಕಾರ ಅಮೆರಿಕದೊಂದಿಗೆ ನಿಕಟ ಸಾಮರಿಕ ಬಂಧಗಳ ಪ್ರಭಾವದಲ್ಲಿದೆ. ಅಮೆರಿಕನ್ ವಿದೇಶಾಂಗ ಕಾರ್ಯದರ್ಶಿ ಪೊಂಪಿಯೊ ಎಪ್ರಿಲ್ ಮಧ್ಯದಲ್ಲಿ ಅಮೆರಿಕ ಮತ್ತು ಭಾರತ ಕೊರೊನ ವೈರಸ್ ವಿರುದ್ಧ ಹೋರಾಟದಲ್ಲಿ ಸಹಕರಿಸುತ್ತಿವೆ ಎಂದು ಪತ್ರಕರ್ತರಿಗೆ ಹೇಳಿದರು. ಆದರೆ "ನಾವು ಇನ್ನೂ ದೊಡ್ಡ ವಿಷಯಗಳ ಬಗ್ಗೆ, ಮುಕ್ತ ಮತ್ತು ತೆರೆದ ಇಂಡೋ-ಫೆಸಿಫಿಕ್, ಚೀನಾದ ಸವಾಲು ಮತ್ತು ವ್ಯಾಪಾರದ ಬಗ್ಗೆ ಮಾತುಕತೆಗಳನ್ನು ಮುಂದುವರೆಸುತ್ತೇವೆ" ಎಂದು ಸೇರಿಸಿದರು. ಇಲ್ಲೇ ಬರುವುದು ಭೌಗೋಳಿಕ-ರಾಜಕೀಯ: ಚೀನಾದ ಸವಾಲು. ಜಪಾನ್ ಚೀನಾದಿಂದ ಹೂಡಿಕೆಗಳನ್ನು ಹಿಂತೆಗೆದುಕೊಳ್ಳುವ ಪ್ರಯತ್ನ ನಡೆಸುತ್ತಿರುವಂತೆ, ಚೀನಾದೊಂದಿಗೆ ಆರ್ಥಿಕ ಸಂಬಂಧಗಳನ್ನು ಕಡಿತಗೊಳಿಸಬೇಕು ಎಂದು ಅಮೆರಿಕಾ ಭಾರತವನ್ನು ತಿವಿಯುತ್ತಿದೆ. ಈ ಸಂಕೇತವನ್ನು ಎತ್ತಿಕೊಂಡಿರುವ ಸರಕಾರದ ಮಂತ್ರಿಗಳು ಚೀನಾದಲ್ಲಿ ಹೂಡಿಕೆ ಮಾಡಿರುವ ಕಂಪನಿಗಳು ಅದರ ಬದಲು ಭಾರತಕ್ಕೆ ಬರುವಂತೆ ಓಲೈಸುವ ಮಾತಾಡುತ್ತಿದ್ದಾರೆ.

ದೇಶ ಒಂದು ಗಂಭೀರ ಬಿಕ್ಕಟ್ಟನ್ನು ಎದುರಿಸುತ್ತಿರುವಾಗ, ಮತ್ತು ಅರ್ಥವ್ಯವಸ್ಥೆ ಸಂಕುಚನಗೊಳ್ಳುತ್ತಿರುವಾಗ, ಚೀನಾ ಕುರಿತಂತೆ ಈ ನಿಲುವು ಭಾರತದ ಹಿತದೃಷ್ಟಿಯಿಂದಲೋ ಅಥವ ಅಮೆರಿಕಾದ ಹಿತಕ್ಕಾಗಿಯೋ ಎಂಬ ಒಂದು ಪ್ರಸ್ತುತ ಪ್ರಶ್ನೆಯನ್ನು ಕೇಳಬೇಕಾಗುತ್ತದೆ. ಆದರೆ ಈ ಪ್ರಶ್ನೆಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಉತ್ತರ ಕೊಡುವುದಿರಲಿ, ಆ ಪ್ರಶ್ನೆಯೇ ಅವರಿಗೆ ಬೇಕಾಗಿಲ್ಲ.

ಇಂತಹ ಸಂದರ್ಭದಲ್ಲಿ ಚೀನಾ-ವಿರೋಧಿ ಪಡೆಯನ್ನು ಸೇರಿಕೊಳ್ಳುವುದು ಎಂದರೆ ಒಬ್ಬ ತರ್ಕಹೀನ ಮತ್ತು ಸ್ವಾರ್ಥಪರ ಅಧ್ಯಕ್ಷನ ತಿಕ್ಕಲುತನಗಳಿಗೆ ದೇಶವನ್ನು ಒಳಪಡಿಸಿದಂತಾಗುತ್ತದೆ ಮತ್ತು ಸಾಮ್ರಾಜ್ಯಶಾಹಿ ಹಿತಗಳಿಗೆ ಹೆಚ್ಚು ಋಣಿಯಾಗಿರುವಂತೆ ಮಾಡುತ್ತದೆ.

ಕೋವಿಡ್ ಕ್ರಮಗಳ ಬಗ್ಗೆ ಪ್ರಧಾನ ಮಂತ್ರಿಗಳಿಗೆ ಸೀತಾರಾಮ್ ಯೆಚುರಿಯವರ ಇನ್ನೊಂದು ಪತ್ರ

“ನಿಮ್ಮ ಆಳ್ವಿಕೆಯ ವಿಧಾನದಲ್ಲಿ ಪ್ರಜಾಸತ್ತಾತ್ಮಕ ಜವಾಬುದಾರಿಕೆ ಸಂಪೂರ್ಣವಾಗಿ ಕಾಣೆಯಾಗಿದೆ”



ಪ್ರಧಾನ ಮಂತ್ರಿ ಮೋದಿಯವರು ತನ್ನ ಧೋರಣೆಗಳಿಂದ ಜನರು ಪಡುತ್ತಿರುವ ಪಾಡುಗಳ ಬಗ್ಗೆ ಸ್ವಲ್ಪವೂ ಪರಿವೆಯಿಲ್ಲದೆ ಕೇವಲ ಪ್ರಚಾರ ಗಿಟ್ಟಿಸುವ ತನ್ನ ಅಭಿಯಾನವನ್ನು ಮುಂದುವರೆಸಿದ್ದಾರೆ. ಅವರು ಮತ್ತು ಅವರ ಸರಕಾರ ಲಾಕ್‌ಡೌನಿನ ಐದನೇ ವಾರದಲ್ಲಿ 12 ಪ್ರಶ್ನೆಗಳನ್ನು ಉತ್ತರಿಸಬೇಕಾಗಿದೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಎಪ್ರಿಲ್ 26ರಂದು ಪ್ರಧಾನ ಮಂತ್ರಿಗಳಿಗೆ ಇನ್ನೊಂದು ಪತ್ರ ಬರೆದಿದ್ದಾರೆ.

ಕೊವಿಡ್–19 ಮಹಾಮಾರಿಯ ವಿರುದ್ಧ ದೇಶದ ಐಕ್ಯ ಸಮರವನ್ನು ನಡೆಸಬೇಕಾಗಿರುವ ಸಂದರ್ಭದಲ್ಲಿ ಒಂದು ಸರ್ವಪಕ್ಷ ಸಭೆಯನ್ನೂ ಕರೆಯದ್ದರಿಂದ ಯೆಚುರಿಯವರು ಮಾರ್ಚ್ 23 ರಂದು ಪ್ರಧಾನಿಗಳಿಗೆ, ಲಾಕ್‌ಡೌನ್ ಪ್ರಕಟಿಸಿದ 36 ಗಂಟೆಗಳ ನಂತರವೇ ಕೇವಲ ದೇಶದ ಜಿಡಿಪಿಯ 1 ಶೇ.ಕ್ಕಿಂತಲೂ ಕಡಿಮೆ ಮೊತ್ತದ ‘ನೆರವು ಪ್ಯಾಕೇಜ್’ ಎಂಬುದನ್ನು ಹಣಕಾಸು ಮಂತ್ರಿಗಳು ಪ್ರಕಟಿಸಿದ ನಂತರ ಮತ್ತು ಎಪ್ರಿಲ್ 7ರಂದು ರಾಷ್ಟ್ರಪತಿಗಳಿಗೆ ಪತ್ರ ಬರೆದು ಪರಿಸ್ತಿತಿಯ ಗಂಭೀರತೆಯನ್ನು ಎತ್ತಿ ತೋರಬೇಕಾಗಿ ಬಂದಿತ್ತು. ಈಗಲೂ ವಿಸ್ತರಿತ 40 ದಿನಗಳ ಲಾಕ್‌ಡೌನಿನ ಕೊನೆಯ ವಾರವನ್ನು ಪ್ರವೇಶಿಸುತ್ತಿರುವ ಸಂದರ್ಭದಲ್ಲಿ ಪರಿಸ್ಥಿತಿ ಹಾಗೆಯೇ ಮುಂದುವರೆದಿರುವುದರಿಂದ ಮತ್ತೊಮ್ಮೆ ಪ್ರಧಾನಿಗಳ ಗಮನವನ್ನು ದೇಶ ಮತ್ತು ನಮ್ಮ ಬಹುಪಾಲು ಜನಗಳು ಎದುರಿಸುತ್ತಿರುವ ಬಹು ಜರೂರಿನ ಪ್ರಶ್ನೆಗಳತ್ತ ಸೆಳೆಯಲು ಯೆಚುರಿಯವರು ಈ ಪತ್ರವನ್ನು ಬರೆದಿದ್ದಾರೆ. ಪೂರ್ಣಪಾಠವನ್ನು ಈ ಮುಂದೆ ಕೊಡಲಾಗಿದೆ:



ಪ್ರಿಯ ಪ್ರಧಾನ ಮಂತ್ರಿಗಳೇ,

ದುರದೃಷ್ಟವಶಾತ್, ಈ ಲಾಕ್‌ಡೌನಿನಲ್ಲಿ ನಿಮಗೆ ಮತ್ತೊಮ್ಮೆ ಬರೆಯಲೇ ಬೇಕಾಗಿ ಬಂದಿದೆ. ಲಾಕ್‌ಡೌನಿನ ಅವಧಿಯಲ್ಲಿ ನಮ್ಮ ಜನಗಳ ಬಹುದೊಡ್ಡ ವಿಭಾಗದ ಸಂಕಷ್ಟಗಳ್ನು ಶಮನಗೊಳಿಸಲು ಕೇಂದ್ರ ಸರಕಾರ ಕೈಗೊಳ್ಳಬೇಕಾದ ವಿವಿಧ ಕ್ರಮಗಳನ್ನು ಪಟ್ಟಿ ಮಾಡಿ ತಮಗೆ ಈ ಮೊದಲು ಬರೆದ ಪತ್ರಗಳಿಗೆ ಉತ್ತರ ಸಿಗದೇ ಹೋಗಿದೆ. ನಿಜ ಹೇಳಬೇಕೆಂದರೆ, ಅದು ತಲುಪಿದೆ ಎಂದೂ ತಿಳಿಸಿಲ್ಲ. ಇದು ಅಸಾಮಾನ್ಯ ಸಂಗತಿ.

ನಾನು ಮತ್ತೊಮ್ಮೆ ನಿಮ್ಮ ಗಮನವನ್ನು ದೇಶ ಮತ್ತು ನಮ್ಮ ಬಹುಪಾಲು ಜನಗಳು ಎದುರಿಸುತ್ತಿರುವ ಬಹು ಜರೂರಿನ ಪ್ರಶ್ನೆಗಳತ್ತ ಸೆಳೆಯಲು ಪ್ರಯತ್ನಿಸುತ್ತಿದ್ದೇನೆ.

40 ದಿನಗಳ ಲಾಕ್‌ಡೌನಿನ ಕೊನೆಯ ವಾರವನ್ನು ಪ್ರವೇಶಿಸುತ್ತಿದ್ದೇವೆ. ನೀವು ಇದನ್ನು ಕೇವಲ ನಾಲ್ಕು ಗಂಟೆಗಳ ನೋಟಿಸಿನಲ್ಲೇ ಇದ್ದಕ್ಕಿದ್ದಂತೆ, ಹಠಾತ್ತಾಗಿ ಪ್ರಕಟಿಸಿದಿರಿ. ಇದರಿಂದಾಗಿ ಜನಗಳು ಮತ್ತು ರಾಜ್ಯಸರಕಾರಗಳು ಏನೇನೂ ಸಿದ್ಧತೆಯಿಲ್ಲದ್ದರಿಂದ ಗಂಭೀರ ಪರಿಣಾಮಗಳನ್ನು ಎದುರಿಸುವಂತಾಗಿದೆ.

1. ವಲಸೆ ಕಾರ್ಮಿಕರು: ಲಾಕ್‌ಡೌನಿನ ನಂತರ ತಮ್ಮ ಮನೆಗಳಿಗೆ ಹಿಂದಿರುಗ ಬೇಕೆಂಬ ವಲಸೆ ಕಾರ್ಮಿಕರ ಆಕಾಂಕ್ಷೆಯಿಂದಾಗಿ ಅಪಾರ ಸಂಖ್ಯೆಯ ಜನಸಂದಣಿ ಮನೆಯ ಕಡೆಗೆ ಹೊರಟದ್ದು ಕಂಡು ಬಂತು. ಜೀವನೋಪಾಯದ ಮತ್ತು ಆಶ್ರಯದ ಎಲ್ಲ ಸಾಧನಗಳನ್ನು ಕಳಕೊಂಡು ಅವರು ತಮ್ಮ ಮನೆಗಳಿಗೆ ಹೋಗುವ ಪ್ರಯತ್ನದಲ್ಲಿದ್ದವರು. ಇದೇ ಲಾಕ್‌ಡೌನಿನ ಒಂದು ಗುರಿಗೆ, ಅಂದರೆ, ಮಹಾಮಾರಿಯಯ ಸಮುದಾಯ ಪ್ರಸರಣವನ್ನು ತಡೆಯಲು ದೈಹಿಕ ಅಂತರವನ್ನು ಕಾಯ್ದುಕೊಳ್ಳಬೇಕೆಂಬ ಗುರಿಗೇ ನಕಾರ ಹಾಕಿದಂತಾಯಿತು. ಹಸಿವು, ಅಪೌಷ್ಟಿಕತೆ ಮತ್ತು ವಸತಿಹೀನತೆ ನಮ್ಮ ಕೋಟ್ಯಂತರ ಜನಗಳನ್ನು ಈಗಲೂ ಬಾಧಿಸುತ್ತಿವೆ. ಲಾಕ್‌ಡೌನ್ ಪ್ರಕಟಣೆಯಾದಂದಿನಿಂದ ನಾವು, ತಕ್ಷಣವೇ, ಅಗತ್ಯವಿರುವ ಎಲ್ಲರಿಗೂ ಉಚಿತ ಆಹಾರ ಒದಗಿಸಬೇಕು ಎಂದು ನಾವು ಸೂಚಿಸಿದ್ದೆವು. ನಮ್ಮ ಕೇಂದ್ರೀಯ ಗೋದಾಮುಗಳಲ್ಲಿ ಆಹಾರಧಾನ್ಯಗಳ ಅಗಾಧ ದಾಸ್ತಾನುಗಳು ಕೊಳೆಯುತ್ತಿವೆ. ಇವನ್ನು ರಾಜ್ಯಗಳಿಗೆ ಉಚಿತ ವಿತರಣೆಗೆ ಕಳಿಸಬೇಕು. ನೀವು ಪ್ರಧಾನ ಮಂತ್ರಿಯಾಗಿರುವ ಸರಕಾರ ಈ ಯಾವ ಬೇಡಿಕೆಗಳನ್ನೂ ಗಮನಕ್ಕೂ ತಗೊಂಡಿಲ್ಲ.

2. ನಿರುದ್ಯೋಗ: ಫೆಬ್ರುವರಿ ಮತ್ತು ಎಪ್ರಿಲ್ ನಡುವೆ ನಿರುದ್ಯೋಗಿಗಳ ಸಂಖ್ಯೆ 340 ಲಕ್ಷದಿಂದ 880 ಲಕ್ಷಕ್ಕೆ ಏರಿದೆ ಎಂದು ಅಂದಾಜು ಮಾಡಲಾಗಿದೆ. ಅಂದರೆ ಇನ್ನೂ 540 ಲಕ್ಷ ಜನಗಳು ತಮ್ಮ ಜೀವನೋಪಾಯಗಳನ್ನು ಕಳಕೊಂಡಿದ್ದಾರೆ. ಅಲ್ಲದೆ, ಇನ್ನೂ 680 ಲಕ್ಷ ಜನಗಳು ಶ್ರಮ ಶಕ್ತಿಯಿಂದ ಹೊರಗೆ ಹೋಗಿದ್ದಾರೆ. ಮಹಾಮಾರಿ ಎರಗಿದ ನಂತರ 12.2 ಕೋಟಿಯಷ್ಟು ಭಾರಿ ಸಂಖ್ಯೆಯಲ್ಲಿ ಜನಗಳು ಉದ್ಯೋಗಗಳನ್ನು ಮತ್ತು ಜೀವನೋಪಾಯಗಳನ್ನು ಕಳಕೊಂಡಿದ್ದಾರೆ. ಮಾರ್ಚ್ ಆರಂಭದಿಂದ ಎಪ್ರಿಲ್ 20ರ ವರೆಗಿನ, ಲಾಕ್‌ಡೌನ್ ಅವಧಿಯನ್ನು ಒಳಗೊಂಡಿರುವ ಆರು ವಾರಗಳಲ್ಲಿ ನಿರುದ್ಯೋಗ ದರ 7.5 ದಿಂದ 23.6ಶೇ. ಕ್ಕೆ ನೆಗೆದಿದೆ. ಕೇಂದ್ರ ಸರಕಾರ ತಕ್ಷಣವೇ ತಿಂಗಳಿಗೆ ರೂ.7500 ರಂತೆ ಮುಂದಿನ ಮೂರು ತಿಂಗಳು ಜೀವನೋಪಾಯ ಕಳಕೊಂಡಿರುವ ಎಲ್ಲರಿಗೂ ವರ್ಗಾಯಿಸುವುದು ಅನಿವಾರ್ಯವಾಗಿದೆ. ಖಂಡಿತವಾಗಿಯೂ, ಕಳೆದ ಐದು ವರ್ಷಗಳಲ್ಲಿ ಅತಿ ಶ್ರೀಮಂತರು ಮತ್ತು ಕಾರ್ಪೊರೇಟ್‌ಗಳು ತೆಗೆದು ಕೊಂಡಿರುವ ರೂ.7.76 ಕ್ಷ ಕೋಟಿ ರೂ. ಗಳ ಭಾರೀ ಸಾಲ ಮೊತ್ತವನ್ನು ಮನ್ನಾ ಮಾಡಲು ನಿಮ್ಮ ಸರಕಾರಕ್ಕೆ ಸಾಧ್ಯವಾದರೆ, ನಮ್ಮ ಬಹುಪಾಲು ಜನಗಳಿಗೆ ಆಹಾರವುಣ್ಣಿಸಲು ಮತ್ತು ಬೆಂಬಲಿಸಲು ಹಣದ ಕೊರತೆಯೇನೂ ಇರಬಾರದು.

3. ಸಹಕಾರಿ ಒಕ್ಕೂಟತತ್ವ?: ರಾಜ್ಯಗಳು ಮಹಾಮಾರಿಯನ್ನು ಎದುರಿಸುವ ರಣರಂಗದಲ್ಲಿವೆ. ಅವರಿಗೆ ಸಾಕಷ್ಟು ಹಣಕಾಸು ಮತ್ತು ಆಹಾರಧಾನ್ಯಗಳು ಹಾಗೂ ಇತರ ಆವಶ್ಯಕ ಸರಕುಗಳ ಪೂರೈಕೆಗಳು ಬೇಕಾಗಿವೆ. ಇಂತಹ ಯಾವ ಬೆಂಬಲವೂ ಇದುವರೆಗೂ ಕೇಂದ್ರ ಸರಕಾರದಿಂದ ಅರ್ಥಪೂರ್ಣ ರೀತಿಯಲ್ಲಿ ಬಂದಿಲ್ಲ. ಇದ್ದಕ್ಕಿದಂತೆ ರಾಷ್ಟ್ರವ್ಯಾಪಿ ಲಾಕ್‌ಡೌನಿನ ಪ್ರಕಟಣೆಯಿಂದಾಗಿ ವಲಸೆ ಕಾರ್ಮಿಕರಿಗೆ ಒಂದು ಬಿಕ್ಕಟ್ಟನ್ನು ಸೃಷ್ಟಿಸಲಾಯಿತು. ನೀವೀಗ ರಾಜ್ಯಸರಕಾರಗಳು ಆಶ್ರಯ, ಆಹಾರ ಒದಗಿಸಬೇಕು, ದೈಹಿಕ ಅಂತರವನ್ನು ಕಾಯ್ದುಕೊಳ್ಳಬೇಕು ಮತ್ತು ಇತರ ನಿರ್ಬಂಧಗಳನ್ನು ಪಾಲಿಸಬೇಕು ಎಂದು ಹೇಳುತ್ತಿದ್ದೀರಿ. ಇದು ಖಂಡಿತವಾಗಿಯೂ ನ್ಯಾಯವಲ್ಲ. ಜಿಎಸ್‌ಟಿ ಸಂಗ್ರಹಗಳಿಂದ ರಾಜ್ಯಗಳಿಗೆ ಕೊಡಬೇಕಾದ ಹಣ ಇನ್ನೂ ಬಾಕಿಯಿದೆ. ಅದನ್ನೂ ಇನ್ನೂ ಕೊಟ್ಟಿಲ್ಲ. ನಿಜವಾಗಿ, ತಕ್ಷಣದಿಂದಲೇ ರಾಜ್ಯಗಳಿಗೆ ಉದಾರವಾಗಿ ನಿಧಿಗಳನ್ನು ವರ್ಗಾಯಿಸಬೇಕಾಗಿದೆ.

4. ಹಣಕಾಸುಗಳು: ನಿಮ್ಮ ಹೆಸರು ಹೊತ್ತಿರುವ ಒಂದು ಖಾಸಗಿ ಟ್ರಸ್ಟ್‌ನಲ್ಲಿ ಸಾವಿರಾರು ಕೋಟಿ ರೂ.ಗಳನ್ನು ಸಂಗ್ರಹಿಸಲಾಗುತ್ತಿದ. ಈ ನಿಧಿಯನ್ನು ಸಿಎಜಿಯಾಗಲೀ, ಸರಕಾರ ನೇಮಿಸಿದ ಬೇರೆ ಯಾರೇ ಲೆಕ್ಕ ಪರಿಶೋಧಕರಾಗಲೀ ಪರಿಶೋಧಿಸುವುದಿಲ್ಲ ಎಂದು ಅಧಿಕೃತವಾಗಿಯೇ ಹೇಳಲಾಗಿದೆ. ಸರಕಾರೀ ನೌಕರರು ಮತ್ತು ಇತರರ ಸಂಬಳದಿಂದ ಕಡಿತಗೊಳಿಸುವ ಹಣವನ್ನು, ಪ್ರಧಾನ ಮಂತ್ರಿಗಳ ಅನಾಹುತ ಪರಿಹಾರ ನಿಧಿಗೆ ಕೊಟ್ಟರೂ, ಅವನ್ನೆಲ್ಲ ಬಲವಂತವಾಗಿ ಈ ನಿಧಿಗೆ ವರ್ಗಾಯಿಸಲಾಗುತ್ತಿದೆ. ಈ ನಿಧಿಯನ್ನು ಕೂಡಲೇ ಮಹಾಮಾರಿಯ ವಿರುದ್ಧ ಹೋರಾಟವನ್ನು ಬಲಪಡಿಸಲು ಅಗತ್ಯವಾದವುಗಳನ್ನು ಪಡೆಯಲು ಒದಗಿಸಬೇಕು.

5. ದುಂದು ವೆಚ್ಚಗಳನ್ನು ನಿಲ್ಲಿಸಬೇಕು: ಈ ಗಂಭೀರ ವೈದ್ಯಕೀಯ ತುರ್ತು ಪರಿಸ್ಥಿತಿಯನ್ನು ಎದುರಿಸುವಲ್ಲಿ ಹಣಕಾಸು ಸಂಕಟ ಇರುವ ಸಮಯದಲ್ಲಿ ಕೇಂದ್ರ ಸರಕಾರ ಪ್ರಧಾನ ಮಂತ್ರಿಗಳಿಗೆ ಹೊಸದೊಂದು ನಿವಾಸವೂ ಸೇರಿರುವ ಸೆಂಟ್ರಲ್ ವಿಸ್ತಾದಂತಹ ಅನಗತ್ಯ ವೆಚ್ಚಗಳನ್ನು, ಮತ್ತು ಇತರ ಸಾರ್ವಜನಿಕ ಪ್ರಚಾರದ ಕೆಲಸಗಳಿಗೆ ದುಂದು ವೆಚ್ಚಗಳನ್ನು ಮುಂದುವರೆಸುತ್ತಿರುವುದು ವಿಸ್ಮಯಕಾರಿಯಾಗಿದೆ, ಕ್ರಿಮಿನಲ್ ದುಂದುಗಾರಿಕೆಯೆಂದೇ ಹೇಳಬಹುದು. ಕಳೆದ ಐದು ವರ್ಷಗಳಲ್ಲಿ ಸಾರ್ವಜನಿಕ ಆರೋಗ್ಯ ಪಾಲನೆ, ಶಿಕ್ಷಣ ಇತ್ಯಾದಿಗಳ ಬದಲು, ಪ್ರತಿಮೆಗಳು, ಬುಲೆಟ್ ರೈಲುಗಳು, ಪ್ರಚಾರ ಅಭಿಯಾನಗಳು ಮುಂತಾದವಕ್ಕೇ ಹಣ ಖರ್ಚು ಮಾಡುವ ಈ ಸರಕಾರದ ಪರಂಪರೆಯನ್ನು ತಕ್ಷಣವೇ ನಿಲ್ಲಿಸಬೇಕು. ಮಹಾಮಾರಿಯ ವಿರುದ್ಧ ಸಮರದ ಅಗತ್ಯಗಳಿಗೆ ಆದ್ಯತೆ ಕೊಡಬೇಕು.


6. ಪಿ.ಪಿ.ಇ.ಗಳ ಗಂಭೀರ ಅಭಾವ : ಲಾಕ್‌ಡೌನ್‌ಗಳನ್ನು ಮಹಾಮಾರಿಯನ್ನು ತಡೆಗಟ್ಟಲು ಮತ್ತು ಸೋಲಿಸಲು ಅತ್ಯಗತ್ಯವಾದ ಜನಗಳ ವ್ಯಾಪಕವಾದ ತಪಾಸಣೆ ಮತ್ತು ನಮ್ಮ ಡಾಕ್ಟರುಗಳು ಮತ್ತು ಆರೋಗ್ಯ ಕಾರ್ಯಕರ್ತರಿಗೆ ವೈಯಕ್ತಿಕ ಸುರಕ್ಷಾ ಸಾಧನ(ಪಿ.ಪಿ.ಇ.)ಗಳನ್ನು ಒದಗಿಸಲು ಬಳಸಬೇಕು ಎಂಬುದು ಸಾರ್ವತ್ರಿಕವಾಗಿ ಒಪ್ಪಿಕೊಂಡಿರುವ ಸಂಗತಿ. ದುರದೃಷ್ಟವಶಾತ್, ಭಾರತಕ್ಕೆ ಬೇರೆ ಹಲವು ದೇಶಗಳಿಗೆ ಹೋಲಿಸಿದರೆ ಸಿದ್ಧತೆ ಮಾಡಿಕೊಳ್ಳಲು ದೀರ್ಘ ಸಮಯ ಸಿಕ್ಕಿದ್ದರೂ, ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳಲಿಲ್ಲ. ಈಗಲೂ, ಲಾಕ್‌ಡೌನಿನ ಒಂದು ತಿಂಗಳ ನಂತರವೂ ನಮ್ಮ ತಪಾಸಣಾ ದರ ಜಗತ್ತಿನಲ್ಲೇ ಅತಿ ಕಡಿಮೆ ಮಟ್ಟದಲ್ಲಿಯೇ ಇದೆ, ಪಾಕಿಸ್ತಾನಕ್ಕಿಂತಲೂ ಕಡಿಮೆ ಎಂಬುದು ನಾಚಿಕೆಗೇಡು. ಆರೋಗ್ಯ ಕಾರ್ಯಕರ್ತರಿಗೆ ಅಗತ್ಯ ಪಿ.ಪಿ.ಇ.ಗಳು

ಪುಟ 14 ಕ್ಕೆ





ರಾಜ್ಯಗಳೊಂದಿಗೆ ಸಮಾಲೋಚನೆ–ಲಾಕ್‌ಡೌನ್ ಮೊದಲಿಲ್ಲ–ನಂತರವೂ ಆಯ್ದ ರಾಜ್ಯಗಳೊಂದಿಗೆ!



ಪ್ರತಿಮೆಗಳಿಗೆ, ಪ್ರಚಾರಗಳಿಗೆ ಮಾಡಿದ ಖರ್ಚುಗಳನ್ನು ಆರೋಗ್ಯ ಪಾಲನೆಗೆ ಮಾಡಿದ್ದರೆ..! ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ

ಭಾರತದಲ್ಲಿ ಮೇ ದಿನಾಚರಣೆಯ ಇತಿಹಾಸ

ಭಾರತದಲ್ಲಿ ಪ್ರಥಮ ಬಾರಿಗೆ ಮದ್ರಾಸಿನಲ್ಲಿ 1923 ರಲ್ಲಿ ಮೇ ದಿನ ಆಚರಣೆಯಾದ ಬಗ್ಗೆ ದಾಖಲೆಗಳು ತಿಳಿಸುತ್ತವೆ. ಮದ್ರಾಸ್‌ಹೈಕೋರ್ಟ್ ಎದುರಿನ ಮೈದಾನದಲ್ಲಿ ಮತ್ತು ಟ್ರಿಪ್ಲಿಕೇನ್ ಕಡಲತೀರದಲ್ಲಿ ಎರಡು ಸಭೆಗಳು ನಡೆದವು. ಕಾರ್ಮಿಕ ಮುಖಂಡ ಮತ್ತು ಹಿಂದುಸ್ತಾನ ಲೇಬರ್ ಪಾರ್ಟಿಯ ಸ್ಥಾಪಕ ಸಿಂಗಾರವೇಲು ಚೆಟ್ಟಿಯಾರ ಅಧ್ಯಕ್ಷತೆಯಲ್ಲಿ ಈ ಎರಡು ಸಭೆಗಳು ನಡೆದವು. ಅದರಲ್ಲಿ ಈ ಮಹಾನ ದಿನವನ್ನು ಅಧಿಕೃತ ರಜಾ ದಿನವನ್ನಾಗಿ ಘೋಷಿಸಬೇಕೆಂದು ಒತ್ತಾಯಿಸಲಾಯಿತು. ಅಂದಿನಿಂದ ಹೆಚ್ಚು ಕಡಿಮೆ ಪ್ರತಿ ವರ್ಷ ಮೇ ದಿನದ ಆಚರಣೆ ದೇಶದಾದ್ಯಂತ ನಡೆಯುತ್ತಾ ಬಂದಿದೆ. 1920 ಮತ್ತು 1930ರ ದಶಕದಲ್ಲಿ ಕಮ್ಯುನಿಸ್ಟರಲ್ಲದೇ ಇತರರ್‍ಯಾರೂ ಮೇ ದಿನಾಚರಣೆಯ ಗೋಜಿಗೆ ಹೋಗಲಿಲ್ಲ. ಹಲವಾರು ಕಾರ್ಮಿಕ ಸಂಘಗಳ ನಾಯಕರು, ಮೇ ದಿನವನ್ನು ಒಂದು ಪರಕೀಯ ವಿಚಾರವೆಂದು ಪರಿಗಣಿಸಿ ಆ ದಿನವನ್ನು ಕಾರ್ಮಿಕ ವರ್ಗದ ಅಂತರ್‍ರಾಷ್ಟ್ರೀಯ ಐಕ್ಯತೆಯ ಸಾಮಾನ್ಯ ದಿನವನ್ನಾಗಿ ಅಂಗೀಕರಿಸಲು ನಿರಾಕರಿಸಿದರು.

ಸಿ.ಆರ್. ಶಾನಭಾಗ



1933ರಲ್ಲಿ ಮುಂಬಯಿಯಲ್ಲಿ ಎ.ಐ.ಟಿ.ಯು.ಸಿ ಗೆ ಸೇರಿದ ಗಿರಣಿ ಕಾರ್ಮಿಕರ ಯೂನಿಯನ್ ನ ಒಂದು ಸಭೆ

ಕಾರ್ಮಿಕರ ದೈನಂದಿನದ ಆಂಶಿಕ ಬೇಡಿಕೆಗಳೊಂದಿಗೆ, ಅಂತರಾಷ್ಟ್ರೀಯ ಕಾರ್ಮಿಕ ವರ್ಗದ ಸೌಹಾರ್ದತೆಯನ್ನು ಸ್ಥಾಪಿಸುವ ಮತ್ತು ಬಂಡವಾಳಶಾಹಿ ವ್ಯವಸ್ಥೆಯನ್ನು ಕೊನೆಗೊಳಿಸಿ ಶ್ರಮಜೀವಿ ವರ್ಗ ರಾಜಕೀಯ ಅಧಿಕಾರವನ್ನು ಸ್ವಾಧೀನ ಪಡಿಸಿಕೊಳ್ಳುವ ಬಗ್ಗೆ,ಮೇ ದಿನದ ಕ್ರಾಂತಿಕಾರಿ ಪರಂಪರೆಯುನಿಷ್ಠೆ ಮತ್ತು ದೃಢವಾದ ನಿರ್ಧಾರವನ್ನು ಹೊಂದಿದೆ.

ಪ್ರಥಮ ಮೇ ದಿನದ ಆಚರಣೆಯು ಮತ್ತು ಅಂದು ಮಂಡಿಸಿದ್ದ ಆರ್ಥಿಕ–ರಾಜಕೀಯ ಬೇಡಿಕೆಗಳೆಲ್ಲ ಮಾರ್ಕ್ಸ್ ಮಾರ್ಗದರ್ಶನದಲ್ಲಿದ್ದ ಪ್ರಥಮ ಅಂತರಾಷ್ಟ್ರೀಯದ ನಿರ್ದೇಶನಕ್ಕೆ ಬದ್ಧವಾಗಿದ್ದವು. ಮೇ ದಿನವು ಕೇವಲ ಅಂತರಾಷ್ಟ್ರೀಯ ಸೌಹಾರ್ದತೆಗೆ ಘೋಷಣೆ ನೀಡುವ ಸಾಮಾನ್ಯ ಕಾರ್ಯಾಚರಣೆಯಾಗುವ ಬದಲು, ಪ್ರತಿ ರಾಷ್ಟವು ತನ್ನ ದೇಶಕ್ಕೆ ಅನ್ವಯಿಸುವ ನಿರ್ದಿಷ್ಟ ಕ್ರಾಂತಿಕಾರಿ ಕರ್ತವ್ಯಗಳ ಬಗ್ಗೆ ಕಾರ್ಮಿಕರಲ್ಲಿ ಪ್ರಜ್ಞೆ ಮೂಡಿಸುವುದಾಗಬೇಕು ಎಂದು ಲೆನಿನ್ ಹೇಳಿದರು.

ವರ್ಷವಿಡಿ ಕಾರ್ಮಿಕರ ಆರ್ಥಿಕ ಬೇಡಿಕೆಗಳನ್ನು ಪಡೆಯಲು ಕಾರ್ಮಿಕರ ಹೋರಾಟವನ್ನು ಮುನ್ನಡೆಸಬೇಕು. ಅದನ್ನು ಮುನ್ನಡೆಸುತ್ತಲೇ, ಕ್ರಾಂತಿಕಾರಿ ಮಹತ್ವವಿರುವ ತಕ್ಷಣದ ಆರ್ಥಿಕ ಬೇಡಿಕೆಗಳನ್ನು ಸಮಾಜವಾದದ ಗುರಿಯ ಜತೆ ಸಂಯೋಜಿಸಬೇಕು.ಸಮಾಜವಾದ ಸಾಧಿಸಲು ಪ್ರತಿಯೊಂದು ದೇಶದ ಕಾರ್ಮಿಕ ವರ್ಗ ಎದುರಿಸುತ್ತಿರುವ ಕ್ರಾಂತಿಯ ಸಮಸ್ಯೆಗಳ ಬಗ್ಗೆ ಗಮನ ಹರಿಸಬೇಕು. ಈ ಸಮಸ್ಯೆಗಳನ್ನು ಮೇ ದಿನದ ಸಭೆಗಳಲ್ಲಿ ಎತ್ತಿತೋರಿಸಿ ಅವು ಹೇಗೆ ಬಂಡವಾಳದ ವಿರುದ್ಧ ಹೋರಾಟದ ಭಾಗಗಳೆಂದು ಕಾರ್ಮಿಕರಲ್ಲಿ ಪ್ರಜ್ಞೆ ಮೂಡಿಸುವದು ಅವಶ್ಯಕವಾಗಿದೆ.

ಯುರೋಪಿನಲ್ಲಿ ಅಮೇರಿಕಾದಲ್ಲಿ ಕೈಗಾರಿಕೀಕರಣ ಭರದಿಂದ ಮುನ್ನಡೆಯುತ್ತಿದ್ದಾಗ, ಭಾರತ ಬ್ರಿಟನ್ನಿನ ವಸಾಹತುವಾಗಿತ್ತು. ಭಾರತದ ಗುಡಿಕೈಗಾರಿಕೆಗಳನ್ನು ನಾಶಮಾಡಿ ತನ್ನ ಸಿದ್ದಪಡಿಸಿದ ಸರಕುಗಳಿಗೆ ಮಾರುಕಟ್ಟೆಯನ್ನಾಗಿ ಮಾತ್ರ ಭಾರತವನ್ನು ಇಟ್ಟಿತ್ತು. ತನ್ನ ಕೈಗಾರಿಕೆ–ವಾಣಿಜ್ಯಗಳಿಗಾಗಿ ಭಾರತದಿಂದ ಕಚ್ಚಾ ವಸ್ತುಗಳನ್ನು ಇಂಗ್ಲೆಂಡ್‌ಗೆ ಸಾಗಿಸಲು ಮತ್ತು ಸಿದ್ದ ವಸ್ತುಗಳನ್ನು ಭಾರತದಲ್ಲಿ ಒಳನಾಡುಗಳಿಗೆ ವಿತರಿಸಲು 1857ರ ಸುಮಾರು ಸಂಪರ್ಕಸಾಧನಗಳನ್ನು ರೈಲ್ವೆ ಮಾರ್ಗಗಳನ್ನೂ ರಚಿಸಿತು. ಅದರೊಂದಿಗೆ ಭಾರತದ ಕಾರ್ಮಿಕ ವರ್ಗ ರಚನೆಯಾಯಿತು. ಆದರೆ ಗ್ರಾಮೀಣ ಪ್ರದೇಶದ 'ಕೆಳ ಮಟ್ಟದ ಪ್ರಜ್ಞೆ, ಜಾತಿ ಮತ್ತಿತರ ಪ್ರತಿಗಾಮಿ ಭಾವನೆ'ಗಳಿಂದ ಬಂದ ಭಾರತದ ಪ್ರಾರಂಬಿಕ ಕೌಶಲ್ಯರಹಿತ ಕಾರ್ಮಿಕ ವರ್ಗವಾಯಿತು. ಇದು ಸಹಜವಾಗಿ ಅವರಲ್ಲಿ ಕಾರ್ಮಿಕ ವರ್ಗದ ಪ್ರಜ್ಞೆ ಕೆಳಮಟ್ಟದಲ್ಲಿರುವುದಕ್ಕೆ ಕಾರಣವಾಯಿತು.

ಎಂಟು ಗಂಟೆಗಳ ಕೆಲಸದ ದಿನದ ಬೇಡಿಕೆ

ವಾಸ್ತವವಾಗಿ ನಮ್ಮ ದೇಶದಲ್ಲಿ ಎಂಟು ಗಂಟೆಗಳ ಕೆಲಸದ ದಿನದ ಬೇಡಿಕೆಯನ್ನೂ ಹೌರಾ ರೈಲ್ವೆ ಕಾರ್ಮಿಕರು 1862 ರಷ್ಟು ಹಿಂದೆಯೇ ಮಂಡಿಸಿದ್ದರು. ಬಂಗಾಲದಿಂದ ಪ್ರಥಮ ಅಂತರಾಷ್ಟ್ರೀಯವನ್ನು ಸಂಪರ್ಕಿಸಲು ಪ್ರಯತ್ನಿಸಲಾಗಿತ್ತು. ಅಲ್ಲದೆ ಆ ಸಂಘಟನೆಗೆ ಪತ್ರವನ್ನು ಬರೆಯಲಾಗಿತ್ತು. ಆದರೆ ಮೊದಲಿನಿಂದಲೂ ನಮ್ಮ ದೇಶದ ಕಾರ್ಮಿಕ ಸಂಘಗಳು ಮೇ ದಿನವನ್ನು ಐಕ್ಯವಾಗಿ ಆಚರಿಸಲು ಸಾಧ್ಯವಾಗಲಿಲ್ಲ. ಇಪ್ಪತ್ತರ ಮತ್ತು ಮೂವತ್ತರ ದಶಕದಲ್ಲಿ ಕಮ್ಯುನಿಸ್ಟರಲ್ಲದೇ ಇತರರ್‍ಯಾರೂ ಮೇ ದಿನಾಚರಣೆಯ ಗೋಜಿಗೆ ಹೋಗಲಿಲ್ಲ. ಹಲವಾರು ಕಾರ್ಮಿಕ ಸಂಘಗಳ ನಾಯಕರು, ಮೇ ದಿನವನ್ನು ಒಂದು ಪರಕೀಯ ವಿಚಾರವೆಂದು ಪರಿಗಣಿಸಿ ಆ ದಿನವನ್ನು ಕಾರ್ಮಿಕ ವರ್ಗದ ಅಂತರಾಷ್ಟ್ರೀಯ ಐಕ್ಯತೆಯ ಸಾಮಾನ್ಯ ದಿನವನ್ನಾಗಿ ಅಂಗೀಕರಿಸಲು ನಿರಾಕರಿಸಿದರು. ಏಕೆಂದರೆ ಅವರಿಗೆಲ್ಲಾ ಕಾರ್ಮಿಕರು ಒಂದು ವರ್ಗವೆಂಬ ಪರಿಕಲ್ಪನೆಯಾಗಲಿ, ಅಂತರಾಷ್ಟ್ರೀಯ ಐಕ್ಯತೆಯ ಭಾವನೆಯಾಗಲಿ ಇರಲಿಲ್ಲ.

1889, 22 ಮಾರ್ಚ್ ರಂದು ಲ್ಯಾಂಕಶೈರ್ ನ ಜವಳಿ ಕಾರ್ಮಿಕರು ಬ್ರಿಟನಿನಲ್ಲಿ ಭಾರತದ ಕಾರ್ಮಿಕರ 8 ಗಂಟೆಗಳ ಕೆಲಸದ ಬೇಡಿಕೆಗೆ ಸೌಹಾರ್ದ ಸೂಚಿಸಿ ಮತಪ್ರದರ್ಶನ ನಡೆಸಿದರು. 1890ರಂದು ಮುಂಬೈನ 10 ಸಾವಿರ ಹತ್ತಿಗಿರಣಿಯ ಕಾರ್ಮಿಕರು ಎನ್.ಎಂ.ಲೋಖಡೆ ರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದರು. ಎರಡು ಮಹಿಳಾ ಕಾರ್ಮಿಕರು ಸಭೆಯನ್ನು ಉದ್ದೇಶಿಸಿ ಮಾತನಾಡಿದ್ದರು. ಅದರಲ್ಲಿ ವಾರದ ವೇತನಸಹಿತ ರಜಾದಿನದ ಬೇಡಿಕೆ ಮಂಡಿಸಲಾಗಿತ್ತು. ಅದನ್ನು ಗಿರಣಿ ಮಾಲಿಕರು ಒಪ್ಪಬೇಕಾಯಿತು. 25 ಸೆಪ್ಟೆಂಬರ್ 1890 ರಂದು ಸರ್ಕಾರ ಭಾರತದ ಕಾರ್ಖಾನೆಗಳ ಕಾರ್ಮಿಕರ ಕಮಿಷನ್ ರಚನೆ ಮಾಡಿತು. ಅದರ ಶಿಫಾರಸಿನ ಆಧಾರದಲ್ಲಿ 1891 ರ ಫ್ಯಾಕ್ಟರಿ ಕಾಯ್ದೆ1892 ಜನವರಿ 1ರಿಂದ ಜಾರಿಗೆ ಬಂದಿತು.

ಮಹಿಳಾ ಕಾರ್ಮಿಕರಿಗೆ ಅರ್ಧ ಗಂಟೆಗಳ ವಿರಾಮ ಇರುವ 11 ಗಂಟೆಗಳ ಮತ್ತು ಮಕ್ಕಳಿಗೆ 7 ಗಂಟೆಗಳ ಕೆಲಸದ ಅವಧಿಹಾಗೂ 1 ದಿನ ವಾರದ ರಜಾ ನಿಗದಿಪಡಿಸಲಾಯಿತು. ಪುರುಷ ಕಾರ್ಮಿಕರಿಗೆ ಯಾವುದೇ ಕೆಲಸದ ಮಿತಿ ನಿಗದಿಪಡಿಸಲಿಲ್ಲ. 1905 ರಲ್ಲಿ ಲ್ಯಾಂಕಶೈರ್‌ನ ಕಾರ್ಮಿಕರು ಬ್ರಿಟಿಶ್ ಸೆಕ್ರೆಟರಿ ಆಫ್ ಸ್ಟೇಟ್ ಗೆ ಒಂದು ಮನವಿ ಸಲ್ಲಿಸಿ, ಭಾರತೀಯ ಪುರುಷ ಕೆಲಸಗಾರರಿಗೂ ಕೆಲಸದ ದಿನದ ಸಮಯ ಮಿತಿ ನಿಗದಿಪಡಿಸಲು ಒತ್ತಾಯಿಸಿದರು.

1908 ರಲ್ಲಿ ಬಾಲಗಂಗಾಧರ ತಿಲಕರಿಗೆ 6 ದಿನಗಳ ಜೈಲು ಶಿಕ್ಷೆ ವಿಧಿಸಿದಾಗ ಮುಂಬೈ ಕಾರ್ಮಿಕರು 6 ದಿನಗಳ ಸಾರ್ವತ್ರಿಕ ರಾಜಕೀಯ ಮುಷ್ಕರ ಆಚರಿಸಿ ಪ್ರತಿಭಟಿಸಿದರು.

1911 ರಲ್ಲಿ ಕಾರ್ಮಿಕರ ದೀರ್ಘ ಹೋರಾಟಗಳ ನಂತರ, ಗಿರಣಿ ಮಾಲಿಕರು ಪುರುಷ ಕಾರ್ಮಿಕರಿಗೆ 12 ಗಂಟೆಗಳ ಕೆಲಸದ ದಿನ, ಮಕ್ಕಳಿಗೆ 6 ಗಂಟೆಗಳ ಕೆಲಸ ದಿನಕ್ಕೆ ಒಪ್ಪಿಕೊಂಡರು.

ಮುಂಬೈಯ 50 ಕಾರ್ಮಿಕ ಸಂಘಗಳ ನೇತೃತ್ವದಲ್ಲಿ ಕಾರ್ಮಿಕರ ಬೃಹತ್ ಸಭೆ ನಡೆದು 10 ಗಂಟೆಗಳ ಕೆಲಸದ ದಿನಕ್ಕಾಗಿ ಬೇಡಿಕೆ ಇಟ್ಟು 1 ತಿಂಗಳಿಗೂ ದೀರ್ಘಕಾಲ ಮುಷ್ಕರ ಮಾಡಿದ ನಂತರವೇ ಮಾಲಿಕರು ಒಪ್ಪಿಕೊಂಡರು. 1ನೆ ಮಹಾಯುದ್ಧದ ನಂತರ ಆರ್ಥಿಕ ಸಂಕಷ್ಟದಿಂದ 1920 ರಲ್ಲಿ ಭಾರತದಲ್ಲಿ ಕಾರ್ಮಿಕರ ಪರಿಸ್ಥಿತಿ ತೀರಾ ಹದಗೆಟ್ಟು ಅನೇಕ ಕಡೆ ಕಾರ್ಮಿಕರ ಸ್ವಯಂಪೂರಿತ ಹೋರಾಟಗಳು ನಡೆದವು, ಸಂಘಗಳು ಪ್ರಾರಂಭವಾದವು.

1920 ಕಾರ್ಮಿಕರ ಸಂಘಗಳ ಅಖಿಲ ಭಾರತ ಕೇಂದ್ರ ಸಂಘಟನೆ ಎ.ಐ.ಟಿ.ಯು.ಸಿ ರಚನೆಯಾಯಿತು. ಆರಂಭಿಕ ಹಂತದಲ್ಲಿ ಅದರ ನೇತೃತ್ವದಲ್ಲಿ ಬಹುತೇಕ ರಾಷ್ಟ್ರೀಯ ಕಾಂಗ್ರೆಸ್‌ನ ನಾಯಕರೇ ಇದ್ದರು. ಅವರಿಗೆ ವರ್ಗ ಸಂಘರ್ಷದಲ್ಲಿ ಮುಷ್ಕರಗಳಲ್ಲಿ ನಂಬಿಕೆಯಿರಲಿಲ್ಲ. ಅವರು ಮನವಿ, ಸಂದಾನ, ಮನವೊಲಿಸುವಿಕೆಯ ಮೂಲಕ ಪರಿಹಾರ ಪಡೆಯಲು ಬಯಸಿದ್ದರು. ಕಾರ್ಮಿಕರನ್ನು ಆರ್ಥಿಕ ಬೇಡಿಕೆಗಳಿಗೆ ಸೀಮಿತಗೊಳಿಸುವುದು ಅವರ ವಿಚಾರವಾಗಿತ್ತು. ಸಮರಶೀಲ ಹೋರಾಟಗಳಿಗೆ ಅವರು ಸಿದ್ಧವಿರಲಿಲ್ಲ. ಆದರೆ 1921 ರ ಝುರಿಯಾ ಅದಿವೇಶನದಲ್ಲಿ ಎಐಟಿಯುಸಿ ಸ್ವರಾಜ್ಯದ ಬೇಡಿಕೆಗೆ ಒತ್ತಾಯಿಸಿ ನಿರ್ಣಯ ಅಂಗೀಕರಿಸಿತು.

ಮೊದಲ ಮೇ ದಿನ

ಭಾರತದಲ್ಲಿ ಪ್ರಥಮ ಬಾರಿಗೆ ಮದ್ರಾಸಿನಲ್ಲಿ 1923 ರಲ್ಲಿ ಮೇ ದಿನ ಆಚರಣೆಯಾದ ಬಗ್ಗೆ ದಾಖಲೆಗಳು ತಿಳಿಸುತ್ತವೆ. ಮದ್ರಾಸ ಹೈಕೋರ್ಟ್ ಎದುರಿನ ಮೈದಾನದಲ್ಲಿ ಮತ್ತು ಟ್ರಿಪ್ಲಿಕೇನ ಕಡಲತೀರದಲ್ಲಿ ಎರಡು ಸಭೆಗಳು ನಡೆದವು.

ಕಾರ್ಮಿಕ ಮುಖಂಡ ಮತ್ತು ಹಿಂದುಸ್ತಾನ ಲೇಬರ್ ಪಾರ್ಟಿಯ ಸ್ಥಾಪಕ ಸಿಂಗಾರವೇಲು ಚೆಟ್ಟಿಯಾರ ಅಧ್ಯಕ್ಷತೆಯಲ್ಲಿ ಈ ಎರಡು ಸಭೆಗಳು ನಡೆದವು. ಅದರಲ್ಲಿ ಈ ಮಹಾನ ದಿನವನ್ನೂ ಅಧಿಕೃತ ರಜಾ ದಿನವನ್ನಾಗಿ ಘೋಷಿಸಬೇಕೆಂದು ಒತ್ತಾಯಿಸಲಾಯಿತು.

1925ರ ಮೇ ದಿನದಂದು ಲಂಡನ ಹೈಡಪಾರ್ಕ್‌ನಲ್ಲಿ ನಡೆದ ಮೇ ದಿನಾಚರಣೆಯಲ್ಲಿ ಏಷ್ಯನ್ನರ ಒಂದು ಗುಂಪು ಭಾಗವಹಿಸಿತ್ತು. ಅಲ್ಲಿ ಭಾರತದ ವಿಮೋಚನೆಯ ಬೇಡಿಕೆಯೂ ಕೇಳಿ ಬಂದಿತು. ಲಂಡನಿನಲ್ಲಿದ್ದ ಭಾರತದ ನಾವಿಕರು ಅದರಲ್ಲಿ ಭಾಗವಹಿಸಿದ್ದರು. 1926 ರಲ್ಲಿ ಅದೇ ಸ್ಥಳದಲ್ಲಿ ನಡೆದ ಮೇ ದಿನಾಚರಣೆಯಲ್ಲಿ ಭಾರತದ ಹಡಗು ಕಾರ್ಮಿಕ ಸಂಘಗಳ ಪ್ರತಿನಿಧಿಗಳೂ ಭಾಗವಹಿಸಿದ್ದರು. ಆ ವರ್ಷ ಭಾರತದಲ್ಲಿ ಮುಂಬೈನ ಮುನ್ಸಿಪಾಲ್ ಕಾರ್ಮಿಕರು ಹಾಗೂ ಲಾಹೋರ್‌ನಲ್ಲಿ ಕುದುರೆ ಬಂಡಿಗಳ ಕಾರ್ಮಿಕರು ಮೇ ದಿನಾಚರಣೆ ನಡೆಸಲು ಕರೆ ನೀಡಲಾಯಿತು. ಕಲ್ಕತ್ತಾ, ಮದ್ರಾಸ, ಮುಂಬೈ, ಕಾನಪೂರ ಮತ್ತಿತರ ಕಡೆ ಕೆಂಪುಧ್ವಜ ಹಿಡಿದ ಸಾವಿರಾರು ಕಾರ್ಮಿಕರು ಮೆರವಣಿಗೆಯಲ್ಲಿ ಪಾಲ್ಗೊಂಡರು. ಸತ್ಯಪ್ರಿಯ ಬ್ಯಾನರ್ಜಿಯವರು ಮೇ ದಿನದ ಇತಿಹಾಸ ಕುರಿತ ಕಿರು ಪುಸ್ತಕವನ್ನು ಆಗ ಬರೆದಿದ್ದರು.

1925–26ರ ಅವಧಿಯಲ್ಲಿ ಭಾರತದ ಅನೇಕ ಕೈಗಾರಿಕೆ ಕೇಂದ್ರಗಳಲ್ಲಿ ಕೋಮುಗಲಭೆಗಳು ನಡೆದವು. ಶೈಶವಾವ್ಯಸ್ಥೆಯಲ್ಲಿದ್ದ ಕಮ್ಯೂನಿಸ್ಟ್ ಪಕ್ಷ ಧೈರ್ಯದ ನಿಲುವು ತೆಗೆದುಕೊಂಡು ಕೋಮು ಸೌಹಾರ್ದಕ್ಕಾಗಿ ಕರೆ ನೀಡಿತು. ಗಲಭೆಗಳು ಕಾರ್ಮಿಕ ವರ್ಗದ ಐಕ್ಯತೆ ಸೌಹಾರ್ದತೆಗೆ ಮಾರಕ ಮತ್ತು ಜನರಲ್ಲಿ ಒಡಕನ್ನು ಹುಟ್ಟು ಹಾಕಲು ಸಾಮ್ರಾಜ್ಯಶಾಹಿಗಳು, ಆದಷ್ಟೇ ಸಾಂಘಿಕ ಸ್ವರೂಪ ಪಡೆದುಕೊಂಡಿದ್ದ ಕೋಮು ಶಕ್ತಿಗಳ ಸಹಾಯದಿಂದ ಮಾಡಿದ ಕುತಂತ್ರವಿದು ಎಂದು ಎಚ್ಚರಿಸಿತು.

1928 ರಲ್ಲಿ ಮುಂಬೈನ ಜವಳಿ ಕಾರ್ಮಿಕರು 6 ತಿಂಗಳ ದೀರ್ಘ ಅವಧಿಯ ಮುಷ್ಕರ ನಡೆಸಿದ್ದರು. ಲ್ಯಾಂಕಶೈರ್ ನ ಕಾರ್ಮಿಕರು ಸೌಹಾರ್ದತೆಯ ಕೊಡುಗೆಯಾಗಿ ಮುಷ್ಕರ ನಿರತರಿಗೆ 1 ಲಕ್ಷ ರೂ. ಗಳ ದೇಣಿಗೆ ಕಳುಹಿಸಿದರು. ಬ್ರಿಟನ್ ಕಾರ್ಮಿಕ ಮುಖಂಡ ಬೆನ್ ಬ್ರಾಡ್ಲೆ ಮುಷ್ಕರದ ನಾಯಕತ್ವ ವಹಿಸಿದ್ದರು. 1928 ರ ಮೇ ದಿನವನ್ನು ಕಲ್ಕತ್ತಾದಲ್ಲಿ 1ಮೈಲಿಗೂ ಉದ್ದ ಕಾರ್ಮಿಕರ ಮೆರವಣಿಗೆಯೊಂದಿಗೆ ಆಚರಿಸಲಾಯಿತು. ಮೆರವಣಿಗೆ ಶ್ರದ್ಧಾನಂದ ಪಾರ್ಕನಿಂದ ಹೊರ ಬಂದಾಗ 1862ರ ಬಂಗಾಳ ಕಾಯ್ದೆಯ 62ನೇ ಕಾಲಂ ನಡಿ ಸರ್ಕಾರ ನಿಷೇಧ ಹೇರಿತು.

1928ರಲ್ಲಿ ಕಲ್ಕತ್ತಾದ ಕಾರ್ಮಿಕರ ವರ್ಗ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನ ಸಭಾಂಗಣವನ್ನು ಆಕ್ರಮಿಸಿ ಪೂರ್ಣ ಸ್ವರಾಜದ ಬೇಡಿಕೆಯನ್ನು ಮತ್ತು ಭಾರತದ ಸಮಾಜದ ಸಮಾಜವಾದಿ ಪರಿವರ್ತನೆಯನ್ನು ವಿಮೋಚನಾ ಆಂದೋಲನದ ಪ್ರಮುಖ ಗುರಿಯನ್ನಾಗಿ ಅಂಗೀಕರಿಸಬೇಕೆಂದು ಒತ್ತಾಯಿಸಿತು. ರಾಷ್ಟ್ರೀಯ ಆಂದೋಲನ ಪೂರ್ಣಸ್ವರಾಜ್ಯದ ಬೇಡಿಕೆ ಒಪ್ಪಿಕೊಳ್ಳುವ ಪೂರ್ವದಲ್ಲೇ ಭಾರತದ ಕಾರ್ಮಿಕ ವರ್ಗ ಪೂರ್ಣ ಸ್ವರಾಜ್ಯದೊಂದಿಗೆ ಸಮಾಜವಾದಿ ರಾಷ್ಟ್ರ ಕಟ್ಟುವ ಗುರಿಯನ್ನು ಪ್ರತಿಪಾದಿಸಿತ್ತು ಎನ್ನುವುದು ಗಮನಾರ್ಹ.

1929–30 ರಲ್ಲಿ ಕಾಂಗ್ರೆಸ್ ಅಧಿವೇಶನ 'ಪೂರ್ಣ ಸ್ವರಾಜ್ಯದ' ಗುರಿಯನ್ನು ಒಪ್ಪಿಕೊಂಡಿತು. ಜನವರಿ 26, 1930 ಅನ್ನು ಸ್ವಾತಂತ್ರ ದಿನವನ್ನಾಗಿ ಆಚರಿಸಿತು ಎನ್ನುವುದನ್ನು ನಾವು ಗಮನಿಸಬೇಕು.

1929ರಲ್ಲಿ ಭಗತ್‌ಸಿಂಗ ಮತ್ತವರ ಸಂಗಾತಿಗಳ

ಪುಟ 10 ಕ್ಕೆ

ಭಾರತದಲ್ಲಿ ಮೇ ದಿನಾಚರಣೆಯ ಇತಿಹಾಸ..............

ಪುಟ 9 ರಿಂದ

ಸಮರಶೀಲ ಹೋರಾಟ ನಡೆದವು. ಅವರ ವಿಚಾರಣೆ ಸಂದರ್ಭದಲ್ಲಿ ದೇಶಾದ್ಯಂತ ಕಾರ್ಮಿಕರು ಬೃಹತ್ ಪ್ರತಿಭಟನೆಗಳನ್ನು ಮಾಡಿದರು. ವಿಚಾರಣೆಯ ನಾಟಕ ನಡೆಸಿ 1931ರಲ್ಲಿ ಭಗತ್‌ಸಿಂಗ, ರಾಜಗುರು, ಸುಖದೇವರನ್ನು ಗಲ್ಲಿಗೇರಿಸಲಾಯಿತು. 1928–29ರ ಬ್ರಿಟನ್ ಸರ್ಕಾರದ ಗುಪ್ತ ವಾರ್ಷಿಕ ವರದಿ, ಕಮ್ಯೂನಿಸ್ಟರ ಪ್ರಭಾವ ಮತ್ತು ಪ್ರಚಾರ ಮುಖ್ಯವಾಗಿ ಕೈಗಾರಿಕಾ ಕೇಂದ್ರಗಳಲ್ಲಿ ಕಾರ್ಮಿಕರ ಮಧ್ಯೆ ಅಪಾಯಕಾರಿ ಮಟ್ಟದಲ್ಲಿ ಬೆಳೆಯುತ್ತಿದೆ. ಎಂದಿತು.

1928 ರಲ್ಲಿ ಕೇಂದ್ರ ಶಾಸನ ಸಭೆಯಲ್ಲಿ '1928 ಪಬ್ಲಿಕ್‌ಸೇಫ್ಟಿ ಬಿಲ್' ಅನ್ನು ಮಂಡಿಸಲಾಯಿತು. ಅದರ ಉದ್ದೇಶ ಕಮ್ಯೂನಿಷ್ಟ ಚಟುವಟಿಕೆಗಳನ್ನು ಹತ್ತಿಕ್ಕುವುದಾಗಿತ್ತು. ಆದರೆ ಅದನ್ನು ಅಂಗೀಕರಿಸಲು ಸಾಧ್ಯವಾಗಲಿಲ್ಲ. ಭಗತ್‌ಸಿಂಗ್ ಸಂಗಾತಿಗಳು ಎಸೆದ ಬಾಂಬುಗಳು ಈ ಕಾರ್ಮಿಕ ವಿರೋಧಿ ಶಾಸನಗಳ ವಿರುದ್ಧವಾಗಿತ್ತು ಎನ್ನುವುದನ್ನು ಗಮನಿಸಬೇಕು. ಬದಲಾಗಿ ಯಾವುದೇ ಮನುಷ್ಯ ಜೀವಿ ಹತ್ಯೆಯಾಗದ ರೀತಿಯಲ್ಲಿ ಯಾರು ಇಲ್ಲದ ಶೂನ್ಯ ಪ್ರದೇಶದಲ್ಲಿ ಅದು ಸಿಡಿಯುವಂತೆ ಮಾಡಲಾಗಿತ್ತು.

20 ಮಾರ್ಚ್ 1929 ರಂದು 17 ಕಾರ್ಮಿಕ ನಾಯಕರನ್ನು ಒಳಗೊಂಡ 32 ಕಮ್ಯೂನಿಷ್ಟ ನಾಯಕರ ಮೇಲೆ ಕುಪ್ರಸಿದ್ಧ 'ಮೀರತ್ ಪಿತೂರಿ' ಮೊಕದ್ದಮೆ ದಾಖಲಿಸಲಾಯಿತು.

ವಿಚಾರಣೆ 1933ರ ವರೆಗೂ ನಡೆಯಿತು. ನಿಜವಾದ ಉದ್ದೇಶವು ದೋಷಾರೋಪಣೆಯಲ್ಲಿ ಬಯಲಿಗೆ ಬಂದಿತು. 'ಬಂಡವಾಳ ಮತ್ತು ಶ್ರಮದ ನಡುವಿನ ವೈರುಧ್ಯ ಹೆಚ್ಚಿಸುವ, ಕಾರ್ಮಿಕರ ಮತ್ತು ರೈತರ ಪಕ್ಷ ಕಟ್ಟುವ, ಯುವಜನರ ಮತ್ತು ಕಾರ್ಮಿಕ ಸಂಘಗಳನ್ನು ಕಟ್ಟುವ ಹಾಗೂ ಮುಷ್ಕರಗಳನ್ನೂ ಉತ್ತೇಜಿಸುವ ಪ್ರಯತ್ನಗಳಿಗಾಗಿ' ಶಿಕ್ಷೆ ವಿಧಿಸಲಾಗುತ್ತಿದೆ ಎಂದು ದೋಷಾರೋಪಣೆಯಲ್ಲಿ ಹೇಳಲಾಯಿತು.

1930 ರ ದಶಕದಲ್ಲಿ ಮೇ ದಿನ

ಮುಜಾಫ್ಫರ್‌ಅಹ್ಮದ್ ರವರಿಗೆ ಜೀವಾವಧಿ ಗಡಿಪಾರು; ಡಾಂಗೆ, ಘಾಟೆ, ಜೊಗಳೆಕರ, ನಿಂಬಾಳ್ಕರ, ಶೌಕತ್ ಉಸ್ಮಾನಿ ಅವರುಗಳಿಗೆ 12 ವರ್ಷಗಳ ತೀವ್ರ ಜೈಲು ಶಿಕ್ಷೆಯನ್ನು ವಿಧಿಸಲಾಯಿತು. ಇದರ ವಿರುದ್ಧ ಜಾಗತಿಕ ಪ್ರತಿಭಟನೆ ಮೂಡಿ ಬಂದಿತು.ಬ್ರಿಟಿಷ್ ಕಾರ್ಮಿಕ ವರ್ಗದ ಕಮ್ಯುನಿಸ್ಟ್–ಪರ ಗುಂಪುಗಳು ಭಾರಿ ಪ್ರತಿಭಟನೆ ಆಯೋಜಿಸಿದವು. ಇದಕ್ಕೆ ಕೊನೆಗೂ ಮಣಿದ ಸರ್ಕಾರ ಶಿಕ್ಷೆಯ ಅವಧಿಯನ್ನು ಕಡಿತಗೊಳಿಸಬೇಕಾಯಿತು. ಮೀರತ್ ಬಂಧನಗಳು (20 ಮಾರ್ಚ್ 1929)ನಡೆದ 40 ದಿನಗಳ ನಂತರ 1929ರ ಮೇ ದಿನ ಬಂದಿತು. ಮುಂಬಯಿ ಗಿರಣಿ ಕಾರ್ಮಿಕರ ಸಂಘದ ನೇತೃತ್ವದಲ್ಲಿ ನಡೆದ ಬೃಹತ್ ಮೇದಿನ ರ್‍ಯಾಲಿ ಬಂಧನದ ವಿರುದ್ಧ ನಿರ್ಣಯ ಅಂಗೀಕರಿಸಿತು. ಕಲ್ಕತ್ತದ ಚಿತ್ತರಂಜನ ಅವೆನ್ಯೂನ ಖಿಲಾಫತ್ ಪಾರ್ಕ್‌ನಲ್ಲಿ ಡಾ. ಭುಪೇಂದ್ರನಾಥದತ್ತ ಅಧ್ಯಕ್ಷತೆಯಲ್ಲಿ ಮೇ ದಿನದ ರ್‍ಯಾಲಿ ನಡೆಯಿತು. ಇದು 1929 ರಾಷ್ಟ್ರೀಯ ಆಂದೋಲನ ಉಲ್ಬಣಗೊಳ್ಳಲು ನಾಂದಿಯಾಯಿತು. ಇದರ ಪರಿಣಾಮವಾಗಿ 1930 ಜನೆವರಿ 1 ರಂದು ಲಾಹೋರ್ ಅಧಿವೇಶನದಲ್ಲಿ ಪೂರ್ಣ ಸ್ವರಾಜ್ಯದ ಕರೆ ಅಂಗೀಕರಿಸಲಾಯಿತು.

ಅದೇ ವರ್ಷ ಸೂರ್ಯಸೇನ ನೇತೃತ್ವದಲ್ಲಿ 'ಚಿತ್ತಗಾಂಗ್' ಬಂಡಾಯ ನಡೆಯಿತು. 19 ಎಪ್ರಿಲ್ ರಂದು ಕಲ್ಕತ್ತಾದ ಕೈಗಾಡಿ ರಿಕ್ಷಾವಾಲಾಗಳು ಬಂಡಿಗಳನ್ನೇ ರಸ್ತೆಗೆ ಅಡ್ಡವಾಗಿಟ್ಟು ಮುಷ್ಕರ ಹೂಡಿದರು. ಇದು ಕಾರ್ಮಿಕ ವರ್ಗದಲ್ಲಿ ಹೊಸ ಸಮರಶೀಲತೆಗೆ ಸಾಕ್ಷಿಯಾಯಿತು.

1930ರಲ್ಲಿ ಪೇಶಾವರನ ಗರವಾಲಿ ರೆಡಿಮೆಂಟ್ ಸೈನಿಕರ ದಂಗೆಮತ್ತು ದಾಂಡಿ ಉಪ್ಪಿನ ಸತ್ಯಾಗ್ರಹದಲ್ಲಿ ನಿರತ ಗಾಂಧೀಜಿಯವರ ಬಂಧನ ನಡೆಯಿತು. ಕಾರ್ಮಿಕರ ಪ್ರತಿಭಟನೆಗಳು ಬಿರುಸುಗೊಂಡವು. ಕೈಗಾರಿಕೆ ಕೇಂದ್ರ ಶೊಲಾಪುರ. ಅಲ್ಲಿಯ ಆಗಿನ ಜನಸಂಖ್ಯೆ 1 ಲಕ್ಷ 40 ಸಾವಿರ. ಅದರಲ್ಲಿ 50 ಸಾವಿರ ಜವಳಿ ಕಾರ್ಮಿಕರು ಮುಷ್ಕರ ಹೂಡಿದರು. ಒಂದು ವಾರದ ಕಾಲ ಆಡಳಿತವನ್ನು ವಶಪಡಿಸಿಕೊಂಡು ಸ್ವಯಂ ಆಡಳಿತ–ಸ್ವಾತಂತ್ರ್ಯ ಘೋಷಿಸಿದರು. ಅದನ್ನು ಹತ್ತಿಕ್ಕಲಾಯಿತು.

1931 ಕರಾಚಿ ಅಧಿವೇಶನದಲ್ಲಿ "ಮೂಲಭೂತ ಹಕ್ಕುಗಳ" ಗೊತ್ತುವಳಿ ಸ್ವೀಕರಿಸಲಾಯಿತು. ಅದರಲ್ಲಿ ಆದ್ಯತೆಯ ಪ್ರಮುಖ ಕೈಗಾರಿಕೆಗಳ ಸಂಸ್ಥೆಗಳ ರಾಷ್ಟ್ರೀಕರಣ, ಕಾರ್ಮಿಕ ಹಕ್ಕುಗಳು ಮತ್ತು ಭೂ ಸುಧಾರಣೆಗಳು ಒಳಗೊಂಡಿದ್ದವು.

1931 ರಂದು ನಿಷೇಧಿತ ಕಮ್ಯುನಿಸ್ಟ್ ಕಲ್ಕತ್ತಾ ಜಿಲ್ಲಾ ಸಮಿತಿ ಮೇದಿನಕ್ಕಾಗಿ 'ಪ್ರಣಾಳಿಕೆ' ಪ್ರಕಟಿಸಿತು.

1933 ರ ಮೇದಿನ ರ್‍ಯಾಲಿಯಲ್ಲಿ 2000 ಕ್ಕೂ ಹೆಚ್ಚು ಕಾರ್ಮಿಕರ ಭಾಗವಹಿಸಿದ್ದರು. 1934 ರಲ್ಲಿ ಕಲ್ಕತ್ತಾದ ಚಂದನ ನಾಗೊರ್ ಮತ್ತು ಗೊಂದಲಪಾರಗಳಲ್ಲಿ ರ್‍ಯಾಲಿಗಳು ನಡೆದವು. ಸೋಮನಾಥ ಲಹರಿ ಮತ್ತು ಬಂಕಿಮ ಮುಖರ್ಜಿಯವರನ್ನು ಬಂಧಿಸಲಾಯಿತು. 1934 ರಲ್ಲಿ ಮೇದಿನದಂದು ದೆಹಲಿ ಜವಳಿ ಗಿರಣಿ ಕಾರ್ಮಿಕರು ಮುಷ್ಕರ ಮಾಡಿದರು. ಅಮೃತ್‌ಸರನಲ್ಲಿ 'ಜಲಿಯನ್ ವಾಲಾ ಬಾಗ್'ನಲ್ಲಿಯೇ ರ್‍ಯಾಲಿ ನಡೆಯಿತು.

1930–34 ರ ಅವಧಿಯಲ್ಲಿ ಬಹುತೇಕ ಕಾರ್ಮಿಕ ನಾಯಕರು ಮಿರತ್ ಮೊಕದ್ದಮೆಯಲ್ಲಿ ಜೈಲಿನಲ್ಲಿದ್ದಾಗ್ಯೂ ಕಾರ್ಮಿಕರ ಈ ಬೃಹತ್ ಪ್ರತಿಭಟನೆ ನಡೆದಿದ್ದು ಕಾರ್ಮಿಕರ ವರ್ಗಪ್ರಜ್ಞೆಯ ದ್ಯೊತಕವಾಗಿದೆ.

1935ರ ಮೇ ದಿನದಂದು ಆರ್‌ಐಎಲ್‌ಯು (ರೆಡ್ ಇಂಟರ್‌ನ್ಯಾಶನಲ್ ಆಫ್ ಲೇಬರ್ ಯೂನಿಯನ್) ತನ್ನ ಸಂದೇಶದಲ್ಲಿ ತನ್ನ ಸಂಯೋಜಿತ ಸಂಘಟನೆ ಎಐಟಿಯುಸಿ ಗೆ ಕಾರ್ಮಿಕ ವರ್ಗದ ಐಕ್ಯತೆಗೆ ಮತ್ತು ರೈತ ಕಾರ್ಮಿಕ ಸೌಹಾರ್ದತೆಗೆ ದುಡಿಯಲು ಕರೆನೀಡಿತು. ಆ ಪ್ರಯತ್ನಗಳ ಅಂಗವಾಗಿ ಎಐಟಿಯುಸಿ ಯಿಂದ ಸಿಡಿದು ಹೊರಗೆ ಹೋಗಿದ್ದ ಸುಧಾರಣಾವಾದಿಗಳ ನೇತೃತ್ವದ ಎನ್.ಎಫ್.ಟಿ.ಯು 1938 ರಲ್ಲಿ ತಿರುಗಿ ಎಐಟಿಯುಸಿ ಸೇರಿತು.

1937–39 ರ ಅವಧಿ ಕಾರ್ಮಿಕ ವರ್ಗದ ಕಾರ್ಯಾಚರಣೆಗಳ ತೀವ್ರತೆ ಮತ್ತು ಸಮರಶೀಲತೆಯಲ್ಲಿ ಉತ್ಕರ್ಷಕ್ಕೆ ಸಾಕ್ಷಿಯಾಯಿತು. ನವೆಂಬರ್ 1938 ರಲ್ಲಿ ಮುಂಬೈ ಶಾಸನ ಸಭೆಯಲ್ಲಿ ಕಾಂಗ್ರೆಸ್ ಸರ್ಕಾರ ಕಾರ್ಮಿಕ–ವಿರೋಧಿಯಾದ ಕೈಗಾರಿಕೆ ವಿವಾದ ಮಸೂದೆ ಮಂಡಿಸಿತು. ಅದರ ವಿರುದ್ಧ 90 ಸಾವಿರ ಕಾರ್ಮಿಕರು ಭಾಗವಹಿಸಿದಬೃಹತ್ ಮುಷ್ಕರ ನಡೆಯಿತು.

1940ರ ದಶಕದಲ್ಲಿ

1940ರ ಮೇ ದಿನ ಕಲ್ಕತ್ತಾದಲ್ಲಿ ಬೆಂಗಾಲ ಪ್ರಾಂತಿಯ ಟಿ.ಯು.ಸಿನೇತೃತ್ವದಲ್ಲಿ ನಡೆಯಿತು. ಅದೇ ಸಂದರ್ಭದಲ್ಲಿ ಕಾಂಗ್ರೆಸ್ ನಿಂದ ಉಚ್ಛಾಟಿತ ನಾಯಕ ಸುಭಾಷಚಂದ್ರ ಬೋಸ್ ನೇತೃತ್ವದಲ್ಲಿ ಪಾರ್ಕ್ ಸರ್ಕಸ್ ಮೈದಾನದಲ್ಲಿ ಮತ್ತೊಂದು ಸಭೆ ನಡೆಸಿದರು. ಅದರಲ್ಲಿ ಬಹುತೇಕ ಕಮ್ಯೂನಿಸ್ಟ್ ಕಾರ್ಯಕರ್ತರು ಭಾಗವಹಿಸಿದ್ದರು.

22 ಜೂನ್ 1949 ಎಂದು ಹಿಟ್ಲರ್ ಸೊವಿಯತ್ ಯೂನಿಯನ್ ಮೇಲೆ ದಾಳಿ ಮಾಡಿದ. ಯುದ್ದದಿಂದ ಕಾರ್ಮಿಕರ ಪರಿಸ್ಥಿತಿ ತೀರಾ ಹದಗೆಟ್ಟಿತ್ತು, ಕಾಳಸಂತೆಕೋರರ ಹಾವಳಿ ಮಿತಿಮೀರಿತ್ತು, ಜೀವನಾವಶ್ಯಕ ವಸ್ತುಗಳ ಬೆಲೆ ಗಗನ ಮುಟ್ಟಿತ್ತು. 1943ರ ಭೀಕರ ಬರಗಾಲ ಬಂಗಾಲವನ್ನು ಆವರಿಸಿತು. 1942ರ ಎಐಟಿಯುಸಿ ಕಾನಪುರ ಅಧಿವೇಶನ, ಬಹುಮತದಿಂದ ಯುದ್ಧವನ್ನು ಬೆಂಬಲಿಸಿ, ಫ್ಯಾಸಿಸಂನ ನಾಶಕ್ಕೆ ಕರೆನೀಡಿತು. ಕ್ವಿಟ್ ಇಂಡಿಯಾ ಕರೆಯ ನಂತರ ಗಾಂಧಿ ಒಳಗೊಂಡು ಹಲವು ಕಾಂಗ್ರೆಸ್ ನಾಯಕರನ್ನು ಬಂಧಿಸಲಾಯಿತು.

ಎಐಟಿಯುಸಿ ನೇತೃತ್ವದಲ್ಲಿ ಪ್ರಜಾಪ್ರಭುತ್ವ ಮತ್ತು ನಾಗರಿಕ ಹಕ್ಕುಗಳ ರಕ್ಷಣೆಗಾಗಿ ಮತ್ತು ಜನಸಾಮಾನ್ಯರ ದಿನ ನಿತ್ಯದ ಬಳಕೆಯ ವಸ್ತುಗಳ ಪೂರೈಕೆ, ರೇಷನ್ ವ್ಯವಸ್ಥೆ ಜಾರಿಗೆ ಒತ್ತಾಯಿಸಿ ಬೃಹತ್ ಮುಷ್ಕರಗಳು ನಡೆದವು. 1942ರಿಂದ 45 ವರೆಗೆ ಪ್ರತಿ ವರ್ಷ ಮೇ ದಿನಗಳು ಬೃಹತ್ ಸಂಖ್ಯೆಯಲ್ಲಿ ಕಾರ್ಮಿಕರ ಭಾಗವಹಿಸುವಿಕೆಯಲ್ಲಿ ನಡೆದವು. 1943ರ ನಾಗಪುರ ಮೇ ದಿನದ ಅಧ್ಯಕ್ಷತೆಯನ್ನು ಕಾಂಗ್ರೆಸಿನ ಚಾರುಚಂದ್ರ ಬ್ಯಾನರ್ಜಿ ವಹಿಸಿದರು. 1946ಮೇ ದಿನ ಕಲ್ಕತ್ತಾದ ಮೇ ದಿನ ಸಭೆ ಸಂಜೆ ನಡೆಯಿತು. ಪ್ರಖ್ಯಾತ ಕ್ರಾಂತಿಕಾರಿ ನಾಯಕ ರಜನಿ ಪಾಮೆ ದತ್ತ ಮತ್ತು ಅವರ ತಮ್ಮ ಕ್ಲೆಮೆನ್ಸ್ ಪಾಮೆ ದತ್ತ ಸಭಿಕರನ್ನೂ ಉದ್ದೇಶಿಸಿ ಮಾತನಾಡಿದರು.

23 ಮೇ 1945 ರಲ್ಲಿ ಪ್ಯಾರಿಸಿನಲ್ಲಿ ನಡೆದ ಬೃಹತ್ ಸಮಾವೇಶದಲ್ಲಿ ಅಂತರ್‍ರಾಷ್ಟ್ರೀಯ ಕಾರ್ಮಿಕ ಫೆಡರೇಶನ್ ಡಬ್ಲ್ಯೂ.ಎಫ್.ಟಿ.ಯು ನ ಸ್ಥಾಪನೆಯಾಯಿತು.

ಸ್ವಾತಂತ್ರ್ಯದ ನಂತರ

ಭಾರತ ಸ್ವತಂತ್ರವಾದ ನಂತರದ ಕಾರ್ಮಿಕ ವರ್ಗದ ಬಹುತೇಕ ಸಮಯ ಹಿಂದು–ಮುಸ್ಲಿಂ ಸೌಹಾರ್ದತೆಯನ್ನು ರಕ್ಷಿಸಲು ಮತ್ತು ರಾಷ್ಟ್ರ ವಿಭಜನೆಯ ದುಷ್ಪರಿಣಾಮಗಳನ್ನೂ ಸರಿಪಡಿಸಲು ತೊಡಗಿಸಬೇಕಾಯಿತು.

1948 ರ ಮೇದಿನವನ್ನೂ ಕಮ್ಯೂನಿಷ್ಟ ಮತ್ತು ಕಾರ್ಮಿಕ ಸಂಘಗಳ ನಾಯಕರ ಮೇಲೆ ಭಾರತ ಸರ್ಕಾರದಿಂದ ನಿಷೇಧದ ಹಿನ್ನೆಲೆಯಲ್ಲಿ ಆಚರಿಸಬೇಕಾಯಿತು. ಲಂಡನ್‌ನಲ್ಲಿ ನಡೆದ ಮೇ ಡೇ ರ್‍ಯಾಲಿ ಭಾರತದ ಮುಖ್ಯವಾಗಿ ಬಂಗಾಳ ಮತ್ತು ಆಂಧ್ರದ ಕಾರ್ಮಿಕ ಕಾರ್ಯಕರ್ತರ ಕಾನೂನು ಬದ್ಧ ಹಕ್ಕುಗಳನ್ನು ಪುನರ್ ಸ್ಥಾಪಿಸಲು ಒತ್ತಾಯಿಸಿತು.

1949 ರಲ್ಲಿ ಮುಂಬೈಯಲ್ಲಿ ನಡೆದ ಮೈಲುಗಟ್ಟಲೆ ಉದ್ದದ ಮೆರವಣಿಗೆ ಕೆಂಪು ಬಾವುಟಗಳನ್ನು ಹಿಡಿದು ಸಾಗಿತು. ಸಾಕೆ ಪಾರ್ಕ್‌ನಲ್ಲಿ ನಡೆದ ಸಭೆಯಲ್ಲಿ ಚೀನಾದ ಜನತಾ ವಿಮೋಚನಾ ಸೈನ್ಯಕ್ಕೆ ಶಾಂಘಾಯಿ ಯುದ್ಧದಲ್ಲಿ ಜಯಶೀಲವಾಗಿದ್ದಕ್ಕೆ ಅಭಿನಂದನೆ ಸೂಚಿಸಿತು. ಕಲ್ಕತ್ತಾದಲ್ಲಿ ಪೋಲೀಸ್ ನಿರ್ಬಂಧ ಮೀರಿ ರ್‍ಯಾಲಿ ನಡೆಯಿತು. ಲಾಠಿಚಾರ್ಜ್ ಮಾಡಲಾಯಿತು. ತ್ರಾವನ್‌ಕೋರ್‌ನಲ್ಲಿ ಕಾರ್ಮಿಕರ ಮುಷ್ಕರ ಘೋಷಿಸಿದರು.

1950 ರ ಮೇ ದಿನ ಮುಂಬಯಿಯಲ್ಲಿ ಟಿ.ಯು.ಸಿ ನೇತೃತ್ವದಲ್ಲಿ ರ್‍ಯಾಲಿ ನಡೆದು ಚೀನಾ ಜನತಾ ಗಣರಾಜ್ಯಕ್ಕೆ ಶುಭಾಷಯ ಸೂಚಿಸಲಾಯಿತು. ಹೆಚ್‌ಎಂಎಸ್ ಭಾಗವಹಿಸಲಿಲ್ಲ. ಬರ್ಮಾಶೆಲ್, ಕಾಟೆಕ್ಸ್, ಸ್ಟಾನವಾಕ್ ತೈಲ ಕಂಪನಿಗಳ4000 ಕಾರ್ಮಿಕರು ಅಂದು ಮುಷ್ಕರ ಆಚರಿಸಿದರು. ಮುಂಬೈ ಸರ್ಕಾರದ ಕಾರ್ಮಿಕ ವಿರೋಧಿ ಕಾರ್ಮಿಕ ಸಂಬಂಧ ಮಸೂದೆಯನ್ನು ವಿರೋಧಿಸಲಾಯಿತು. ಎ.ಐ.ಟಿ.ಯೂ.ಸಿ ವಿಶೇಷ ಮೇ ದಿನ ಪ್ರಣಾಳಿಕೆ ಪ್ರಕಟಿಸಿತು. ಠಾಣೆಯಲ್ಲಿ ಜೈಲಿನ ಕೈದಿಗಳು ಮೇದಿನ ಸಭೆ ನಡೆಸಿದರು. ಪೋಲೀಸರು ಲಾಠಿ ಚಾರ್ಜ್ ಮಾಡಿದರು.

1950ರ ಮೆ ದಿನ ಆಚರಣಾ ಸಭೆಗಳು ತೆಲಂಗಾಣ ರೈತ ಹೋರಾಟಗಾರರಿಗೆ ಸೌಹಾರ್ದತೆ ಸೂಚಿಸಿ ಗೊತ್ತುವಳಿ ಸ್ವೀಕರಿಸಿದವು. ಬಂಧಿತರ ಬಿಡುಗಡೆಗೆ ಒತ್ತಾಯಿಸಿದ ಪರಿಣಾಮವಾಗಿ 8 ಜನರ ಮರಣ ದಂಡನೆಯನ್ನು ಜೀವಾವಧಿ ಶಿಕ್ಷೆಗೆ ಇಳಿಸಲಾಯಿತು. 1952ರ ಮೇ ದಿನ ರ್‍ಯಾಲಿಗಳು ಪ್ರಥಮ ಚುನಾವಣೆಗಳಲ್ಲಿ ಎಡ ನೇತೃತ್ವದ ಐಕ್ಯ ರಂಗಗಳ ವಿಜಯವನ್ನು ಸ್ವಾಗತಿಸಿದವು. ಯು.ಎಸ್‌ಎ ಕೊರಿಯಾ ಮೇಲೆ ಹೂಡಿದ ಯುದ್ಧವನ್ನು ವಿರೋಧಿಸಿದವು. ಕಲ್ಕತ್ತಾದಲ್ಲಿ 1.5 ಲಕ್ಷಮುಂಬಯಿಲ್ಲಿ 15 ಸಾವಿರ ಹೈದ್ರಾಬಾದ್‌ದಲ್ಲಿ 20 ಸಾವಿರ ಕಾರ್ಮಿಕರು ಭಾಗವಹಿಸಿದರು. 1953 ಮೇ ದಿನಕ್ಕೆ ಡಬ್ಲ್ಯೂ.ಎಫ್.ಟಿ.ಯು ಪ್ರಧಾನ ಕಾರ್ಯದರ್ಶಿ ಲೂಯಿಸ್ ಸೈಲೆಂಟ್ ಭಾರತದ ಕಾರ್ಮಿಕರಿಗೆ ಶುಭಾಷಯ ಸಂದೇಶ ಕಳಿಸಿದರು.

1955ರ ಮೇ ದಿನಕ್ಕೆ ಅಮೇರಿಕಾದ ಕಾರ್ಮಿಕ ಮುಖಂಡ ವಿಲಿಯಂ ಫೋರ್‍ಸ್ಟರ್ ಸಂದೇಶ ಕಳಿಸಿದ್ದರು. ಕಾನಪುರದಲ್ಲಿ ಮೇ 12 ರಂದು 46 ಸಾವಿರ ಜವಳಿ ಕಾರ್ಮಿಕರ ಮುಷ್ಕರ ನಡೆಯಿತು. ಅರುಣಾ ಅಸಫ್ ಅಲಿ ಮುಷ್ಕರಕಾರರನ್ನೂ ಉದ್ದೇಶಿಸಿ ಮಾತನಾಡಿದರು. 1957–ಕೇರಳದಲ್ಲಿ ಚುನಾಯಿತ ಕಮ್ಯೂನಿಸ್ಟ್ ಪಕ್ಷ ಅಧಿಕಾರಕ್ಕೆ ಬಂದಿತು.

1963 ರ ಮೇ ದಿನ ರ್‍ಯಾಲಿಗಳು ಬೆಲೆ ಏರಿಕೆ ತಡೆಗಟ್ಟಲು ಮತ್ತು ಸಿ.ಡಿ.ಎಸ್ ರದ್ದು ಮಾಡಲು ಒತ್ತಾಯಿಸಿದವು.

1965ರ ಮೇ ದಿನದಂದು ಒಂದು ವಿಶೇಷ "ರಾಷ್ಟ್ರೀಯ ಸಂಗ್ರಾಮ ಸಮಿತಿ"ಯನ್ನು ರಚಿಸಲು ನಿರ್ಧರಿಸಲಾಯಿತು.

1967ರಷ್ಟರಲ್ಲಿ ಪಶ್ಚಿಮ ಬಂಗಾಳ ಮತ್ತು ಕೇರಳಗಳಲ್ಲಿ ಸಂಯುಕ್ತ ರಂಗ ಸರ್ಕಾರಗಳು ಕಮ್ಯೂನಿಷ್ಟ ಪಕ್ಷದ ನೇತೃತ್ವದಲ್ಲಿ ಅಧಿಕಾರಕ್ಕೆ ಬಂದವು.

1970 ರಲ್ಲಿ ಸಿಐಟಿಯು ಐಕ್ಯತೆ ಮತ್ತು ಹೋರಾಟದ ಘೋಷಣೆಯೊಂದಿಗೆ ಸ್ಥಾಪನೆ ಆದಾಗಿನಿಂದ ಕಾರ್ಮಿಕ ವರ್ಗದ ಐಕ್ಯತೆ ವಿಸ್ತಾರವಾಗುತ್ತ ಸಾಗಿದೆ. ಸಿಐಟಿಯು ನ ಮೇ ದಿನದ ಪ್ರಣಾಳಿಕೆಗಳು ಜನಸಮೂಹದ ಬೇಡಿಕೆಗಳಿಗಾಗಿ, ವ್ಯವಸ್ಥೆಯ ಬದಲಾವಣೆಗಾಗಿ ಕಾರ್ಮಿಕರ ವರ್ಗ ಪ್ರಜ್ಞೆಯನ್ನೂ ಹೆಚ್ಚಿಸಲು ಪ್ರಯತ್ನಿಸುತ್ತಿವೆ. ಆದರೆ ಸಾಗಬೇಕಾದ ದಾರಿ ಇನ್ನೂ ದೂರವಿದೆ. ■

ಸಮಾಜವಾದಿ ಐಕ್ಯತೆ ಅಥವಾ ಬರ್ಬರತೆ–ಆಯ್ಕೆ ನಮ್ಮದು....

ಪುಟ 6 ರಿಂದ

'ಬೀಗಮುದ್ರೆ'ಯನ್ನು ತೆರವುಗೊಳಿಸಿ 'ನವನಾರ್ಮಲ್' ಸ್ಥಿತಿಗೆ ಹೊಂದಿಕೊಳ್ಳಲು ಜನರನ್ನು ಬಿಡಬೇಕೆಂದು ಆಗ್ರಹಿಸುತ್ತಿದ್ದಾರೆ.

ಆದರೆ, ವರ್ಚುಯಲ್ ಅಲ್ಲದ, ಡಿಜಿಟಲೀಕರಣಗೊಳ್ಳಲು ಎಂದೆಂದಿಗೂ ಅಸಾಧ್ಯವಾದ ಚಪಾತಿ, ಮುದ್ದೆ, ಅನ್ನ, ಬೇಳೆ, ತರಕಾರಿ, ಮಾಂಸ ಹೊಟ್ಟೆಗಳಿಗೆ ಹೊಂದಿಕೊಂಡಿರುವ ಜನಸಾಮಾನ್ಯರು ಕೇಳಬಹುದಾದ ಭೌತಿಕ ಪ್ರಶ್ನೆಗಳು: ಈ ನಾಲ್ಕನೆಯ ಘಟ್ಟದ ಡಿಜಿಟಲೀಕರಣದ ಬದಲಾವಣೆಗಳು ಯಾರಿಗಾಗಿ? ಏತಕ್ಕಾಗಿ? ಸರ್ಕಾರವನ್ನು ಜನರು ಯಾಕಾಗಿ ಚುನಾಯಿಸುತ್ತಾರೆ? ತೆರಿಗೆಗಳನ್ನು ಯಾಕಾಗಿ ಸರ್ಕಾರಗಳಿಗೆ ಕೊಡುತ್ತಾರೆ? ಓ ಇವೆಲ್ಲಾ ಹಳೆಯ, ಚರ್ವಿತ ಚರ್ವಣವೆನಿಸಿರುವ, ಎಲ್ಲದಕ್ಕೂ ತಕರಾರು ತೆಗೆಯುವ ಪೆದ್ದು ಪ್ರಶ್ನೆಗಳು ಎಂದು ಪರಿಣಿತರು ಬೇಸರಿಸುತ್ತಾರೆ. ಆದರೆ ಏನು ಮಾಡುವುದು? ಹಸಿವು ಎಲ್ಲ ಜೀವಿಗಳ ಸನಾತನ ಸಮಸ್ಯೆ. ಆಹಾರವಿದ್ದರೆ ದೇಹ. ದೇಹವಿದ್ದರೆ ಶ್ರಮಶಕ್ತಿ. ಶ್ರಮವಿದ್ದರೆ ಜೀವನಾವಶ್ಯಕ ವಸ್ತುಗಳು. ಹೆಚ್ಚುವರಿ ಮೌಲ್ಯ. ಸಂಪತ್ತು. ರಾಜಕೀಯ. ಅಧಿಕಾರ ಎಲ್ಲಾ. ಆದರೆ ಬಂಡವಾಳಿಗರಿಗೆ ಈ ಪ್ರಶ್ನೆಗಳು ವಾಕರಿಕೆ ತರಿಸುತ್ತವೆ. ಬಂಡವಾಳವಾದಕ್ಕೆ ಲಾಭ ಬರುತ್ತಿರಬೇಕು. ಸಮಾಜವಾದವೊಂದನ್ನುಳಿದು ಮಿಕ್ಕೆಲ್ಲ ಬದಲಾವಣೆ ಅನಿವಾರ್ಯ. ಅದರ ಫಲಾನುಭವಿಗಳೂ, ಸಮರ್ಥಕರೂ ಆದ ಧರ್ಮೋದ್ಯಮಿಗಳು, ಸದ್ಗುರು, ಮಠಾಧಿಪತಿಗಳು, ನೊಂದ ಜನರಿಗೆ ಹೇಳುವ ಹಿತವಚನ: ಇನ್ನೊಬ್ಬರ ಉಸಾಬರಿಗೆ ಹೋಗಬಾರದು. ಅವರವರ ಪಾಡು ಅವರಿಗೆ, ಎಂದು ಧ್ಯಾನ, ಜಪ, ತಪ, ಯೋಗಾಸನಗಳಲ್ಲಿ ಕಾಲಕಳೆಯಬೇಕು.

ಕೋವಿಡ್ ಕಾಣಿಸಿಕೊಂಡಾಗ ಅದನ್ನು ಹರಡದಂತೆ ತಡೆಯಲು ಬಂಡವಳಿಗರು, 'ಸಾಮಾಜಿಕ ಅಂತರ' ಕಾಯ್ದುಕೊಳ್ಳಬೇಕೆಂದರು. ಸಮಾಜವಾದಿಗಳು, ಅದನ್ನು ತಿದ್ದಿ 'ಸಾಮಾಜಿಕ ಅಂತರ' ಅಲ್ಲ, ಬೇಕಾಗಿರುವುದು 'ಭೌತಿಕ ಅಂತರ, ಸಾಮಾಜಿಕ ಐಕ್ಯತೆ' ಎಂದರು. ಸಾಮಾನ್ಯ ಜನರು ಬಂಡವಾಳವಾದ, ಸಮಾಜವಾದ ಎರಡರ ನಡುವಿನ ವ್ಯತ್ಯಾಸವನ್ನು ಅರಿಯದೆಯೋ ಅಥವಾ ಸದ್ಯಕ್ಕೆ ಉಪೇಕ್ಷಿಸಿಯೋ, ಫೋಟೋ, ವೀಡಿಯೋಗಳಿಗೆ ಕಾಯದೆ, ಅವರ ಪಾಡಿಗೆ ಅವರು, 'ಕೋವಿಡ್‌ನಿಂದ ಸತ್ತರೇನು?, ಹಸಿವಿನಿಂದ ಸತ್ತರೇನು?' ಎಂದು ಬೀದಿಗೆ ಬಂದವರಿಗೆ ತಮ್ಮ ಕೈಲಾದಮಟ್ಟಿಗೆ ಸಹಾಯಮಾಡಿ, ಸಮಾಜವಾದಿ ಐಕ್ಯತೆಯನ್ನು, ಮಾನವೀಯತೆಯನ್ನು ಮೆರೆದರು.

ಕೋವಿಡ್ ಭಯ ನಿವಾರಣೆಯಾದ ಮೇಲೆ, ಡಿಜಿಟಲೀಕರಣದ ಬೆಳಕಿನಲ್ಲಿ, (ಅಥವಾ ಫ್ಯಾಸಿಸ್ಟ್ ಧೋರಣೆಯ ಕತ್ತಲಿನಲ್ಲಿ) ಬಂಡವಾಳವಾದದ ಮುಖ ಸ್ಪಷ್ಟವಾಗಬಹುದು. (ಜಿಜೆಕ್ ಹೇಳುವಂತೆ) ಆಗ ನಮ್ಮೆಲ್ಲರಿಗೆ ಉಳಿಯುವ ಆಯ್ಕೆ ಎರಡೇ ಎರಡು: ಬರ್ಬರತೆಯೋ, ಇಲ್ಲ ಸಮಾಜವಾದವೋ? ●

ಶತಮಾನೋತ್ಸವ ಲೇಖನ ಮಾಲೆ-24

ಕಮ್ಯುನಿಸ್ಟರು ಮತ್ತು ರಿನ್ ಬಂಡಾಯ

1946ರ ಫೆಬ್ರವರಿ 18 ರಂದು ಬ್ರಿಟಿಶರ ಯುದ್ಧನೌಕೆ ಹೆಚ್.ಎಂ.ಐ.ಎಸ್.ತಳ್ವಾರ್‌ನ 1,100 ಭಾರತೀಯ ನೌಕಾ ಸಿಬ್ಬಂದಿಗಳು ಮುಷ್ಕರ ಮಾಡಿದರು ಮತ್ತು ಅವರ ಜತೆ ಬೊಂಬಾಯಿಯಲ್ಲಿದ್ದ ಭಾರತೀಯ ನೌಕಾದಳದ 5,500 ಮಂದಿ ಸೇರಿಕೊಂಡರು; ಇದು ಜನಾಂಗೀಯ ತಾರತಮ್ಯದ ವಿರುದ್ಧ ಅವರು ಪ್ರತಿಭಟನೆಯಾಗಿತ್ತು. ನೌಕೆಯ ಪಟಸ್ತಂಭದಲ್ಲಿ ಹಾರಾಡುತ್ತಿದ್ದ ಬ್ರಿಟಿಷರ ಯೂನಿಯನ್ ಜಾಕ್ ಧ್ವಜವನ್ನು ಕಿತ್ತುಹಾಕಿ, ಅಲ್ಲಿ ಕಾಂಗ್ರೆಸ್, ಮುಸ್ಲಿಂ ಲೀಗ್ ಹಾಗೂ ಕೆಂಬಾವುಟಗಳನ್ನು ಹಾರಿಸಿದರು. ಅವರು ಶಸ್ತ್ರಾಸ್ತ್ರ ಹಿಡಿದು ತಮ್ಮ ಹಿರಿಯ ಅಧಿಕಾರಿಗಳನ್ನು ಬಂಧಿಸಿದರು. ಮರುದಿನ ಕೋಟೆ ಕೊತ್ತಲಗಳ ಸೇನಾವಸತಿಗಳ ಸಿಬ್ಬಂದಿಗಳು ಮುಷ್ಕರವನ್ನು ಸೇರಿಕೊಂಡರು ಮತ್ತು ಕಾಂಗ್ರೆಸ್, ಮುಸ್ಲಿಂ ಲೀಗ್ ಹಾಗೂ ಕೆಂಪು ಬಾವುಟಗಳನ್ನು ಹಿಡಿದುಕೊಂಡು ನಗರದಲ್ಲಿ ಮತಪ್ರದರ್ಶನ ಮಾಡಿದರು. ಮರುದಿನ ಮದ್ರಾಸ್, ಕರಾಚಿ, ವಿಶಾಖಪಟ್ಟಣ, ಕಲ್ಕತ್ತಾ, ದೆಹಲಿ, ಕೊಚಿನ್, ಜಾಮ್‌ನಗರ್, ಅಂಡಮಾನ್, ಬೆಹ್ರೇನ್ ಮತ್ತು ಏಡನ್‌ನ ಸಿಬ್ಬಂದಿಗಳು ಮುಷ್ಕರ ನಿರತ ನೌಕಾ ಸಿಬ್ಬಂದಿಗಳ ಬೆಂಬಲಕ್ಕೆ ನಿಂತರು. 78 ನೌಕೆಗಳು ಮತ್ತು 20 ಸಮುದ್ರ ತೀರದ ನೌಕಾದಳದ ಸಿಬ್ಬಂದಿಗಳು ಒಟ್ಟು 20,000 ಸಿಬ್ಬಂದಿಗಳು ಭಾಗಿಗಳಾಗಿದ್ದರು. ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗಿನ ಮೇಲ್ವರ್ಗದ ನಾಯಕತ್ವ ಇದನ್ನು ಸಾಮಾನ್ಯ ನೌಕಾ ಸಇಬ್ಬಂದಿಗಳ 'ಅನ್ನ-ಸಾರಿನ' ಪ್ರತಿಭಟನೆ ಎಂದು ಕಡೆಗಣಿಸಿದರೂ ಮುಂಬೈಯ ದುಡಿಯುವ ಜನಗಳು ಇದನ್ನು ಸ್ವಾತಂತ್ರ್ಯ ಹೋರಾಟದ ಭಾಗವಾಗಿ ಕಂಡು ಬೆಂಬಲಿಸಿದರು. ಇದರಲ್ಲಿ ಕಮ್ಯುನಿಸ್ಟ್ ಪಕ್ಷದ ಪಾತ್ರ ಮಹತ್ವದ್ದಾಗಿದೆ. ಇದೀಗ ರಿನ್ ಬಂಡಾಯ ಎಂದು ಪ್ರಸಿದ್ಧವಾಗಿದೆ.

ಕನ್ನಡಕ್ಕೆ: ಟಿ.ಸುರೇಂದ್ರ ರಾವ್



ಐ.ಎನ್.ಎ. ವಿಚಾರಣೆಯ ಸುತ್ತ ಬೆಳೆದು ತಾರಕಕ್ಕೆ ಏರಿದ್ದ ರಾಷ್ಟ್ರೀಯ ಭಾವನೆಗಳು 1945-46ರ ಚಳಿಗಾಲದ ಹೊತ್ತಿಗೆ ಬ್ರಿಟಿಷ್ ಸಾಮ್ರಾಜ್ಯಶಾಹಿಗಳೊಂದಿಗೆ ಹಿಂಸಾತ್ಮಕ ಸೆಣಸಾಟಕ್ಕೆ ತಿರುಗಿತು. ಭಾರತದಲ್ಲಿನ ಬ್ರಿಟಿಷ್ ಸೇನೆಯಲ್ಲಿದ್ದ ಭಾರತೀಯ ಯೋಧರು ಮತ್ತು ಯುವ ಅಧಿಕಾರಿಗಳು ಈ ಸಾಮೂಹಿಕ ಪ್ರತಿಭಟನೆಗಳಿಂದ ಬಹಳವಾಗಿ ಪ್ರಭಾವಿತರಾದರು. ಅವರಲ್ಲಿನ ಒಂದು ವಿಭಾಗವು ನುರಿತ ವೃತ್ತಿಪರರಾಗಿದ್ದರು ಮತ್ತು ಈ ಹಿಂದೆ ಬ್ರಿಟಿಷರ ಸೇನೆಯಲ್ಲಿ ಸೇವೆ ಸಲ್ಲಿಸಿದ್ದ ಹಿಂದಿನ ಪೀಳಿಗೆಯವರಿಗಿಂತ ಭಿನ್ನರಾಗಿದ್ದರು. ಅದಕ್ಕೂ ಮೇಲಾಗಿ, ಅವರು ಎರಡನೇ ವಿಶ್ವ ಮಹಾಯುದ್ಧದಲ್ಲಿ ಮಿತ್ರಕೂಟದ ಸೈನಿಕರ ಜತೆ ಮುಖ್ಯವಾಗಿ ಸೋವಿಯತ್ ಯೂನಿಯನ್ನಿನ ಕೆಂಪು ಸೇನೆಯ ಜತೆ ಹೋರಾಡಿದ್ದರು. ಅವರ ಜತೆಗಿನ ಪರಸ್ಪರ ವಿಚಾರ ವಿನಿಮಯಗಳಿಂದಾಗಿ ಫ್ಯಾಸಿಸಂ-ವಿರೋಧಿ, ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಮತ್ತು ಸಮಾಜವಾದಿ ಚಿಂತನೆಗಳು ಇವರ ಮೇಲೆ ಪ್ರಭಾವ ಬೀರಿದ್ದವು.

ನೌಕಾದಳದಲ್ಲಿ ಸೇವೆ ಸಲ್ಲಿಸುತ್ತಿದ್ದ ಭಾರತೀಯ ಸಿಬ್ಬಂದಿಗಳ ಒಂದು ವಿಭಾಗವು ರಾಷ್ಟ್ರೀಯ ಚಳುವಳಿ ಮತ್ತು ಐ.ಎನ್.ಎ. ಗಳಿಂದ ಸ್ಫೂರ್ತಿ ಪಡೆದು ಆಜಾದ್ ಹಿಂದ್ ಎಂಬ ಗುಪ್ತ ಸಂಘಟನೆಯೊಂದನ್ನು ಆರಂಭಿಸಿತು. ನೌಕಾ ಸಿಬ್ಬಂದಿಗಳನ್ನು ಬಂಡಾಯಕ್ಕೆ ಸಿದ್ಧಪಡಿಸುವಲ್ಲಿ ಈ ಸಂಘಟನೆಯು ಬಹು ಮುಖ್ಯ ಪಾತ್ರ ವಹಿಸಿದೆ. ರಾಯಲ್ ಇಂಡಿಯನ್ ನೇವಿ(ರಿನ್-ಬ್ರಿಟಿಶರ ಅಡಿಯಿದ್ದ ಭಾರತೀಯ ನೌಕಾದಳ-ಅನು.))ಯ ಸಿಬ್ಬಂದಿಗಳು ಮುಷ್ಕರ ಮಾಡಿದಾಗ ಬೊಂಬಾಯಿಯಲ್ಲಿ ಅಲ್ಲೋಲಕಲ್ಲೋಲವಾಯಿತು.

1946ರ ಫೆಬ್ರವರಿ 18 ರಂದು, ಹೆಚ್.ಎಂ.ಐ.ಎಸ್. ತಳ್ವಾರ್‌ನ 1,100 ನೌಕಾ ಸಿಬ್ಬಂದಿಗಳು ಮುಷ್ಕರ ಮಾಡಿದರು ಮತ್ತು ಅವರ ಜತೆ ಬೊಂಬಾಯಿಯಲ್ಲಿದ್ದ ಭಾರತೀಯ ನೌಕಾದಳದ 5,500 ಮಂದಿ ಸೇರಿಕೊಂಡರು; ಅವರನ್ನು ನಡೆಸಿಕೊಂಡ ರೀತಿಯ ವಿರುದ್ಧ ಅವರು ಪ್ರತಿಭಟನೆ ಮಾಡಿದರು. ನೌಕೆಯ ಪಟಸ್ತಂಭದಲ್ಲಿ ಹಾರಾಡುತ್ತಿದ್ದ ಬ್ರಿಟಿಷರ ಯೂನಿಯನ್ ಜಾಕ್ ಧ್ವಜವನ್ನು ಕಿತ್ತುಹಾಕಿ, ಅಲ್ಲಿ ಕಾಂಗ್ರೆಸ್, ಮುಸ್ಲಿಂ ಲೀಗ್ ಹಾಗೂ ಕೆಂಬಾವುಟಗಳನ್ನು ಹಾರಿಸಿದರು. ಅವರು ಶಸ್ತ್ರಾಸ್ತ್ರ ಹಿಡಿದು ತಮ್ಮ ಹಿರಿಯ ಅಧಿಕಾರಿಗಳನ್ನು ಬಂಧಿಸಿದರು. ಮರುದಿನ ಕೋಟೆ ಕೊತ್ತಲಗಳ ಸೇನಾವಸತಿಗಳ ಸಿಬ್ಬಂದಿಗಳು ಮುಷ್ಕರವನ್ನು ಸೇರಿಕೊಂಡರು ಮತ್ತು ಕಾಂಗ್ರೆಸ್, ಮುಸ್ಲಿಂ ಲೀಗ್ ಹಾಗೂ ಕೆಂಪು ಬಾವುಟಗಳನ್ನು ಹಿಡಿದುಕೊಂಡು ನಗರದಲ್ಲಿ ಮತಪ್ರದರ್ಶನ ಮಾಡಿದರು. ಆ ಸಿಬ್ಬಂದಿಗಳಲ್ಲಿ ಹಿಂದೂಗಳು, ಮುಸ್ಲಿಮರು, ಕ್ರಿಶ್ಚಿಯನರು ಮತ್ತು ಎಲ್ಲಾ ಪ್ರಾಂತಗಳಿಂದ ಬಂದ ಮತ್ತು ವಿವಿಧ ಭಾಷೆ ಮಾತಾಡುವವರೆಲ್ಲರೂ ಇದ್ದರು.

ಸರ್ಕಾರದ ಸೇವೆಗಳ ಯಾವುದೇ ಶಾಖೆಗಳಲ್ಲಿ ಕೆಲಸ ಮಾಡುತ್ತಿದ್ದ ಭಾರತೀಯ ಜನರ ಮೇಲೆ ಜನಾಂಗೀಯ ತಾರತಮ್ಯ ಮಾಡಲಾಗುತ್ತಿತ್ತು. ಅವರ ಸಂಬಳ ಬಹಳ ಕಡಿಮೆ ಇರುತ್ತಿತ್ತು ಮತ್ತು ಆಹಾರ ಹೆಚ್ಚಿನ ಸಂದರ್ಭಗಳಲ್ಲಿ ತಿನ್ನಬಾರದಂತಿದ್ದವು. ಇಂತಹ ಪೀಡನೆಯಿಂದ ಕಾಟದಿಂದ ಬೇಸತ್ತಿದ್ದ ಅನೇಕರು ಆತ್ಮಹತ್ಯೆಗೆ ಶರಣಾಗುತ್ತಿದ್ದರು, ಇನ್ನು ಕೆಲವರು ಕೆಲಸ ಬಿಟ್ಟು ಓಡಿಹೋಗುತ್ತಿದ್ದರು. ಹೆಚ್.ಎಂ.ಐ.ಎಸ್.ತಳ್ವಾರ್‌ನ ಮೇಲೆ "ಭಾರತ ಬಿಟ್ಟು ತೊಲಗಿ", "ಸಾಮ್ರಾಜ್ಯಶಾಹಿಗೆ ಧಿಕ್ಕಾರ" ಎಂದೆಲ್ಲಾ ಬರೆದಿದ್ದ ಬಿ.ಸಿ.ದತ್ ಎಂಬ ಸಿಬ್ಬಂದಿಯನ್ನು ಬಂಧಿಸಿದ್ದಕ್ಕಾಗಿ ಉಗ್ರವಾಗಿ ತಮ್ಮ ಕೋಪವನ್ನು ತೋರಿದರು. ನೌಕಾ ಸಿಬ್ಬಂದಿಗಳ ಪ್ರಮುಖ ಬೇಡಿಕೆಗಳು ಹೀಗಿದ್ದವು: ಒಳ್ಳೆಯ ಆಹಾರ ಮತ್ತು ಸಾಕಷ್ಟು ಪಡಿತರಗಳು; ಅಧಿಕಾರಿಗಳಿಂದ ಪೀಡನೆ ನಿಲ್ಲಬೇಕು; ತ್ವರಿತ ಸೇನಾನಿವೃತ್ತಿ, ಮರುವಸತಿ ಹಾಗೂ ಪುರಸ್ಕಾರಧನ(ಗ್ರಾಚುಯಿಟಿ); ಕೂಡಲೇ, ಐಎನ್.ಎ. ಬಂಧಿಗಳನ್ನೂ ಒಳಗೊಂಡಂತೆ ಎಲ್ಲಾ ರಾಜಕೀಯ ಬಂಧಿಗಳ ಬಿಡುಗಡೆ; ಇಂಡೋನೇಶಿಯಾದಿಂದ ಎಲ್ಲಾ ಭಾರತೀಯ ಪಡೆಗಳನ್ನು ತಕ್ಷಣವೇ ಹಿಂದಕ್ಕೆ ಕರೆಸಬೇಕು ಮತ್ತು ದೇಶಾದ್ಯಂತ ನಡೆದ ಪೋಲಿಸ್ ಗೋಲಿಬಾರುಗಳನ್ನು ನಿಷ್ಪಕ್ಷಪಾತ ನ್ಯಾಯಾಂಗ ತನಿಖೆಗೆ ಒಳಪಡಿಸಬೇಕು.

ಬೊಂಬಾಯಿ ಒಂದೇ ಅಲ್ಲದೇ, ಕರಾಚಿ ಕೂಡ ನೌಕಾ ಸಿಬ್ಬಂದಿಗಳ ಬಂಡಾಯ ನಡೆದ ಮತ್ತೊಂದು ಪ್ರಮುಖ ಕೇಂದ್ರವಾಗಿತ್ತು. ಸುದ್ದಿ ಫೆಬ್ರವರಿ 19 ರಂದು ಕರಾಚಿ ತಲುಪಿದ ಕೂಡಲೇ, ಹೆಚ್.ಎಂ.ಐ.ಎಸ್. ಹಿಂದೂಸ್ತಾನ್ ನೌಕೆ(ನಂತರ ಶಸ್ತ್ರಾಸ್ತ್ರ ಕಾರ್ಯಾಚರಣೆಯಲ್ಲಿ ಭಾಗವಹಿಸಿತ್ತು) ಹಾಗೂ ಮತ್ತೊಂದು ನೌಕೆ ಮತ್ತು ಸಮುದ್ರ ತೀರದ ಮೂರು ನೌಕಾದಳದ ಸಿಬ್ಬಂದಿಗಳು ಮಿಂಚಿನ ಮುಷ್ಕರ ನಡೆಸಿದರು. ಬ್ರಿಟಿಷ್ ಸೇನೆಯ ಮುಖ್ಯಸ್ಥ ಅಡ್ಮಿರಲ್ ಗಾಡ್‌ಫ್ರೈ ಯಾವಾಗ ಭಾರತೀಯ ನೌಕಾದಳದ ಎಲ್ಲಾ ನೌಕೆಗಳನ್ನೂ ಸ್ಫೋಟಿಸಿ ಚೂರು ಚೂರು ಮಾಡುತ್ತೇನೆ ಎಂದು ಬೆದರಿಕೆ ಹಾಕಿದನೋ, ಆಗ ಈ ಎರಡು ಕೇಂದ್ರಗಳಲ್ಲದೇ, ಮದ್ರಾಸ್, ಕರಾಚಿ, ವಿಶಾಖಪಟ್ಟಣ, ಕಲ್ಕತ್ತಾ, ದೆಹಲಿ, ಕೊಚಿನ್, ಜಾಮ್‌ನಗರ್, ಅಂಡಮಾನ್, ಬೆಹ್ರೇನ್ ಮತ್ತು ಏಡನ್‌ನ ಸಿಬ್ಬಂದಿಗಳು ಮುಷ್ಕರ ನಿರತ ನೌಕಾ ಸಿಬ್ಬಂದಿಗಳ ಬೆಂಬಲಕ್ಕೆ ನಿಂತರು. 78 ನೌಕೆಗಳು ಮತ್ತು 20 ಸಮುದ್ರ ತೀರದ ನೌಕಾದಳದ ಸಿಬ್ಬಂದಿಗಳು ಒಟ್ಟು 20,000 ಸಿಬ್ಬಂದಿಗಳು ಭಾಗಿಗಳಾಗಿದ್ದರು. ರಾಯಲ್ ಏರ್ ಫೋರ್ಸ್ (ಆರ್‌ಎಎಫ್) ವಾಯು ಸೇನೆಯ ಬೊಂಬಾಯಿ ಪ್ರದೇಶದ ಮರೀನ್ ಡ್ರೈವ್, ಅಂಧೇರಿ, ಸಯನ್ ಮತ್ತು ಪುಣೆ, ಕಲ್ಕತ್ತಾ, ಜೆಸ್ಸೂರ್ ಹಾಗೂ ಅಂಬಾಲಾ ಘಟಕಗಳು ಬೆಂಬಲವಾಗಿ ಸೌಹಾರ್ದ ಮುಷ್ಕರ ಮಾಡಿದರು. ಜಬಲ್‌ಪುರದ ಸಿಪಾಯಿಗಳೂ ಮುಷ್ಕರ ನಡೆಸಿದರು, ಕೊಲಾಬಾದ ದಂಡುಪ್ರದೇಶ (ಕಂಟೋನ್ಮೆಂಟ್) ಕೂಡ 'ಅನಿಷ್ಟಕಾರಿ ಪ್ರಕ್ಷುಬ್ಧತೆಯನ್ನು' ತೋರ್ಪಡಿಸಿತು.

ಕಮ್ಯುನಿಸ್ಟ್ ಪಕ್ಷದ ಪಾತ್ರ:

ಕಮ್ಯುನಿಸ್ಟ್ ಪಕ್ಷವು ತಕ್ಷಣವೇ ನೌಕಾ ಸಿಬ್ಬಂದಿಗಳ ಬೇಡಿಕೆಗಳಿಗೆ ಬೆಂಬಲ ವ್ಯಕ್ತಪಡಿಸಿತು. ಅದು ಫೆಬ್ರವರಿ 19ರಂದು ಒಂದು ಕರಪತ್ರ ಪ್ರಕಟಿಸಿ ಮುಷ್ಕರವನ್ನು ಬೆಂಬಲಿಸಲು ಜನರಿಗೆ ಕರೆ ನೀಡಿತು ಮತ್ತು ನೌಕೆಯನ್ನು ಹಾಗೂ ಅದನ್ನು ನಡೆಸುತ್ತಿದ್ದ ಭಾರತೀಯ ಯೋಧರನ್ನು ನಾಶ ಮಾಡುವುದಾಗಿ ನೀಡಿದ ಅಡ್ಮಿರಲ್ ಗಾಡ್‌ಫ್ರೈನ ದುರಹಂಕಾರದ ಬೆದರಿಕೆಗೆ ಉತ್ತರವಾಗಿ ಫೆಬ್ರವರಿ 22 ರಂದು ಸಾರ್ವತ್ರಿಕ ಮುಷ್ಕರದಲ್ಲಿ ಭಾಗವಹಿಸಬೇಕೆಂದು ಪಕ್ಷವು ತನ್ನ ಪತ್ರಿಕೆಯ ಮೂಲಕ ಜನರಿಗೆ ಕರೆ ನೀಡಿತು. ದೇಶಾದ್ಯಂತ ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸಿದರು, ಹರತಾಳ ಮತ್ತು ಮೆರವಣಿಗೆಗಳನ್ನು ಸಂಘಟಿಸಿ ಸಿಬ್ಬಂದಿಗಳಿಗೆ ಸಹಾನುಭೂತಿ ವ್ಯಕ್ತಡಿಸಿದರು ಮತ್ತು ಸರಕಾರದ ದಬ್ಬಾಳಿಕೆಯನ್ನು ಖಂಡಿಸಿದರು. ದೇಶದ ಪ್ರತಿಯೊಬ್ಬರೂ ಈ ಬಂಡಾಯವನ್ನು ಒಟ್ಟು ಸ್ವಾತಂತ್ರ್ಯ ಚಳುವಳಿಯ ಭಾಗವೆಂದು ಬೆಂಬಲಿಸಿದರು.



ಕಮಲ ದೋಂಡೆ

ತಮ್ಮೆಲ್ಲಾ ಭಿನ್ನಾಭಿಪ್ರಾಯಗಳನ್ನು ಮರೆತು ನೌಕಾ ಸಿಬ್ಬಂದಿಗಳ ಬೇಡಿಕೆಗಳನ್ನು ಬೆಂಬಲಿಸಬೇಕೆಂದು ಕಮ್ಯುನಿಸ್ಟ್ ಪಕ್ಷವು ರಾಜಕೀಯ ಪಕ್ಷಗಳಿಗೆ ಮನವಿ ಮಾಡಿತು. ಸಾರ್ವತ್ರಿಕ ಮುಷ್ಕರಕ್ಕಾಗಿ ಕಮ್ಯುನಿಸ್ಟರ ಕರೆಗೆ ಓಗೊಟ್ಟು ಲಕ್ಷಾಂತರ ಕಾರ್ಮಿಕರು ಕಾಖಾನೆಗಳಿಂದ ಹೊರಬಂದು ಬೀದಿಗಿಳಿದರು. ಅಂಗಡಿಗಳು, ವರ್ತಕರು, ಹೋಟೆಲುಗಳ ಹರತಾಳ ಮತ್ತು ವಿದ್ಯಾರ್ಥಿಗಳು ಮತ್ತು ಕಾರ್ಖಾನೆಗಳು ಹಾಗೂ ಸಾರ್ವಜನಿಕ ಸಾರಿಗೆ ಸೇವೆಗಳ ಕಾರ್ಮಿಕರ ಮುಷ್ಕರಗಳು ಇಡೀ ಬೊಂಬಾಯಿ ನಗರವನ್ನು ಸ್ಥಗಿತಗೊಳಿಸಿದವು. ಹಿಂದೆಂದೂ ಕಾಣದ ಅತ್ಯಂತ ದೊಡ್ಡ ಮುಷ್ಕರ ಮತ್ತು ಹರತಾಳವನ್ನು ಬೊಂಬಾಯಿ ಕಂಡಿತು.

ಅದಕ್ಕೆ ಉತ್ತರವಾಗಿ ಬ್ರಿಟಿಷ್ ಸರ್ಕಾರವು ಬ್ರಿಟಿಷ್ ಸೈನಿಕರನ್ನೇ ಶಸ್ತ್ರಾಸ್ತ್ರಸಜ್ಜಿತ ವಾಹನಗಳಲ್ಲಿ ರಸ್ತೆಗಿಳಿಸಿತು. ಯಾವುದೇ ಎಚ್ಚರಿಕೆ ನೀಡದೇ ಹೆಚ್ಚು ಜನರು ಸೇರಿದ್ದ ಜನಸಂದಣಿಯತ್ತ ಮನಸೋಯಿಚ್ಛೆ ಗೋಲಿಬಾರ್ ಮಾಡಲಾಯಿತು. ಗಂಡಸರು ಹೆಂಗಸರು ಎಂದು ಬೇಧವೆಣಿಸದೇ ಅಮಾಯಕ ಕಾರ್ಮಿಕರು ಮತ್ತು ಜನರ ಮೇಲೆ ಮಾಡಿದ ಗೋಲಿಬಾರಿನಲ್ಲಿ ಹಲವಾರು ಜನರು ಹತ್ಯಗೊಳಗಾದರು. ಅದರಲ್ಲಿ ಕಮಲ ದೋಂಡೆ, ಕಮ್ಯುನಿಸ್ಟ್ ಮುಖಂಡೆ ಮತ್ತು ಪರೇಲ್ ಮಹಿಳಾ ಸಂಘದ ನಾಯಕಿ ಹುತಾತ್ಮಳಾದರು. ಸರ್ಕಾರಿ ವರದಿಯ ಪ್ರಕಾರ ಫೆಬ್ರವರಿ 21-23ರ ಆ ಮೂರು ದಿನಗಳಂದು 250 ಜನರು ಹತರಾದರು. "ಬಂದೂಕುಗಳು, ಟ್ಯಾಂಕುಗಳು ಮತ್ತು ಬಾಂಬರುಗಳಿಂದ ಭಾರತದ ಜನರನ್ನು ಬೆದರಿಸುವ ಕಾಲ ಎಂದಿಗೋ ಮುಗಿದವು," ಸಾಮ್ರಾಜ್ಯಶಾಹಿಗಳು ನಡೆಸಿದ ರಕ್ತಪಾತವು 'ಜನರ ಐಕ್ಯತೆಯನ್ನು ಇನ್ನೂ ಗಟ್ಟಿಗೊಳಿಸಲಿದೆ ಹಾಗೂ ಭಯೋತ್ಪಾದಕ ಆಳ್ವಿಕೆಯನ್ನು ಕೊನೆಗೊಳಿಸಲಿದೆ' ಎಂದು ಪಕ್ಷವು ಘೋಷಿಸಿತು.

ಸಂಪೂರ್ಣ ಹರತಾಳ ಮಾಡಬೇಕೆಂದು ಎಲ್ಲಾ ಪಕ್ಷಗಳಿಗೆ ಮನವಿ ಮಾಡಿದ ಕಮ್ಯುನಿಸ್ಟ್ ಪಕ್ಷವು ಸರ್ಕಾರದ ದಬ್ಬಾಳಿಕೆಗೆ ಉತ್ತರವಾಗಿ ನಮ್ಮ ಆಕ್ರೋಶ ವ್ಯಕ್ತಪಡಿಸಬೇಕು ಎಂದು ಕರೆ ನೀಡಿತು. ರಿನ್ ಸಿಬ್ಬಂದಿಗಳ ಧೀರೋದಾತ್ತ ಹೋರಾಟಕ್ಕೆ

ಪುಟ 14 ಕ್ಕೆ

ಫೆ. 19, ಕಾಂಗ್ರೆಸ್, ಮುಸ್ಲಿಂ ಲೀಗ್ ಹಾಗೂ ಕೆಂಪು ಬಾವುಟಗಳನ್ನು ಹಿಡಿದುಕೊಂಡು ನಗರದಲ್ಲಿ ಮತಪ್ರದರ್ಶನ



ಫೆ. 22 ಸಾರ್ವತ್ರಿಕ ಮುಷ್ಕರ-ಹರತಾಳ



“ಪ್ರಧಾನಿಗಳ ಬಳಿ ಶ್ರೀಮಂತ ಸುಸ್ತಿದಾರರಿಗೆ ಹಣ ಇದೆ, ಬಡ ರೈತರಿಗೆ ಇಲ್ಲ”

ಹೀಗೆಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಹೇಳಿದ್ದಾರೆ.

ರಿಝರ್ವ್ ಬ್ಯಾಂಕ್ ಸಪ್ಟಂಬರ್ 30, 2019ರ ವರೆಗೆ ಅತಿ ದೊಡ್ಡ 50 “ಬೇಕೆಂದೇ” ಸಾಲ ಮರುಪಾವತಿ ಮಾಡದೆ ಸುಸ್ತಿದಾರರಾದ ಕಂಪನಿಗಳ ಒಟ್ಟು ರೂ. 68607 ಕೋಟಿ ರೂ.ಗಳನ್ನು ‘ರೈಟ್ ಆಫ್’ ಮಾಡಲಾಗಿದೆ ಎಂದು ಒಂದು ಮಾಹಿತಿ ಹಕ್ಕು ಪ್ರಶ್ನೆಗೆ ಉತ್ತರಿಸುತ್ತ ಹೇಳಿದೆ ಎಂಬ ಸುದ್ದಿಗೆ ಪ್ರತಿಕ್ರಿಯಿಸುತ್ತ ಯೆಚುರಿ ಹೀಗೆ ಟಿಪ್ಪಣಿ ಮಾಡಿದ್ದಾರೆ.

ಐಎಎನ್‌ಎಸ್ ಸುದ್ದಿ ಸಂಸ್ಥೆಯ ಎಪ್ರಿಲ್ 27ರ ವರದಿಯ ಪ್ರಕಾರ ಈ ಪಟ್ಟಿಯಲ್ಲಿ ‘ಮೆಹುಲ್ ಭಾಯಿ’, ಅಂದರೆ ‘ಅಚ್ಛೇ ದಿನ್’ಗಳಲ್ಲಿ ಪ್ರಧಾನಿಗಳಿಂದ ‘ಭಾಯಿ’ ಎಂಬ ಮೆಚ್ಚುಗೆ ಪಡೆದು, ನಂತರ ದೇಶದಿಂದ ಪರಾರಿಯಾಗಿ ಈಗ ಅಂತಿಗುವ ಮತ್ತು ಬಾರ್ಬಡೊಸ್ ದ್ವೀಪಸಮೂಹಗಳ ‘ನಾಗರಿಕ’ರಾಗಿರುವ ಗುಜರಾತಿನ ಮಾದರಿ ವಜ್ರ ವ್ಯಾಪಾರಿ ಮೆಹುಲ್ ಚೋಕ್ಸಿಯ ಗೀತಾಂಜಲಿ ಜೆಮ್ಸ್ ಈ ಪಟ್ಟಿಯಲ್ಲಿ ಮೊದಲ ಹೆಸರು. ಇದರ ಸಾಲ ಬಾಕಿ ರೂ. 5492 ಕೋಟಿ, ಅವರ ಇನ್ನೆರಡು ಕಂಪನಿಗಳು, ಗಿಲಿ ಇಂಡಿಯ ಲಿಮಿಟೆಡ್ ಮತ್ತು ನಕ್ಷತ್ರ ಬ್ರಾಂಡ್ಸ್ ಲಿಮಿಟೆಡ್ ಅನುಕ್ರಮವಾಗಿ 1447 ಕೋಟಿ ಮತ್ತು 1109 ಕೋಟಿ ರೂ. ಸಾಲ ಪಡೆದಿವೆ ಎಂದು ಈ ಆರ್.ಟಿ.ಐ. ಅರ್ಜಿ ಹಾಕಿರುವ ಸಾಕೇತ್ ಗೋಖಲೆ ಐಎಎನ್‌ಎಸ್ ಗ ಹೇಳಿದ್ದಾರೆ.

ರೂ. 4076 ಕೋಟಿ ಸುಸ್ತಿ ಮಾಡಿರುವ ಜತಿನ್ ಮೆಹ್ತ ಒಡೆತನದ ಮತ್ತೊಂದು ವಜ್ರ ಮತ್ತು ಆಭರಣ ಕಂಪನಿ ಎರಡನೇ ಸ್ಥಾನದಲ್ಲಿದೆ.

ದೇಶಭಕ್ತಿ, ಸಂಸ್ಕೃತಿಯ ಪಾಟ ಹೇಳುವ ಯೋಗಗುರು ಬಾಬಾ ರಾಂದೇವ್ ಮತ್ತು ಬಾಲಕೃಷ್ಣ ಒಡೆತನದ ರುಚಿ ಸೋಯಾ ಇಂಡಸ್ಟ್ರಿಸ್ ಲಿ. ಕೂಡ ರೂ.2212 ಕೋಟಿ ಸುಸ್ತಿ ಸಾಲದೊಂದಿಗೆ ಸಾಕೇತ್ ಗೋಖಲೆ ವರ್ಣಿಸಿರುವ ‘ವಜ್ರಖಚಿತ’ ಪಟ್ಟಿಯಲ್ಲಿದೆ!

ರೂ.1943 ಕೋಟಿ ಸುಸ್ತಿ ಮಾಡಿರುವ ನಮ್ಮ ಬೆಂಗಳೂರಿನ ವಿಜಯ ಮಲ್ಯ ಒಡೆತನದ ಕಿಂಗ್ ಫಿಶರ್ ಮತ್ತೊಂದು ‘ಪ್ರತಿಷ್ಠಿತ’ ಹೆಸರು!


“ಮೆಹುಲ್ ಭಾಯಿ ದೇಶದಿಂದ ಪರಾರಿಯಾದರಷ್ಟೇ ಅಲ್ಲ, ಬ್ಯಾಂಕುಗಳಿಂದ ಅವರು ಸಾರ್ವಜನಿಕರ ಹಣದಿಂದ ಪಡೆದಿದ್ದ ಸಾಲಗಳ ರೈಟ್ ಆಫ್‌ನ್ನೂ ಪಡೆದರು!....ಇದೇ ಮೋದಿ ಸರಕಾರ ಇದ್ದಕ್ಕಿದ್ದಂತೆ ಹಾಕಿದ ಲಾಕ್‌ಡೌನಿನಲ್ಲಿ ನರಳುತ್ತಿರುವ ಬಡವರು ಮತ್ತು ನಿರ್ಗತಿಕರಿಗೆ ಹಣ ಇಲ್ಲ ಎನ್ನುತ್ತದೆ. ಅಥವ ಎಫ್‌ಸಿಐ ಗೋದಾಮುಗಳಲ್ಲಿ ಕೊಳೆಯುತ್ತಿರುವ ಆಹಾರಧಾನ್ಯಗಳನ್ನು ಅವರಿಗೆ ಕೊಡಲು ಹಣ ಇಲ್ಲ ಎನ್ನುತ್ತದೆ. ಆದರೆ ಹಮಾರೇ ಮೆಹುಲ್ ಭಾಯಿಗೆ ಯಾವಾಗಲೂ ಹಣ ಇರುತ್ತದೆ” ಎಂದು ಮುಂದುವರೆದು ಯೆಚುರಿ ಟಿಪ್ಪಣಿ ಮಾಡಿದ್ದಾರೆ.

ಪ್ರತಿಮೆಗಳು, ಟ್ರಂಪ್ ತಮಾಷಾ, ಶ್ರೀಮಂತ ಚಮಚಾಗಳ ಮೋಸಗಳ ರೈಟ್ ಆಫ್, ವೈಯಕ್ತಿಕ ಪ್ರಚಾರ ಇವೇ ಈ ಸರಕಾರದ ಆದ್ಯತೆಗಳು ಬಡಜನರಿಗೆ ಜೀವನಕ್ಕೆ ನಗದು ವರ್ಗಾವಣೆ, ಆಹಾರಧಾನ್ಯಗಳ ಮೂಲಕ ಬೆಂಬಲ ಒದಗಿಸುವುದು ಈ ಸರಕಾರದ ಆದ್ಯತೆ ಅಲ್ಲ. ಈಗ ಇವರ ಆದ್ಯತೆಯ ಪಟ್ಟಿಯಲ್ಲಿ ನವದೆಹಲಿಯಲ್ಲಿ ಹೊಸ ಸೆಂಟ್ರಲ್ ವಿಸ್ತಾದಲ್ಲಿ ಪ್ರಧಾನಿಗಳಿಗೆ ಹೊಸದೊಂದು ನಿವಾಸದ ನಿರ್ಮಾಣವೂ ಸೇರಿದೆ ಎಂದು ಯೆಚುರಿ ವ್ಯಂಗ್ಯವಾಡಿದರು.

ರೈಟ್ ಆಫ್ ಸೌಲಭ್ಯ ಪಡೆದ 50ರಲ್ಲಿ ಮೊದಲ ಎರಡು ಸ್ಥಾನಗಳಲ್ಲಿರುವ ಸುಸ್ತಿದಾರರೂ ಸೇರಿದಂತೆ 6 ವಜ್ರ ಮತ್ತು ಆಭರಣ ವಲಯದ ಉದ್ದಿಮೆಗಳು. ಈ ಸುದ್ದಿ ಬಂದ ಮರುದಿನವೇ ಮೋದಿ–ಷಾ ಜೋಡಿಯ ಮಾದರಿ ಗುಜರಾತಿನ ವಜ್ರಾಭರಣ ನಗರಿ ಸೂರತ್‌ನಲ್ಲಿ ವಜ್ರ ವ್ಯಾಪಾರದ ಭವ್ಯ ಭವನದ ಬಳಿ ವಲಸೆ ಕಾರ್ಮಿಕರು ಮತ್ತೊಮ್ಮೆ ಪ್ರತಿಭಟನೆ ನಡೆದರು, ಈ ಬಾರಿ ಹಲವು ಕಾರುಗಳು ಜಖಂ ಆದವು ಎನ್ನಲಾಗಿದೆ. ಇದು ಈ ಲಾಕ್‌ಡೌನ್ ಅವಧಿಯಲ್ಲಿ ಸೂರತ್‌ನ ವಲಸೆ ಕಾರ್ಮಿಕರ ಮೂರನೇ ಪ್ರತಿಭಟನೆ.

ಇದನ್ನು ಪ್ರಸ್ತಾಪಿಸುತ್ತ ಈಗೇಕೆ ಅವರು ‘ಗುಜರಾತ್ ಮಾದರಿ’ ಬಗ್ಗೆ ಮಾತಾಡುತ್ತಿಲ್ಲ ಎಂದು ಕೇಳಿದರು.

“ಅಚ್ಛೇ ದಿನ್? ಮೋದಿ–ಷಾರವರ ಗುಜರಾತ್ ಒಂದು ಆರೋಗ್ಯ ಬಿಕ್ಕಟ್ಟನ್ನು ಎದುರಿಸುತ್ತಿದೆ. 199ರಿಂದ ಈ ರಾಜ್ಯದಲ್ಲಿ ಬಿಜೆಪಿ ಆಳ್ವಿಕೆ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಧ್ವಂಸ ಮಾಡಿದೆ. ಆಳ್ವಿಕೆ ಮತ್ತು ಮಾನವೀಯ ಪರಿಗಣನೆಗಳು ಸಂಪೂರ್ಣವಾಗಿ ಕುಸಿದು ಬಿದ್ದಿವೆ. ಗುಜರಾತಿನಿಂದ ಈ ದೃಶ್ಯಗಳು ನೋವುಂಟು ಮಾಡುತ್ತಿವೆ” ಎಂದು ಖೇದ ವ್ಯಕ್ತಪಡಿಸಿದ ಯೆಚುರಿ “ಕೇಂದ್ರದ ಆರೋಗ್ಯ ಮತ್ತಿತರ ಇಲಾಖೆಗಳ ಮಂತ್ರಿಗಳು ಕಾಣೆಯಾಗಿದ್ದಾರೆ ಎಂದು ಪೋಸ್ಟರ್‌ಗಳನ್ನು ಹಚ್ಚಬೇಕಾಗಿದೆಯೇ? ಗುಜರಾತ್, ಮಧ್ಯಪ್ರದೇಶ, ಅಥವ ಉತ್ತರಪ್ರದೇಶದ ಗಂಭೀರ ಪರಿಸ್ಥಿತಿಯ ಬಗ್ಗೆ ಪ್ರಶ್ನೆಗಳಿಗೆ ಉತ್ತರ ಕೊಡಲು ಇವರು ಪತ್ರಿಕಾಗೋಷ್ಠಿಗಳಲ್ಲಿ ಇರುವುದೇ ಇಲ್ಲ. ಆಗ್ರಾ ಒಂದು ಮಾದರಿ ಎಂದು ಹೇಳಲಾಯಿತು. ಈಗ ಆ ಮಾದರಿಯ ಸ್ಥಿತಿಯೇನು ಎಂದು ಆರೋಗ್ಯ ಮಂತ್ರಿಗಳು ಹೇಳುತ್ತಿಲ್ಲ” ಎಂದು ಯೆಚುರಿ ಕಟುವಾಗಿ ಟೀಕಿಸಿದರು.



ವ್ಯಂಗ್ಯಚಿತ್ರ: ಪಿ.ಮಹಮ್ಮದ್



ಈ ಕೆಳಗಿನ ಚಿತ್ರ ಈ ಹೊಸ ಬಿಜೆಪಿ ಮಾದರಿ ನಗರದಲ್ಲಿಯ ಅಮಾನವೀಯ ಸ್ಥಿತಿಯನ್ನು ತೋರಿಸುತ್ತದೆ. ಒಂದು ಕ್ವಾರಂಟೈನ್ ಕೇಂದ್ರದ ಬೀಗ ಹಾಕಿದ ಗೇಟಿನ ಹೊರಗೆ ಕುಡಿಯುವ ನೀರಿನ ಬಾಟಲುಗಳನ್ನು ಇಟ್ಟು ಬಿಸ್ಕತ್ತುಗಳನ್ನು ಬಿಸಾಕುವ ಚಿತ್ರ. ಇದು ಎನ್‌ಡಿಟಿವಿಯ ಅಲೋಕ್ ಪಾಂಡೆ ತಮ್ಮ ಟ್ವಿಟರ್‌ನಲ್ಲಿ ಹಾಕಿರುವ ವೀಡಿಯೋದಿಂದ ಪಡೆದದ್ದು. ಸಾಮಾಜಿಕ ಅಂತರವೇನು, ಕನಿಷ್ಟ ಮಾನವ ಘನತೆಯೂ ಇಲ್ಲಿ ಕಾಣುತ್ತಿಲ್ಲ ಎಂದು ಅವರು ಬರೆದಿದ್ದಾರೆ.

ಲಾಕ್ ಡೌನ್ ಆಹಾರ–ಅಭದ್ರತೆ ಹೆಚ್ಚಿಸಿದೆ


ಸುಮಾರು ಅರ್ಧದಷ್ಟು ಕುಟುಂಬಗಳು ಒಪ್ಪೊತ್ತು ಊಟ ಬಿಟ್ಟಿವೆ

ಈ ಲಾಕ್ ಡೌನ್ ಅವಧಿಯಲ್ಲಿ ನಮ್ಮ ಜನಗಳಲ್ಲಿ 44ಶೇ.ಮಂದಿ ತಾವು ಸೇವಿಸುವ ಆಹಾರದ ಪ್ರಮಾಣವನ್ನು ಇಳಿಸಿದ್ದಾರೆ ಅಥವ ಒಂದು ಹೊತ್ತಿನ ಊಟವನ್ನು ಬಿಟ್ಟಿದ್ದಾರೆ. 31ಶೇ. ಮಂದಿಗೆ ಇನ್ನೂ ಯಾವುದೇ ನಗದು ಅಥವ ಧಾನ್ಯಗಳ ರೂಪದಲ್ಲಿ ಪರಿಹಾರ ಸಿಕ್ಕಿಲ್ಲ. ಇದು ಯಾವುದೇ ಎಡ ಒಲವಿನ ಸಂಸ್ಥೆ ನಡೆಸಿದ ಸರ್ವೆಯಲ್ಲಿ ಕಂಡು ಬಂದ ಸಂಗತಿಯಲ್ಲ. ಸ್ವತಃ ಕೇಂದ್ರ ಸರಕಾರದ ಆರೋಗ್ಯ ಇಲಾಖೆ ನಡೆಸಿದ ಸರ್ವೆಯಲ್ಲಿ ಕಂಡು ಬಂದ ಸಂಗತಿ ಎಂದು ನವದೆಹಲಿಯಿಂದ ಟ್ರಿಬ್ಯೂನ್ ನ್ಯೂಸ್ ಸರ್ವಿಸ್ ವರದಿ ಮಾಡಿದೆ.

ಅಂದರೆ ಲಾಕ್‌ಡೌನ್ ಜನಗಳ ಆಹಾರ–ಅಭದ್ರತೆಯನ್ನು ಒಂದು ಹೊತ್ತು ಊಟವನ್ನೂ ಬಿಡುವ ಮಟ್ಟದ ವರೆಗೆ ಹೆಚ್ಚಿಸಿದೆ. ಮತ್ತು ಸರಕಾರ ಪ್ರಕಟಿಸಿದ ಪರಿಹಾರಗಳು ಸಾರ್ವತ್ರಿಕವಾಗಿಲ್ಲ ಎಂಬುದನ್ನು ಸರಕಾರದ ಸರ್ವೆಯೇ ತೋರಿಸಿದೆ. ಆದರೂ ಲಾಕ್‌ಡೌನನ್ನು ಮೂರು ವಾರಗಳಿಗೆ ವಿಸ್ತರಿಸಿದ ಎರಡು ವಾರಗಳ ನಂತರವೂ ಯಾವುದೇ ಅರ್ಥಪೂರ್ಣ ಪರಿಹಾರ ಕ್ರಮಗಳನ್ನು ಈ ಸರಕಾರ ಕೈಗೊಂಡಿಲ್ಲ. ಪ್ರಧಾನಿಗಳ ‘ಮನದ ಮಾತಿ’ನಲ್ಲಾಗಲೀ, ಮುಖ್ಯಮಂತ್ರಿಗಳೊಂದಿಗೆ ಪ್ರಧಾನಿಗಳ ವಿಡಿಯೋ ಕಾನ್ಫರೆನ್ಸಿನಲ್ಲಾಗಲೀ ಈ ಬಗ್ಗೆ ಸಂಕೇತವೂ ಇಲ್ಲ.

ಈ ಸರ್ವೆ ಜನಗಳಿಗೆ ಕೊವಿಡ್–19ರ ಬಗ್ಗೆ ಎಷ್ಟು ಗೊತ್ತಿದೆ ಎಂಬುದನ್ನು ತಿಳಿಯಲೂ ಪ್ರಯತ್ನಿಸಿದೆಯಂತೆ. ಅದರ ಪ್ರಕಾರ 65ಶೇ. ಮಂದಿಗೆ ಕೊವಿಡ್–19ರ ರೋಗಲಕ್ಷಣಗಳ (ಜ್ವರ, ಕೆಮ್ಮು. ಉಸಿರಾಟದ ತೊಂದರೆ) ಬಗ್ಗೆ ತಿಳಿದಿಲ್ಲ. ಅಂದರೆ ಸಾಮಾನ್ಯ ನೆಗಡಿ, ಫ್ಲೂ ಮತ್ತು ಕೊವಿಡ್ ಮಧ್ಯೆ ವ್ಯತ್ಯಾಸ ಗೊತ್ತಿಲ್ಲ. 27ಶೇ.ಮಂದಿಗೆ ಈ ಯಾವ ಲಕ್ಷಣವನ್ನೂ ಗುರುತಿಸಲಾಗಿಲ್ಲ, 33ಶೇ. ಮಂದಿಗೆ ಈ ಲಕ್ಷಣಗಳು ಕಾಣುವ ಮೊದಲು ಜನಗಳಲ್ಲಿ ಈ ವೈರಸ್ ಇರಬಹುದು ಎಂದು ತಿಳಿದಿಲ್ಲ.


ಈ ನಡುವೆ, ಕೊವಿಡ್–19 ಹರಡಿಕೆಯಿಂದಾಗಿ ರೋಗನಿರೋಧಕ ಸೇವೆಗಳು ಅಸ್ತವ್ಯಸ್ತಗೊಳ್ಳುತ್ತಿರುವುದರಿಂದಾಗಿ ಕೋಟ್ಯಂತರ ಮಕ್ಕಳಿಗೆ ಸಿಡುಬು, ದಿಫ್ತೇರಿಯ, ಪೋಲಿಯೋ ವಿರುದ್ಧ ಜೀವವುಳಿಸುವ ಚುಚ್ಚು ಮದ್ದುಗಳು ತಪ್ಪಿ ಹೋಗುವ ಅಪಾಯವಿದೆ, ಅವರ ಬದುಕು ತೂಗುಯ್ಯಾಲೆಯಲ್ಲಿದೆ ಎಂದು ಯುನಿಸೆಫ್(ವಿಶ್ವ ಸಂಸ್ಥೆ ಮಕ್ಕಳ ನಿಧಿ) ಎಚ್ಚರಿಸಿದೆ.



ವ್ಯಂಗ್ಯಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್

ಮಹಾಮಾರಿಯ ವಿರುದ್ಧ ಹೋರಾಟದ ನಡುವೆಯೇ ಮತ್ತೊಂದು ದುಂದುವೆಚ್ಚಕ್ಕೆ ಅನುಮೋದನೆ

3000 ಕೋಟಿ ರೂ.ಗಳ ಸರ್ದಾರ್ ಪಟೇಲ್ ಐಕ್ಯತೆಯ ಪ್ರತಿಮೆಯ ನಂತರ ಈಗ ಪ್ರಧಾನಿಗಳ ಇನ್ನೊಂದು ಮೆಚ್ಚಿನ ಪರಿಯೋಜನೆಯೆಂದರೆ ನವದೆಹಲಿಯ ಸೆಂಟ್ರಲ್ ವಿಸ್ಟಾ, ಅಂದರೆ ಸಂಸದ್ ಭವನ ಮತ್ತು ಸುತ್ತಲಿನ ದೃಶ್ಯಾವಳಿಗಳ ಪುನರ್ನಿರ್ಮಾಣ. ಈ ಪರಿಯೋಜನೆಯ ಮೊತ್ತ 20,000 ಕೋಟಿ ರೂ. ಇದರಲ್ಲಿ ಹೊಸ ಸಂಸದ್ ಭವನ ಮತ್ತು ಹೊಸದೊಂದು ಪ್ರಧಾನಿ ನಿವಾಸ ಕೂಡ ಸೇರಿದೆ. ಕೊವಿಡ್–19 ಮಹಾಮಾರಿಯ ವಿರುದ್ಧ ಹೋರಾಟದ ರಣಕಹಳೆ ಊದಿ ಚಪ್ಪಾಳೆ ಮತ್ತು ಗಂಟೆ ಜಾಗಟೆಗಳ ಮೂಲಕ ಅದನ್ನು ಪ್ರತಿನಿಧಿಸಲು ಪ್ರಧಾನಿಗಳು ಕರೆ ಕೊಟ್ಟ ನಂತರ, ಈ ಹೋರಾಟದ ನಡುವೆಯೇ, ಲಾಕ್‌ಡೌನಿನ ನಾಲ್ಕು ದಿನಗಳ ಮೊದಲು ನಗರ ಮತ್ತು ವಸತಿ ಮಂತ್ರಾಲಯ ಭೂಬಳಕೆಯ ಬದಲಾವಣೆ ಕುರಿತು ಆತುರಾತುರವಾಗಿ ಅಧಿಸೂಚನೆ ಹೊರಡಿಸಿತು. ಈಗ ಲಾಕ್‌ಡೌನನ್ನು ಮತ್ತೊಮ್ಮೆ ವಿಸ್ತರಿಸಲು ನಿರ್ಧರಿಸಿರುವ ಒಂದು ವಾರದ ಮೊದಲು, ಈ ಪರಿಯೋಜನೆಗಾಗಿ ರಚಿಸಿದ ಸಮಿತಿ ಮತ್ತೊಮ್ಮೆ ಅದೇ ತರಾತುರಿಯಿಂದ ಅನುಮೋದನೆ ಕೊಟ್ಟಿದೆ ಎಂದು ಒಂದು ವಾರದ ನಂತರ ಬೆಳಕಿಗೆ ಬಂದಿದೆ. ತರಾತುರಿ ಎನ್ನಲು ಕಾರಣ, ಈ ಸಮಿತಿಯ ಸಭೆ ಎಪ್ರಿಲ್ 23ರಂದು ನಡೆಯಿತು. ಅದರೆ ಇದರಲ್ಲಿ ಭಾರತೀಯ ವಾಸ್ತುಶಿಲ್ಪಿಗಳ ಸಂಸ್ಥೆ (ಐಐಎ) ಮತ್ತು ನಗರ ಯೋಜನಾಕಾರರ ಸಂಸ್ಥೆ((ಐಟಿಪಿ)ಯನ್ನು ಪ್ರತಿನಿಧಿಸುವ ಸರ್ಕಾರೇತರ ಸದಸ್ಯರಾರೂ, ಅಂದರೆ ಪರಿಣಿತರಾರೂ ಭಾಗವಹಿಸಿರಲಿಲ್ಲ. ಈ ಸಭೆಯನ್ನು ವೀಡಿಯೋ ಕಾನ್ಫರೆನ್ಸ್ ಮೂಲಕ ನಡೆಸಲಾಯಿತು. ಈ ಸರ್ಕಾರೇತರ ಸದಸ್ಯರು ಲಾಕ್‌ಡೌನಿನ ನಿರ್ಬಂಧಗಳು ಮತ್ತು ತಾಂತ್ರಿಕ ತೊಂದರೆಗಳಿಂದಾಗಿ ಇದರಲ್ಲಿ ಭಾಗವಹಿಸಲು ಸಾಧ್ಯವಿಲ, ಅದನ್ನು ಮುಂದೂಡಬೇಕು ಎಂದು ಕೇಳಿದ್ದರೂ ಈ ಸಭೆ ನಡೆದಿದೆ. “ರಾಷ್ಟ್ರೀಯ ಹಿತಾಸಕ್ತಿಯಿಂದ ಈ ಪರಿಯೋಜನೆಯ ಮಹತ್ವದಿಂದಾಗಿ ಈ ಸಭೆ ನಡೆಸಲೇ ಬೇಕಾಗಿ ಬಂತು ಎಂದು ಹೇಳಲಾಗಿದೆಯಂತೆ. ಏನಿದು ರಾಷ್ಟ್ರೀಯ ಹಿತಾಸಕ್ತಿ, ದೇಶ ಕೊವಿಡ್ ಮಹಾಮಾರಿಯ ವಿರುದ್ಧ ಸೆಣಸುತ್ತಿರುವಾಗ, ಲಕ್ಷಾಂತರ ಕಾರ್ಮಿಕರು ಅನ್ನ, ನೀರು, ಸೂರಿಲ್ಲದೆ ಬೀದಿಪಾಲಾಗಿರುವಾಗ ಇಂತಹ ಆಗಲೇ ವಿವಾದಾಸ್ಪದವಾಗಿರುವ ಯೋಜನೆಯನ್ನು ಪರಿಣಿತರ ಗೈರುಹಾಜರಿಯಲ್ಲೇ ಅನುಮೋದಿಸುವ ತುರ್ತಾದರೂ ಏನು ಎಂಬ ಪ್ರಶ್ನೆ ಎದ್ದಿದೆ.



ವ್ಯಂಗ್ಯಚಿತ್ರ: ಜಾಸೂಸ್ ಕುಟ್ಟಿ
https://twitter.com/JasoosKutty

ಗುಳೆ ಹೋಗುತ್ತಿರುವ ಹಣಕಾಸು ಬಂಡವಾಳ



ಭಾರತದಂತಹ ಮೂರನೇ ಜಗತ್ತಿನ ದೇಶಗಳಿಂದ ಹಣಕಾಸು ಬಂಡವಾಳ ಗುಳೆ ಹೋಗುತ್ತಿರುವುದು ಈಗ ಕರೋನಾ ವೈರಸ್ ಸೋಂಕಿನಿಂದ ಜರ್ಝರಿತವಾಗಿರುವ ಅಮೇರಿಕಾ ದೇಶಕ್ಕೇ ಎಂಬುದೊಂದು ವಿಪರ್ಯಾಸ. ಈ ವಿಪರ್ಯಾಸವು ಜಾಗತಿಕ ಅರ್ಥವ್ಯವಸ್ಥೆಯ ಆಳದಲ್ಲಿರುವ ವಾಸ್ತವವನ್ನು ತೋರಿಸುತ್ತದೆ. ಕೊರೊನ ಬಿಕ್ಕಟ್ಟಿನಿಂದ ಹೊರ ಬರಲು ಹೊಸ ಎಸ್‌ಡಿಆರ್‌ಗಳನ್ನು ನೀಡುವಂತೆ ಮತ್ತು ಈ ಬಗ್ಗೆ ದೇಶ ದೇಶಗಳ ನಡುವೆ ಅಮೇರಿಕಾ ಬಯಸುವ ತಾರತಮ್ಯವನ್ನು ವಿರೋಧಿಸುವ ಹೋರಾಟವನ್ನು ತೀವ್ರಗೊಳಿಸಬೇಕಾಗುತ್ತದೆ. ಜತೆಗೆ ವಿದೇಶಿ ಸಾಲಗಳ ಮರು ಪಾವತಿಯ ಮುಂದೂಡುವಿಕೆ ಮತ್ತು ವಿದೇಶಿ ಬಂಡವಾಳ ಹೊರ ಹೋಗದಂತೆ ಅದರ ಮೇಲೆ ಮೂರನೆಯ ಜಗತ್ತಿನ ದೇಶಗಳು ನಿಯಂತ್ರಣ ಹೇರಬೇಕಾಗುತ್ತದೆ. ಐಎಂಎಫ್‌ನ ಹಣಕಾಸು ಸಮಿತಿಯ ಸಭೆಯಲ್ಲಿ ಅಮೇರಿಕಾಕ್ಕೆ ತನ್ನ ಸ್ವಾಮಿ-ನಿಷ್ಠೆಯನ್ನು ತೋರಿಸಲಿಕ್ಕಾಗಿ ಮೂರನೆಯ ಜಗತ್ತಿನ ದೇಶಗಳ ಜನತೆಯ ಮತ್ತು ಭಾರತದ ಜನತೆಯ ಹಿತಾಸಕ್ತಿಗಳನ್ನು ಬಲಿ ಕೊಟ್ಟಿರುವ ಹುಸಿ ರಾಷ್ಟ್ರೀಯವಾದಿ ಮೋದಿ ಸರಕಾರದಿಂದ ಇದನ್ನು ನಿರೀಕ್ಷಿಸಬಹುದೇ?

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

ಇಂದಿನ ದಿನಗಳಲ್ಲಿ ಮೂರನೆಯ ಜಗತ್ತಿನ ದೇಶಗಳಿಂದ ಹಣಕಾಸು ಬಂಡವಾಳವು ಗುಳೆ ಹೋಗುತ್ತಿದೆ. 2008ರ ಜಾಗತಿಕ ಹಣಕಾಸು ಬಿಕ್ಕಟ್ಟಿನ ನಂತರ ಹೊರ ಹರಿದ ಪ್ರಮಾಣಕ್ಕಿಂತಲೂ ದೊಡ್ಡ ಪ್ರಮಾಣದ ಹಣ ಈಗ ಹೊರ ಹರಿಯುತ್ತಿದೆ. ಬಂಡವಾಳದ ಈ ಹೊರ ಹರಿವಿಗಿಂತಲೂ ಬಹಳ ಮುಖ್ಯವಾದ ಅಂಶವೆಂದರೆ, ಮೂರನೆಯ ಜಗತ್ತಿನಿಂದ ಕಾಲು ಕಿತ್ತು ಅಮೇರಿಕಾ ಅಥವಾ ಡಾಲರ್ ಕರೆನ್ಸಿಯ ಆಸ್ತಿಗಳತ್ತ ಚಲಿಸಬೇಕೆಂಬ ಅದರ ಬಯಕೆ. ಈ ವಿದ್ಯಮಾನದಿಂದಾಗಿ ಮೂರನೆಯ ಜಗತ್ತಿನ ದೇಶಗಳ ಕರೆನ್ಸಿಗಳು ಡಾಲರ್ ಎದುರು ಅಪಮೌಲ್ಯಗೊಂಡಿವೆ. ಭಾರತದ ರೂಪಾಯಿ ಇದಕ್ಕೊಂದು ಎದ್ದುಕಾಣುವ ಉದಾಹರಣೆ.

ಇದು ವಿಪರ್ಯಾಸಕರವಾಗಿದೆ. ಏಕೆಂದರೆ, ಹಣಕಾಸು ಬಂಡವಾಳ ಗುಳೆ ಹೋಗುತ್ತಿರುವುದು ಈಗ ಕರೋನಾ ವೈರಸ್ ಸೋಂಕಿನಿಂದ ಜರ್ಝರಿತವಾಗಿರುವ ಅಮೇರಿಕಾ ದೇಶಕ್ಕೆ. ಆದರೆ, ಇದೇ ರೀತಿಯ ಆಶ್ಚರ್ಯಕರ ವಿದ್ಯಮಾನವು 2008ರ ಜಾಗತಿಕ ಹಣಕಾಸು ಬಿಕ್ಕಟ್ಟಿನ ನಂತರವೂ ಘಟಿಸಿತ್ತು. ಆವಾಗಲೂ ಬಿಕ್ಕಟ್ಟಿನ ಕೇಂದ್ರ ಸ್ಥಾನ ಅಮೇರಿಕಾವೇ ಆಗಿತ್ತು. ಆಗ ಅಮೇರಿಕಾದ ಆರ್ಥಿಕ ಬಿಕ್ಕಟ್ಟಿನ ಮೂಲವಾಗಿದ್ದ ವಸತಿ ಸಾಲ ಗುಳ್ಳೆಯಿಂದ ಈ ದೇಶಗಳಿಗೆ ಯಾವ ತೊಂದರೆಯೂ ಆಗಿರಲಿಲ್ಲ. ಆದರೂ, ಈ ದೇಶಗಳಿಂದ ಹಣ ಹೊರ ಹರಿಯಿತು. ಈ ದೇಶಗಳ ಕರೆನ್ಸಿಗಳು ಅಪಮೌಲ್ಯಗೊಂಡವು ಮತ್ತು ಡಾಲರ್ ಮೌಲ್ಯ ವೃದ್ಧಿಸಿತು.

ಈ ವಿಪರ್ಯಾಸವು ಜಾಗತಿಕ ಅರ್ಥವ್ಯವಸ್ಥೆಯ ಆಳದಲ್ಲಿರುವ ವಾಸ್ತವವನ್ನು ತೋರಿಸುತ್ತದೆ. ಅದೇನೆಂದರೆ, ಹಣಕಾಸು ಯಾವಾಗ ಭಯಗ್ರಸ್ತವಾಗುತ್ತದೊ, ಆಗ, ಅದರ ಗೂಡಿಗೆ ಮರಳುವ ಪ್ರವೃತ್ತಿಯು ಅದನ್ನು ಮೂರನೆಯ ಜಗತ್ತಿನ ದೇಶಗಳಿಂದ ಜಾಗ ಖಾಲಿ ಮಾಡಿಸಿ ನಿರ್ದಿಷ್ಟವಾಗಿ ಅಮೇರಿಕಾದತ್ತಲೇ ಎಳೆದೊಯ್ಯುತ್ತದೆ. ಹಣಕಾಸಿನ ದೃಷ್ಟಿಯಿಂದ ಹೇಳುವುದಾದರೆ, ಜಾಗತಿಕ ಅರ್ಥವ್ಯವಸ್ಥೆಯಲ್ಲಿ ಒಂದು ಮೂಲಭೂತ ಏರುಪೇರು ಇದೆ. ಹಾಗಾಗಿ, ಜಾಗತಿಕ ಹಣಕಾಸು ಹರಿವಿನ ಸುಳಿಗೆ ಮೂರನೆಯ ಜಗತ್ತಿನ ದೇಶಗಳು ತಮ್ಮನ್ನು ತಾವೇ ತೆರೆದುಕೊಂಡಿರುವುದು ಭಾರೀ ಅವಿವೇಕತನವೇ ಸರಿ.

ಮೂರನೆಯ ಜಗತ್ತಿನ ದೇಶಗಳಲ್ಲಿಯೇ ಹೂಡಿಕೆಯನ್ನು ಮುಂದುವರೆಸಲು ಬಯಸದ ಅಥವಾ ಅಲ್ಲಿಗೆ ಬಂದು ನೆಲಸಲು ಬಯಸದ ಹಣಕಾಸು ಬಂಡವಾಳವು, ಈ ದೇಶಗಳು ತಮ್ಮ ಆಮದು ಮತ್ತು ಹೊರಗಿನ ಸಾಲ ಮರುಪಾವತಿ ಉದ್ದೇಶಗಳಿಗೆ ವಿದೇಶಿ ವಿನಿಮಯವನ್ನು ಹೊಂದಿಸಿಕೊಳ್ಳುವ ಸಾಮರ್ಥ್ಯವನ್ನೇ ಉಡುಗಿಸುತ್ತದೆ. ಇಂತಹ ಒಂದು ಸಂಕಷ್ಟದಿಂದ ಪಾರಾಗಲು ಇತ್ತೀಚಿನ ಎಣಿಕೆಯಲ್ಲಿ 102 ದೇಶಗಳು ಸಹಾಯ ಯಾಚಿಸಿ ಐಎಂಎಫ್‌ನ ಮೊರೆಹೊಕ್ಕಿವೆ. ಕೋರಿಕೆ ಸಲ್ಲಿಸಿರುವ ಎಲ್ಲರನ್ನೂ ಒಂದೇ ರೀತಿಯಲ್ಲಿ ಐಎಂಎಫ್ ಕಾಣುವಂತಿಲ್ಲ ಎಂದು ಐಎಂಎಫ್‌ನ ವ್ಯವಹಾರಗಳಲ್ಲಿ ಹಿಡಿತ ಹೊಂದಿರುವ ಅಮೇರಿಕಾ ಒತ್ತಾಯ ಹೇರಿದೆ. ಹಾಗಾಗಿ, ಅಮೇರಿಕಾಗೆ ಸೊಪ್ಪು ಹಾಕದ ವೆನಿಜುವೇಲಾದ ಮದುರೊ ಸರ್ಕಾರಕ್ಕೆ ಕೊರೊನ ಸಂದರ್ಭದಲ್ಲಿಯೂ ಸಾಲ ಕೊಡಲು ಐಎಂಎಫ್ ನಿರಾಕರಿಸಿತು.

ಸದಸ್ಯ ದೇಶಗಳಿಗೆ ಐಎಂಎಫ್ ಒದಗಿಸುವ ಸಾಲ ಸೌಕರ್ಯದ ಹೊರತಾಗಿ, ಅಮೇರಿಕಾ ತನ್ನದೇ ಆದ, ಒಬ್ಬರಿಗೆ ಒಂದು ಮತ್ತೊಬ್ಬರಿಗೆ ಇನ್ನೊಂದು ಎನ್ನುವ ರೀತಿಯ, ವಿದೇಶಿ ವಿನಿಮಯ ಅದಲು ಬದಲು ಮಾಡಿಕೊಳ್ಳುವ ಏರ್ಪಾಟು ಕಲ್ಪಿಸಿ ಕೊಂಡಿದೆ. ಅದರ ಪ್ರಕಾರ, ಅಮೇರಿಕಾದ ಫೆಡರಲ್ ರಿಸರ್ವ್ (ಫೆಡ್), ಬೇಕಾದ ಕೆಲವು ದೇಶಗಳಿಗೆ ಅವುಗಳ ಕರೆನ್ಸಿಗೆ ಬದಲಾಗಿ ಡಾಲರ್‌ಗಳನ್ನು ಒದಗಿಸುತ್ತದೆ. ಅದನ್ನು ಈ ದೇಶಗಳು ತರುವಾಯ ಬಡ್ಡಿ ಸಮೇತ ಡಾಲರ್‌ನಲ್ಲಿ ಹಿಂತಿರುಗಿಸುತ್ತವೆ. 2008ರ ಬಿಕ್ಕಟ್ಟಿನ ಸಂದರ್ಭದಲ್ಲಿ ನಿರ್ಮಿಸಿಕೊಂಡಿದ್ದ ಈ ಏರ್ಪಾಟನ್ನು ಅಮೇರಿಕಾ ಈಗ ಮತ್ತೊಮ್ಮೆ ಬಳಕೆಗೆ ತಂದಿದೆ. ಯೂರೋಪಿಯನ್ ಯೂನಿಯನ್ ಕೇಂದ್ರ ಬ್ಯಾಂಕ್, ಬ್ರಿಟನ್, ಜಪಾನ್, ಕೆನಡಾ ಮತ್ತು ಸ್ವಿಜರ್‌ಲ್ಯಾಂಡ್ ದೇಶಗಳ ಕೇಂದ್ರ ಬ್ಯಾಂಕುಗಳಿಗೆ ಎಷ್ಟು ಬೇಕೊ ಅಷ್ಟು ಡಾಲರ್‌ಗಳನ್ನು ಫೆಡ್ ಒದಗಿಸುತ್ತದೆ. ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್, ಸಿಂಗಾಪುರ, ಬ್ರೆಜಿಲ್, ಮೆಕ್ಸಿಕೊ, ದಕ್ಷಿಣ ಕೊರಿಯಾ, ಸ್ವೀಡನ್, ಡೆನ್ಮಾರ್ಕ್ ಮತ್ತು ನಾರ್ವೆ ದೇಶಗಳಿಗೆ ಬೇಕಾಗುವ ಡಾಲರ್‌ಗಳನ್ನು ಒಂದು ಮಿತಿಗೆ ಒಳಪಟ್ಟು ಒದಗಿಸುವ ಏರ್ಪಾಟನ್ನೂ ಅಮೇರಿಕಾ ಕಲ್ಪಿಸಿದೆ. ಭೇದ ಭಾವದ ಈ ಏರ್ಪಾಟು ಉಳಿದ ದೇಶಗಳ ಅಸಮಾಧಾನಕ್ಕೆ ಕಾರಣವಾಗುತ್ತದೆ.

ಈ ಪರಿಸ್ಥಿತಿಗೆ ವಿರುದ್ಧವಾಗಿ, ಐಎಂಎಫ್ ಎಸ್‌ಡಿಆರ್(ಸ್ಪೆಷಲ್ ಡ್ರಾಯಿಂಗ್ ರೈಟ್ಸ್ ಅಂದರೆ ಪಡೆಯುವ ವಿಶೇಷ ಹಕ್ಕುಗಳು–ಅನು)ಗಳನ್ನು ನೀಡಿಕೆ ಮಾಡಿ ಅವುಗಳನ್ನು ಸದಸ್ಯ ದೇಶಗಳು ಐಎಂಎಫ್‌ನಲ್ಲಿ ಹೊಂದಿರುವ ಮತದಾನದ ಹಕ್ಕಿನ ಬಲಕ್ಕೆ ಅನುಗುಣವಾಗಿ ಅವುಗಳಿಗೆ ಹಂಚಬೇಕೆಂಬ ಬೇಡಿಕೆ ಬಂದಿದೆ. ಈ ಎಸ್‌ಡಿಆರ್‌ಗಳು ಸದಸ್ಯ ದೇಶಗಳ ವಿದೇಶಿ ವಿನಿಮಯದ ಮೀಸಲಿಗೆ ಪುಷ್ಟಿ ಕೊಡುತ್ತವೆ ಮತ್ತು ದೇಶ ದೇಶಗಳ ನಡುವೆ ಬೇದ ಭಾವ ಮಾಡುವುದಿಲ್ಲ. ಆದರೆ, ಹೊಸ ಎಸ್‌ಡಿಆರ್‌ಗಳ ನೀಡಿಕೆ ಮಾಡಿದಾಗ ಅದರ 70% ಪ್ರಯೋಜನ ಮುಂದುವರೆದ ದೇಶಗಳಿಗೆ ದಕ್ಕುತ್ತದೆ, ಕಡು ಬಡವ ದೇಶಗಳಿಗೆ ಕೇವಲ 3% ಪ್ರಯೋಜನ ಲಭಿಸುತ್ತದೆ ಎಂಬ ನೆಲೆಯಲ್ಲಿ ಅಮೇರಿಕಾ ಈ ಪ್ರಯತ್ನವನ್ನು ವಿರೋಧಿಸಿದೆ. ಅದರ ಬದಲಾಗಿ, ಹಿಂದೆ ತೈಲ ಆಘಾತದ ಸಂದರ್ಭದಲ್ಲಿ ಮಾಡಿದ್ದ ವಿಶೇಷ ಏರ್ಪಾಟಿನ ರೀತಿಯಲ್ಲಿ ಒಂದು ಹೊಸ ವ್ಯವಸ್ಥೆ ಕಲ್ಪಿಸುವ ಮೂಲಕ ಬಡ ದೇಶಗಳಿಗೆ ಸಹಾಯ ಮಾಡಬಹುದು ಎಂಬುದು ಅಮೇರಿಕಾದ ವರಸೆ.


ಇಂತಹ ಒಂದು ವಿಶೇಷ ವ್ಯವಸ್ಥೆ ಮತ್ತು ಹೊಸ ಎಸ್‌ಡಿಆರ್‌ಗಳ ನೀಡಿಕೆಯ ನಡುವೆ ಮೂರು ಮುಖ್ಯವಾದ ಮತ್ತು ನಿರ್ಣಾಯಕ ವ್ಯತ್ಯಾಸಗಳಿವೆ. ಮೊದಲನೆಯದು, ವಿಶೇಷ ವ್ಯವಸ್ಥೆಯಡಿ ಕೊಡುವ ಸಾಲಗಳು ಅಗತ್ಯವಾಗಿ ತಾರತಮ್ಯತೆಯಿಂದ ಕೂಡಿರುತ್ತವೆ; ಎಸ್‌ಡಿಆರ್‌ಗಳ ನೀಡಿಕೆಯಲ್ಲಿ ಆ ತಾರತಮ್ಯತೆಯ ಪ್ರಶ್ನೆಯೇ ಇಲ್ಲ. ಎರಡನೆಯದು, ವಿಶೇಷ ವ್ಯವಸ್ಥೆಯಡಿ ಕೊಡುವ ಯಾವುದೇ ಸಾಲವನ್ನು ಬಡ್ಡಿ ಸಮೇತ ತೀರಿಸಬೇಕಾಗುತ್ತದೆ; ಎಸ್‌ಡಿಆರ್‌ಗಳನ್ನು ಮರು ಪಾವತಿಸುವ ಅವಶ್ಯಕತೆಯೇ ಇಲ್ಲ. ಮೂರನೆಯದು, ಮರು ಪಾವತಿ ಮಾಡಲೇಬೇಕಾದ ನಿಖರ ಕಾರಣದಿಂದಾಗಿಯೇ ವಿಶೇಷ ವ್ಯವಸ್ಥೆಯಡಿ ಕೊಡುವ ಯಾವುದೇ ಸಾಲದೊಂದಿಗೆ ಅಸಹ್ಯಕರ "ಶರತ್ತು"ಗಳನ್ನು ವಿಧಿಸಲಾಗುತ್ತದೆ; ಎಸ್‌ಡಿಆರ್‌ಗಳ ನೀಡಿಕೆಯಲ್ಲಿ "ಶರತ್ತು"ಗಳು ಇರುವುದೇ ಇಲ್ಲ.


ಈ ಕಾರಣಗಳಿಂದಾಗಿಯೇ ಹೊಸ ಎಸ್‌ಡಿಆರ್‌ಗಳನ್ನು ನೀಡಲು ಐಎಂಎಫ್‌ನ ಹಣಕಾಸು ಸಮಿತಿಯ ಸಭೆಯಲ್ಲಿ ಭಾರಿ ಬೆಂಬಲ ವ್ಯಕ್ತವಾಗಿತ್ತು. ಅದನ್ನು ಅಮೇರಿಕಾ ವಿರೋಧಿಸಿದ್ದದು ನಿರೀಕ್ಷಿತವೇ. ಅದರ ಜೊತೆಯಲ್ಲಿ ಭಾರತವೂ ಹೊಸ ಎಸ್‌ಡಿಆರ್‌ಗಳ ನೀಡಿಕೆಯನ್ನು ವಿರೋಧಿಸಿತ್ತು. ತಾನು ಪ್ರಖರ ರಾಷ್ಟ್ರೀಯವಾದಿ ಎಂದು ಮಾಳಿಗೆಯ ಮೇಲೆ ನಿಂತು ಶಂಖ ಊದುವ ಮತ್ತು ಬಡವರ ಹೀನಾಯ ಪರಿಸ್ಥಿತಿಗಳ ಬಗ್ಗೆ ಮಾತಾಡುವ ನಾಗರಿಕ ಹಕ್ಕುಗಳ ಕಾರ್ಯಕರ್ತರನ್ನು "ರಾಷ್ಟ್ರ-ವಿರೋಧಿ"ಗಳೆಂದು ಜೈಲಿಗಟ್ಟುವಲ್ಲಿ ನಿರತವಾಗಿರುವ ಭಾರತದ ಹಿಂದುತ್ವವಾದಿ ಸರ್ಕಾರವು ಅಮೇರಿಕಾದ ಕಾಲಿಗೆ ಬೀಳಲು ಸಿಗುವ ಯಾವುದೇ ಅವಕಾಶವನ್ನೂ ತಪ್ಪಿಸಿಕೊಳ್ಳುವುದಿಲ್ಲ. ಅವಕಾಶ ಸಿಕ್ಕಿದ್ದೇ ತಡ, ಐಎಂಎಫ್‌ನ ಹಣಕಾಸು ಸಮಿತಿಯ ಸಭೆಯಲ್ಲಿ ತನ್ನ ಸ್ವಾಮಿ-ನಿಷ್ಠೆಯನ್ನು ತೋರಿಸುವ ಮೂಲಕ ಮೂರನೆಯ ಜಗತ್ತಿನ ದೇಶಗಳ ಜನತೆಯ ಮತ್ತು ಭಾರತದ ಜನತೆಯ ಹಿತಾಸಕ್ತಿಗಳನ್ನು ಬಲಿ ಕೊಟ್ಟಿತು.

ಕೊರೊನ ಬಿಕ್ಕಟ್ಟಿನಿಂದ ಹೊರ ಬರಲು ಹೊಸ ಎಸ್‌ಡಿಆರ್‌ಗಳನ್ನು ನೀಡುವಂತೆ ಮತ್ತು ಈ ಬಗ್ಗೆ ದೇಶ ದೇಶಗಳ ನಡುವೆ ಅಮೇರಿಕಾ ಬಯಸುವ ತಾರತಮ್ಯವನ್ನು ವಿರೋಧಿಸುವ ಹೋರಾಟವನ್ನು ತೀವ್ರಗೊಳಿಸಬೇಕಾಗುತ್ತದೆ. ಅದೇ ಸಮಯದಲ್ಲಿ, ಹೊಸ ಎಸ್‌ಡಿಆರ್‌ಗಳು ದೊರೆತರೆ, ಮೂರನೆಯ ಜಗತ್ತಿನ ದೇಶಗಳು ಈಗ ಒಳಗಾಗಿರುವ ಬಿಕ್ಕಟ್ಟಿನಿಂದ ಪಾರಾಗುತ್ತವೆ ಎಂಬ ಭ್ರಮೆಗೂ ಬೀಳುವಂತಿಲ್ಲ. ಈ ದೇಶಗಳ ವಿದೇಶಿ ವಿನಿಮಯದ ಮೀಸಲು ಸಂಗ್ರಹಕ್ಕೆ ಹೊಸ ಎಸ್‌ಡಿಆರ್‌ಗಳ ಮೂಲಕ ಸಂಚಯವಾಗುತ್ತದೆ ಎಂದೇನೂ ಈ ದೇಶಗಳಿಂದ ಈಗ ಹೊರ ಹೋಗುತ್ತಿರುವ ವಿದೇಶಿ ಬಂಡವಾಳವನ್ನು ಹಿಡಿದು ನಿಲ್ಲಸಲಾಗದು. ಭಾರತದ ಬಳಿ ಸುಮಾರು ಐದು ನೂರು ಬಿಲಿಯನ್ ಡಾಲರ್‌ಗಳಷ್ಟು ವಿದೇಶಿ ವಿನಿಮಯದ ಮೀಸಲು ಸಂಗ್ರಹವಿದೆ. ಆದರೆ, ಅಷ್ಟು ದೊಡ್ಡ ಮೀಸಲು ಸಂಗ್ರಹದ ಬಲವಿದ್ದರೂ ದೇಶದಿಂದ ಹೊರ ಹೋಗುತ್ತಿರುವ ಬಂಡವಾಳದ ಹರಿವನ್ನು ನಿಲ್ಲಿಸಲು ಸಾಧ್ಯವಾಗಿಲ್ಲ ಮತ್ತು ಡಾಲರ್ ವಿರುದ್ಧ ದಿನೇ ದಿನೇ ಕುಸಿಯುತ್ತಿರುವ ರೂಪಾಯಿಯ ಮೌಲ್ಯವನ್ನು ರಕ್ಷಿಸಲು ಸಾಧ್ಯವಾಗಿಲ್ಲ.

ಇಂತಹ ಪರಿಸ್ಥಿತಿಯಲ್ಲಿ, ಹೊಸ ಎಸ್‌ಡಿಆರ್‌ಗಳು, ಗುಳೆ ಹೋಗುತ್ತಿರುವ ವಿದೇಶಿ ಬಂಡವಾಳಕ್ಕೆ ಬೇಕಾಗುವ ವಿದೇಶಿ ವಿನಿಮಯ ಹೊಂದಿಸಬಹುದಲ್ಲದೆ ಮೂರನೆಯ ಜಗತ್ತಿನ ದೇಶಗಳು ಕೊರೋನಾ ಬಿಕ್ಕಟ್ಟನ್ನು ಎದುರಿಸಲು ನೆರವಾಗುವುದಿಲ್ಲ. ಆದರೂ, ಬರಿಗೈಯಲ್ಲಿರುವುದಕ್ಕಿಂತ ಒಂದಿಷ್ಟು ಹೊಸ ಎಸ್‌ಡಿಆರ್‌ಗಳನ್ನು ಹೊಂದುವುದು ಎಷ್ಟೋ ಉತ್ತಮ. ಹೊಸ ಎಸ್‌ಡಿಆರ್‌ಗಳು, ಕೊನೆಯ ಪಕ್ಷ, ಕೊರೋನಾ ವೈರಸ್ ಎದುರು ಜನತೆ ಜೀವ ಉಳಿಸಿಕೊಳ್ಳಲು ಹೋರಾಡುತ್ತಿರುವಾಗ, ಅವರ ನೆರವಿಗೆ ಏನೂ ಉಳಿಯದಂತೆ ಈ ದೇಶಗಳ ಅರ್ಥವ್ಯವಸ್ಥೆಗಳು ಕುಸಿದು ಬೀಳುವುದನ್ನು ಮುಂದೂಡುತ್ತವೆ.

ಕೊರೋನಾ ಬಿಕ್ಕಟ್ಟನ್ನು ಎದುರಿಸಲು ಅಧಿಕವಾಗಿ ಎರಡು ಕ್ರಮಗಳನ್ನು ಕೈಗೊಳ್ಳುವುದು ಅಗತ್ಯವಾಗುತ್ತದೆ. ಮೊದಲನೆಯದು, ವಿದೇಶಿ ಸಾಲಗಳ ಮರು ಪಾವತಿಯನ್ನು ಕನಿಷ್ಠ ಒಂದು ವರ್ಷದ ಅವಧಿಗೆ ಅಧಿಕೃತವಾಗಿ ಮುಂದೂಡಬೇಕಾಗುತ್ತದೆ. ಎರಡನೆಯದು, ವಿದೇಶಿ ಬಂಡವಾಳ ಹೊರ ಹೋಗದಂತೆ ಅದರ ಮೇಲೆ ಮೂರನೆಯ ಜಗತ್ತಿನ ದೇಶಗಳು ನಿಯಂತ್ರಣ ಹೇರಬೇಕಾಗುತ್ತದೆ. ಈ ಎರಡೂ ಅಧಿಕ ಕ್ರಮಗಳನ್ನು ಕೈಗೊಂಡಾಗ ಮಾತ್ರ ಹೊಸ ಎಸ್‌ಡಿಆರ್‌ಗಳನ್ನು ಅತ್ಯವಶ್ಯವಾದ ಔಷಧಿ ಮತ್ತು ಇತರ ಅವಶ್ಯ ಆಮದುಗಳಿಗೆ ಬಳಸಿಕೊಳ್ಳಬಹುದು. ಅಂತಹ ಒಂದು ಸಂದರ್ಭದಲ್ಲಿ ಮಾತ್ರ ಎಸ್‌ಡಿಆರ್‌ಗಳಿಂದ ಪ್ರಯೋಜನವಾಗುತ್ತದೆ. ಹೇಗೆಂದರೆ, ಹೊಸ ಎಸ್‌ಡಿಆರ್‌ಗಳ ಮೊತ್ತದ ಅನೇಕ ಪಟ್ಟು ಮೌಲ್ಯದ ವಿದೇಶಿ ವಿನಿಮಯವನ್ನು (ಹಣವನ್ನು) ಸರ್ಕಾರವು ಕೊರೋನಾ ವೈರಸ್ ದಾಳಿಯಿಂದ ಜನತೆಯ ಜೀವ ಉಳಿಸಲು ಮತ್ತು ಹೇಳತೀರದ ಕಷ್ಟದಲ್ಲಿರುವ ಜನರಿಗೆ ನೆರವು ಒದಗಿಸಲು ಬಳಸಿಕೊಳ್ಳಲು ಸಾಧ್ಯವಾಗುತ್ತದೆ. ಈ ಅಂಶವನ್ನು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಎಸ್‌ಡಿಆರ್‌ಗಳು, ಸರ್ಕಾರವು ಖರ್ಚು ಮಾಡುವ ಸಾಮರ್ಥ್ಯವನ್ನು ಅವುಗಳ ಮುಖ ಬೆಲೆಗೆ ಸಮನಾದಷ್ಟೇ ಮೊತ್ತದಷ್ಟೇ ಹೆಚ್ಚಿಸುವುದಿಲ್ಲ; ಬದಲಿಗೆ, ಅವುಗಳ ಮೊತ್ತದ ಅನೇಕ ಪಟ್ಟು ಮೌಲ್ಯವನ್ನು ವಿತ್ತೀಯ ಕೊರತೆಯ ಮೂಲಕ ಸರ್ಕಾರದ ಖರ್ಚಿನ ಸಾಮರ್ಥ್ಯವನ್ನು ಹೆಚ್ಚಿಸುವ ಸಾಧ್ಯತೆ ಹೊಂದಿವೆ.





ಈ ಅಂಶವನ್ನು ಒಂದು ಉದಾಹರಣೆಯ ಮೂಲಕ ಸ್ಪಷ್ಟಪಡಿಸಬಹುದು. ಯಾವುದೇ ಒಂದು ಅರ್ಥವ್ಯವಸ್ಥೆಯಲ್ಲಿ, ಸರ್ಕಾರಿ ವಲಯ, ಖಾಸಗಿ ವಲಯ ಮತ್ತು ಉಳಿದ ವಿಶ್ವದೊಂದಿಗಿನ ವಲಯ ಈ ಮೂರೂ ವಲಯಗಳ ಒಟ್ಟು ಕೊರತೆಯ ಮೊತ್ತವನ್ನು ಕೂಡಿದರೆ ಅದು ಯಾವಾಗಲೂ ಸೊನ್ನೆಯೇ ಆಗಬೇಕು. ಒಂದು ದೇಶದಲ್ಲಿ ಇಂತಹದೇ ಒಂದು ಪರಿಸ್ಥಿತಿ ಇದೆ ಎಂದು ಭಾವಿಸೋಣ. ಈ ದೇಶಕ್ಕೆ ಈಗ 300 ಎಸ್‌ಡಿಆರ್‌ಗಳನ್ನು ದೊರಕಿಸಲಾಗಿದೆ. ಅದೆಲ್ಲವೂ ಅಧಿಕ ಆಮದುಗಳಿಗೆ ದೊರಕಿದರೆ, (ಈ ದೇಶದ

ಪುಟ 14 ಕ್ಕೆ

ಗುಳೆ ಹೋಗುತ್ತಿರುವ ಹಣಕಾಸು ಬಂಡವಾಳ

ಪುಟ 13 ರಿಂದ

ರಫ್ತುಗಳು ಮತ್ತು ಖಾಸಗಿ ವಲಯದ ಹೂಡಿಕೆ ಯಥಾಸ್ಥಿತಿಯಲ್ಲಿವೆ ಎಂದುಕೊಳ್ಳೋಣ) ಮತ್ತು ಆಮದುಗಳ ಹಾಗೂ ಉತ್ಪತ್ತಿಯಾದ ಅಧಿಕ ವರಮಾನಗಳ ನಡುವಿನ ಅನುಪಾತವು 15% ಇದ್ದರೆ ಮತ್ತು ಖಾಸಗಿ ಉಳಿತಾಯ ಹಾಗೂ ಉತ್ಪತ್ತಿಯಾದ ಅಧಿಕ ವರಮಾನಗಳ ನಡುವಿನ ಅನುಪಾತವು 25% ಇದ್ದರೆ, ಆಗ, ಸರ್ಕಾರವು ಈ 300 ಎಸ್‌ಡಿಆರ್‌ಗಳ ಆಧಾರದ ಮೇಲೆ 800 ಎಸ್‌ಡಿಆರ್‌ಗಳ ಮೌಲ್ಯಕ್ಕೆ ಸಮನಾಷ್ಟು ಮೊತ್ತದ ವಿತ್ತೀಯ ಕೊರತೆಯಲ್ಲಿರಬಹುದು. ಈ 800 ಎಸ್‌ಡಿಆರ್‌ಗಳಷ್ಟು ವಿತ್ತೀಯ ಕೊರತೆಯ ಮೂಲಕ ಸರ್ಕಾರವು 2000 ಎಸ್‌ಡಿಆರ್‌ಗಳಷ್ಟು ಅಧಿಕ ವರಮಾನ ಪಡೆದಿರುತ್ತದೆ. ಅದರಲ್ಲಿ, ಅಧಿಕ ಆಮದುಗಳು 300 ಎಸ್‌ಡಿಆರ್‌ಗಳಷ್ಟು ಇರುತ್ತವೆ ಮತ್ತು ದೇಶಕ್ಕೆ ದೊರಕಿದ 300 ಎಸ್‌ಡಿಆರ್‌ಗಳು ಈ ಆಮದುಗಳಿಗೆ ಸಾಕಾಗುತ್ತವೆ.

ಕ್ರಿಸ್ತಲೀನಾ ಜಾರ್ಜಿಯೇವಾ (ಐಎಂಎಫ್‌ನ ಎಂ.ಡಿ) ಅವರು ಮೂರನೆಯ ಜಗತ್ತಿನ ದೇಶಗಳಿಗೆ ಹೊಸ ಎಸ್‌ಡಿಆರ್‌ಗಳನ್ನು ನೀಡುವುದರ ಪರವಾಗಿದ್ದರು. ಅಮೇರಿಕಾ ಅದಕ್ಕೆ ಅಡ್ಡಗಾಲು ಹಾಕಿತು. ಆದರೆ, ವಿದೇಶಿ ಸಾಲಗಳ ಮರುಪಾವತಿಯ ಮುಂದೂಡುವಿಕೆ ಮತ್ತು ವಿದೇಶಿ ಬಂಡವಾಳ ಹೊರ ಹೋಗದಂತೆ ಅದರ ಮೇಲೆ ಮೂರನೆಯ ಜಗತ್ತಿನ ದೇಶಗಳು ನಿಯಂತ್ರಣ ಹೇರದ ಹೊರತು, ಹೊಸ ಎಸ್‌ಡಿಆರ್‌ಗಳಷ್ಟರಿಂದಲೇ ಪ್ರಯೋಜನ ವಾಗುವುದಿಲ್ಲ.

ಕಮ್ಯುನಿಸ್ಟರು ಮತ್ತು ರಿನ್ ಬಂಡಾಯ

ಪುಟ 11 ರಿಂದ

ಮತ್ತು ಅವರ ಬೇಡಿಕೆಗಳಿಗೂ ಬೊಂಬಾಯಿ ಎಲ್ಲಾ ನಾಗರಿಕರು ಹರತಾಳ ಮಾಡುವುದರ ಮೂಲಕ ಬೆಂಬಲ ವ್ಯಕ್ತಪಡಿಸಿದರು.

ಗಾಯಗೊಂಡವರು ಮತ್ತು ಹತರಾದವರ ಕುಟುಂಬದವರಿಗೆ ಪರಿಹಾರ ಒದಗಿಸಲು ಒಂದು ನಾಗರಿಕರ ಶಾಂತಿ ಮತ್ತು ಪರಿಹಾರ ಸಮಿತಿ ರಚಿಸಬೇಕೆಂದು ಪಕ್ಷ ಕರೆ ನೀಡಿತು. ಸಾವಿರಾರು ರಿನ್ ಮುಷ್ಕರನಿರತರ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳಬೇಕೆಂದು ಕಾಂಗ್ರೆಸ್ ಮುಖಂಡರನ್ನು ಪಕ್ಷ ಕೇಳಿಕೊಂಡಿತು. 'ಅದು ಆಜಾದ್ ಹಿಂದ್ ಫೌಜ್ ನಷ್ಟೇ ಮಹತ್ವದ್ದು' ಮತ್ತು 'ಯಾವುದೇ ತಾರತಮ್ಯವಿಲ್ಲದೇ ನ್ಯಾಯ ಒದಗಿಸುವ' ರೀತಿಯಲ್ಲಿ ಇತ್ಯರ್ಥವಾಗಬೇಕು ಎಂದೂ ಹೇಳಿತು. ಈ ವಿಷಯವನ್ನು ಸೆಂಟ್ರಲ್ ಅಸೆಂಬ್ಲಿಯಲ್ಲಿ ಎತ್ತಬೇಕು ಮತ್ತು ಸಿಬ್ಬಂದಿಗಳ ಬೇಡಿಕೆಗಳನ್ನು ಈಡೇರಿಸಲು ಮುಂದಾಗಬೇಕೆಂದು ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ಮುಖಂಡರುಗಳಿಗೆ ಮನವಿ ಮಾಡಿತು.

ಒಂದು ತನಿಖಾ ಆಯೋಗವನ್ನು ನೇಮಿಸಬೇಕು ಮತ್ತು ಮುಷ್ಕರನಿರತರ ಬೇಡಿಕೆಗಳನ್ನು ಈಡೇರಿಸಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಪಕ್ಷವು ಸರ್ಕಾರವನ್ನು ಒತ್ತಾಯಿಸಿತು. ಆ ಸಿಬ್ಬಂದಿಗಳು ಬಂಡಾಯ ಎದ್ದಿರದೇ ಇದ್ದರೆ, ತನಿಖಾ ಆಯೋಗವನ್ನು ಎಂದಿಗೂ ನೇಮಿಸುತ್ತಿರಲಿಲ್ಲ ಮತ್ತು ಅನ್ಯಾಯ, ತಾರತಮ್ಯ, ಕ್ರೌರ್ಯ ಮುಂತಾದ ಅವರ ಘೋರ ಕತೆಗಳು ಬೆಳಕನ್ನು ಕಾಣುತ್ತಿರಲಿಲ್ಲ. ಪಕ್ಷದ ಹೋರಾಟಗಳಿಂದಾಗಿ ರಿನ್ ಮತ್ತದರ ಸಿಬ್ಬಂದಿಗಳ ವಿನಾಶವನ್ನು ತಡೆಯಲಾಯಿತು ಮತ್ತು ಅಂತಿಮವಾಗಿ ಒಪ್ಪಂದಕ್ಕೆ ಕಾರಣವಾಯಿತು. ಆದರೆ ಯಾರಿಗೂ ಶಿಕ್ಷೆ ವಿಧಿಸುವುದಿಲ್ಲವೆಂಬ ಮಾತಿಗೆ ವಿರುದ್ಧವಾಗಿ, ಮುಷ್ಕರದ ಪ್ರಮುಖ ಮುಖಂಡರನ್ನು ಬಂಧಿಸಿ ಬಲಿಕೊಟ್ಟ ಸರ್ಕಾರದ ಕ್ರಮವನ್ನು ಪಕ್ಷ ಖಂಡಿಸಿತು.

ಬಂಡಾಯ ಏಕೆ ವಿಫಲವಾಯಿತು?

ಭಾರತೀಯ ರಾಷ್ಟ್ರೀಯ ರಂಗದಲ್ಲಿ ಕೆಲವು ದೌರ್ಬಲ್ಯಗಳಿದ್ದವು. ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗಿನ ಮೇಲ್ವರ್ಗದ ನಾಯಕತ್ವಕ್ಕೆ ಜನಗಳು ಬಂಡೇಳುವುದೆಂದರೆ ಭಯವಿತ್ತು. ಈ ಬಂಡಾಯ ಅಖಿಲ ಭಾರತ ಮಟ್ಟಕ್ಕೆ ಮತ್ತು ಸಶಸ್ತ್ರ ಪಡೆಗಳ ಎಲ್ಲಾ ವಿಭಾಗಗಳಿಗೂ, ಭೂಸೇನೆ ಹಾಗೂ ವಾಯುಸೇನೆಗೂ ಹರಡಬಾರದು ಎಂಬುದಿತ್ತು. ನಿಷೇಧವಿದ್ದಾಗ್ಯೂ ಸಾರ್ವತ್ರಿಕ ಬೆಂಬಲ ಪಡೆದು ಸಾಮೂಹಿಕ ಮುಷ್ಕರ ಮತ್ತು ಹರತಾಳ ಮಾಡಿದ್ದನ್ನು ಅವರು ಅಧಿಕೃತವಾಗಿ ವಿರೋಧಿಸಿದರು. ನೌಕಾ ಬಂಡಾಯವನ್ನು ಅದೊಂದು 'ಅನ್ನ-ಸಾರಿನ' ವಿಷಯವೆಂದಷ್ಟೇ ಅವರು ಕಂಡರು, ಜನಾಂಗೀಯ ತಾರತಮ್ಯದ ವಿರುದ್ಧದ ಬೇಡಿಕೆಗೆ ಅವರು ಕುರುಡರಾಗಿದ್ದರು, ಅದನ್ನು ವಿಶಾಲ ರಾಷ್ಟ್ರೀಯ ಚಳುವಳಿಯ ಒಂದು ಭಾಗ ಎಂದು ಕಾಣಲು ನಿರಾಕರಿಸಿದರು.

ಗೋಲಿಬಾರಿನಿಂದಾಗಿ ನೂರಾರು ಜನರ ಹತ್ಯೆಗೆ ಕಾರಣವಾದ ಸಾಮ್ರಾಜ್ಯಶಾಹಿ ಅಧಿಕಾರಿಗಳ ಹಿಂಸೆಯನ್ನು ಕಾಂಗ್ರೆಸ್ ಮತ್ತು ಲೀಗಿನ ನಾಯಕರು ಖಂಡಿಸಲಿಲ್ಲ, ಬದಲಿಗೆ ಅದಕ್ಕೆ ಬಲಿಯಾದ ನಿಶ್ಶಸ್ತ್ರ ಜನರನ್ನು ಟೀಕಿಸಿದರು. ನೌಕಾ ಸಿಬ್ಬಂದಿಗಳ ಮುಷ್ಕರನ್ನು ಖಂಡಿಸುವ ಮೂಲಕ ಅವರು ತಮ್ಮನ್ನು ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ಪ್ರತಿನಿಧಿಗಳೆಂದು ತೋರಿಸಿಕೊಳ್ಳ ಬಯಸಿದರು. 'ನೌಕಾದಳದಲ್ಲಿ ಶಿಸ್ತು ಇರಲೇಬೇಕೆಂಬ ಸೇನಾ ಮುಖ್ಯಸ್ಥನ ಮಾತುಗಳನ್ನು' ತಾನು ಒಪ್ಪುವುದಾಗಿ ವಲ್ಲಭ ಭಾಯ್ ಪಟೇಲರು ಸಾರಿ ಹೇಳಿದರು. 'ಹಿಂಸೆಯ ಕಾರಣಕ್ಕಾಗಿ ಹಿಂದೂ ಮತ್ತು ಮುಸ್ಲಿಮರ ಅಪವಿತ್ರ ಮೈತ್ರಿ' ಎಂದು ಗಾಂಧೀಜಿ ಒಂದು ಹೇಳಿಕೆಯಲ್ಲಿ ಮುಷ್ಕರವನ್ನು ಖಂಡಿಸಿದರು. ರಿನ್ ಸಿಬ್ಬಂದಿಗಳು ಶರಣಾಗಬೇಕು ಎಂಬುದೇ ಅವರೆಲ್ಲರ ಉಪದೇಶವಾಗಿದ್ದವು. ಕಾಂಗ್ರೆಸ್ ಮುಖಂಡ ವಲ್ಲಭಭಾಯ್ ಪಟೇಲರ ಸಲಹೆ ಮತ್ತು ನಂತರ ಜಿನ್ನಾರ ಸಂದೇಶದಿಂದಾಗಿ ಕೇಂದ್ರೀಯ ನೌಕಾ ಮುಷ್ಕರ ಸಮಿತಿಯು ಅಂತಿಮವಾಗಿ ಫೆಬ್ರವರಿ 23ರಂದು ಶರಣಾದರು. ಅವರು ಶರಣಾದದ್ದು "ನಾವು ಭಾರತಕ್ಕೆ ಶರಣಾಗುತ್ತೇವೆ, ಬ್ರಿಟನ್ನಿಗಲ್ಲ" ಎಂಬ ಘೋಷಣೆಯೊಂದಿಗೆ.

ಮುಷ್ಕರನಿರತ ಸಿಬ್ಬಂದಿಗಳನ್ನು ರಕ್ಷಿಸುವ, ಅವರ ಶರಣಾಗತಿಯನ್ನು ಹಾಗೂ ಶಿಕ್ಷೆ ಅನುಭವಿಸುವುದನ್ನು ತಡೆಯುವ ಪ್ರಯತ್ನಗಳಲ್ಲಿ ಹೆಚ್ಚು ಬಲಿಷ್ಟವಾದ ಪಕ್ಷಗಳನ್ನು-ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ಪಕ್ಷಗಳನ್ನು-ಅಣಿನೆರೆಸುವಷ್ಟು ಶಕ್ತಿ ಪಕ್ಷಕ್ಕೆ ಇರಲಿಲ್ಲ ಎಂದು ಕಮ್ಯುನಿಸ್ಟ್ ಪಕ್ಷವು ವಿಷಾದ ಪಟ್ಟುಕೊಂಡಿತು. ಹೀಗಿದ್ದಾಗ್ಯೂ, "ನಮ್ಮ ರಿನ್ ಸೋದರರು ನಿರ್ನಾಮವಗುವುದನ್ನು ತಡೆಯಲು ಅವರ ಹಿಂದೆ ನಿಂತು ತನ್ನೆಲ್ಲಾ ಶಕ್ತಿಯನ್ನು ಹಾಕಿತು" ಎಂದು ಕಮ್ಯುನಿಸ್ಟ್ ಪಕ್ಷವು ಖಂಡಿತವಾಗಿಯೂ ಹೇಳಿಕೊಳ್ಳಬಹುದು.



ಕೋವಿಡ್ ಕ್ರಮಗಳ ಬಗ್ಗೆ ಪ್ರಧಾನ ಮಂತ್ರಿಗಳಿಗೆ ಸೀತಾರಾಮ್ ಯೆಚುರಿಯವರ ಇನ್ನೊಂದು ಪತ್ರ

ಪುಟ 8 ರಿಂದ

ಇಲ್ಲ. ದುರಂತವೆಂದರೆ ಕೆಲವರು ಈ ವೈರಸ್‌ಗೆ ಬಲಿಯಾಗಿದ್ದಾರೆ. ಈ ಹಂತದಲ್ಲಿಯೂ ತಪಾಸಣೆಯ ಸಾಧನಗಳು ಮತ್ತು ಪಿ.ಪಿ.ಇ.ಗಳನ್ನು ಸಮರೋಪಾದಿಯಲ್ಲಿ ಒದಗಿಸುವುದು ಅನಿವಾರ್ಯವಾಗಿದೆ.

7. ಸಾರ್ವತ್ರಿಕ ಆರೋಗ್ಯಪಾಲನೆ: ಕೊವಿಡ್ ಮಹಾಮಾರಿಯ ವಿರುದ್ಧ ಸಮರಕ್ಕೆ ಗಮನವನ್ನು ಕೇಂದ್ರೀಕರಿಸ ಬೇಕಾಗಿದ್ದರೂ, ಭಾರತ ಸಾಂಸರ್ಗಿಕವಲ್ಲದ ರೋಗಗಳಿಂದ ನರಳುತ್ತಿರುವ ರೋಗಿಗಳಿಗೆ ವೈದ್ಯಕೀಯ ಗಮನದ ಅಭಾವದಿಂದ ದೊಡ್ಡ ಸಂಖ್ಯೆಯಲ್ಲಿ ಕೊವಿಡೇತರ ಸಾವುಗಳನ್ನು ಕಾಣುವಂತಾಗ ಬಾರದು. ಲಾಕ್‌ಡೌನ್ ಅವಧಿಯಲ್ಲಿ 3ಲಕ್ಷಕ್ಕೂ ಹೆಚ್ಚು ಮಕ್ಕಳು ಮತ್ತು ಕ್ಷಾಂತರ ಗರ್ಭಿಣಿಯರು ಅತ್ಯಗತ್ಯ ಜೀವವುಳಿಸುವ ಚುಚ್ಚು ಮದ್ದುಗಳಿಂದ ವಂಚಿತರಾಗಿದ್ದಾರೆ ಎಂದು ವರದಿಗಳು ಅಂದಾಜು ಮಾಡಿವೆ. ಒಂದು ಲಕ್ಷಕ್ಕೂ ಹೆಚ್ಚು ಕ್ಯಾನ್ಸರ್ ರೋಗಿಗಳು ಮತ್ತು 3.5 ಲಕ್ಷ ಮಧುಮೇಹ ರೋಗಿಗಳಿಗೆ ಅಗತ್ಯ ಶುಶ್ರೂಷೆ ದೊರೆಯಲಿಲ್ಲ. ಮಲೇರಿಯ ಮತ್ತು ಕ್ಷಯ ನಿರ್ಮೂಲನ ಕಾರ್ಯಕ್ರಮಗಳೂ ಕಳೆದ ಐದು ವಾರಗಳಲ್ಲಿ ಅಪಾರ ಇಳಿಕೆಯನ್ನು ತೋರಿಸಿವೆ. ರಕ್ತ ಬ್ಯಾಂಕುಲ್ಲಿ ರಕ್ತ ಪೂರೈಕೆಯ ಅಗಾಧ ಕೊರತೆಯಿದೆ ಎಂಬ ವರದಿಗಳಿವೆ. ಥಲಸ್ಸೇಮಿಯ, ಹೆಮೊಫೀಲಿಯ ಮತ್ತು ಸಿಕ್‌ಲ್ ಸೆಲ್ ರೋಗ ಮುಂತಾದ ಸಮಸ್ಯೆಗಳಿರುವವರಿಗೆ ಇದು ಅತ್ಯಗತ್ಯ. ಇಂತಹ ಒಂದು ಸನ್ನಿವೇಶವನ್ನು ಸ್ವೀಕರಿಸಲು ಸಾಧ್ಯವಿಲ್ಲ, ಇದನ್ನು ತಕ್ಷಣವೇ ಸರಿಪಡಿಸಬೇಕು.

8. ಆಳ್ವಿಕೆಯಲ್ಲಿ ಆದ್ಯತೆಗಳನ್ನು ಹಾಕಿಕೊಳ್ಳಿ: ಅಗಾಧ ಸೌಕರ್ಯಗಳಿರುವ ಮಧ್ಯಪ್ರದೇಶದಂತಹ ರಾಜ್ಯಗಳಲ್ಲಿ ಸೋಂಕಿತರ ಸಂಖ್ಯೆ ತ್ವರಿತವಾಗಿ ಹೆಚ್ಚುತ್ತಿರುವುದು, ಮತ್ತು ಸಾವಿನ ಸಂಖ್ಯೆ ದೊಡ್ಡ ಪ್ರಮಾಣದಲ್ಲಿರುವುದಕ್ಕೂ, ಸಾರ್ವಜನಿಕ ಆರೋಗ್ಯ ತುರ್ತಿನ ಗಂಭೀರ ಸಮಯದಲ್ಲೂ ಎಲ್ಲ ನಿಯಮಗಳನ್ನು ಉಲ್ಲಂಘಿಸಿದ ಬಿಜೆಪಿಯ ನಗ್ನ ರಾಜಕೀಯ ಅಧಿಕಾರ ದಾಹಕ್ಕೂ ನೇರ ಸಂಬಂಧವಿದೆ. ಒಂದು ಚುನಾಯಿತ ಸರಕಾರವನ್ನು ಉರುಳಿಸಿ, ಒಂದು ಬಿಜೆಪಿ ಸರಕಾರದ ಪ್ರತಿಜ್ಞಾ ಸ್ವೀಕಾರ ನಡೆಸಿರುವುದು ಆ ರಾಜ್ಯದಲ್ಲಿ ಯಾವುದೇ ರಾಜಕೀಯ ಮುಖಂಡತ್ವ ಇಲ್ಲದಂತೆ ಮಾಡಿತ್ತು. ಈ ಮಹಾಮಾರಿ ಅಲ್ಲಿ ಕಳವಳಕಾರೀ ರೀತಿಯಲ್ಲಿ ಹರಡುತ್ತಿರುವುದಕ್ಕೆ ಸಾಮಾನ್ಯ ಜನರು ಬೆಲೆ ತೆರುತ್ತಿದ್ದಾರೆ.

9. ಮಬ್ಬಾಗಿರುವ ಆಳ್ವಿಕೆ: ಅರ್ಥ ಮಾಡಿಕೊಳ್ಳಲು ಆಗದ ಆದೇಶಗಳನ್ನು ಹೊರಡಿಸುವುದು, ಅದರ ಬೆನ್ನಿಗೆ ಹಲವಾರು ಸ್ಪಷ್ಟೀಕರಣಗಳನ್ನು ಕಳಿಸುವುದು ಮತ್ತು ಆ ಆದೇಶಗಳನ್ನು ಹಿಂತೆಗೆದುಕೊಳ್ಳುವುದು ಕೂಡ ಈ ವೇಳೆಗೆ ಒಂದು ಹವ್ಯಾಸವೇ ಆಗಿಬಿಟ್ಟಿದೆ. ಇಂತಹದೊಂದು ಮಬ್ಬು ಆಳ್ವಿಕೆಯ ಮಾದರಿಯ ಹೆಜ್ಜೆ ಗುರುತಗಳನ್ನು ನೋಟುರದ್ಧತಿ ಕೈಗೊಂಡಾಗ ನೋಡಿದ್ದೆವು. ಸ್ಪಷ್ಟವಾಗಿ, ದೇಶದ ರಾಜಕೀಯ ಕಾರ್ಯಾಂಗ ತನ್ನ ಯೋಚನೆಯಿಲ್ಲದ ಪ್ರತಿಕ್ರಿಯೆಗಳ ಮೂಲಕ ತನ್ನ ಅಸಾಮರ್ಥ್ಯವನ್ನು ಸಾಬೀತು ಪಡಿಸುತ್ತಿದೆ.

10. ಕೋಮುವಾದಿ ಧ್ರುವೀಕರಣ: ಮಹಾಮಾರಿಯ ವಿರುದ್ಧ ಸಮರ ದೇಶ ಮತ್ತು ಎಲ್ಲ ಭಾರತೀಯರು ಒಂದಾಗಿದ್ದಾಗ ಮಾತ್ರ ಸಾಧ್ಯ. ತಬ್ಲಿಘಿ ಜಮಾತ್‌ನ ಸಂಘಟಕರ ಬೇಜವಾಬ್ದಾರಿತನ ಇಡೀ ಮುಸ್ಲಿಂ ಅಲ್ಪಸಂಖ್ಯಾತ ಸಮುದಾಯದ ಮೆಲೆ ಗುರಿಯಿಡುವುದಕ್ಕೆ ಮತ್ತು ಸಾಮಾಜಿಕ ವಿಭಜನೆಗಳನ್ನು ಹಾಗು ಕೋಮುವಾದಿ ಧ್ರುವೀಕರಣವನ್ನು ಆಳಗೊಳಿಸಲಿಕ್ಕೆ ಒಂದು ನೆಪವಾಗಲು ಸಾಧ್ಯವಿಲ್ಲ. ಇದು ಕೋಮುವಾದಿ ದ್ವೇಷವನ್ನು ಹರಡಿಸುತ್ತ ಭಾರತದ ಶಕ್ತಿಯನ್ನು ಶಿಥಿಲಗೊಳಿಸುತ್ತದಷ್ಟೇ. ಇಂತಹ ಒಂದು ಕೋಮುವಾದಿ ಪ್ರಚಾರದ ಪರಿಣಾಮ ಭಾರತಿಯ ಮೂಲದ ಜನಗಳು ದೊಡ್ಡ ಸಂಖ್ಯೆಯಲ್ಲಿ ಕೆಲಸ ಮಾಡುವ ಮತ್ತು ವಾಸಿಸುವ ಜಗತ್ತಿನ ಹಲವು ದೇಶಗಳಲ್ಲಿ ಈಗ ಅನುಭವಕ್ಕೆ ಬರುತ್ತಿದೆ. ಇದನ್ನು ತಕ್ಷಣವೇ ನಿಲ್ಲಿಸುವುದು ರಾಜಕೀಯ ಮುಖಂಡತ್ವದ, ಅಂದರೆ ಕೇಂದ್ರ ಸರಕಾರದ ಕೈಯಲ್ಲಿದೆ. ಇಲ್ಲವಾದರೆ, ಇದು ಮಹಾಮಾರಿಯ ವಿರುದ್ಧ ಹೋರಾಟಕ್ಕೆ ಮತ್ತು ನಮ್ಮ ದೇಶದ ಜನತೆಗೆ ಮಾಡುವ ಅತಿ ದೊಡ್ಡ ಅಪಕಾರವಾಗುತ್ತದೆ.

11. ವಲಸೆ ಕಾರ್ಮಿಕರು ಮನೆಗೆ ಮರಳುವಂತಾಗಬೇಕು: ಕೇಂದ್ರ ಸರಕಾರ ಮಹಾಮಾರಿ ಎರಗಿದಾಗ ವಿದೇಶಗಳಲ್ಲಿ ಸಿಲುಕಿಕೊಂಡಿದ್ದ ದೊಡ್ಡ ಸಂಖ್ಯೆಯಲ್ಲಿದ್ದ ಭಾರತೀಯರನ್ನು ಭಾರತಕ್ಕೆ ಕರೆತರಲು ವ್ಯವಸ್ಥೆ ಮಾಡಿದ್ದು ಸರಿಯಾದ ಕ್ರಮ. ಅದಕ್ಕೆ ವಿಶೇಷ ವಿಮಾನಗಳನ್ನು ಏರ್ಪಡಿಸಲಾಯಿತು. ಆದರೆ, ಕೇಂದ್ರ ಸರಕಾರ ವಲಸೆ ಕಾರ್ಮಿಕರನ್ನು ಅವರ ಮನೆಗಳಿಗೆ ತಲುಪಿಸಲು, ವಿಮಾನಗಳಲ್ಲವಾದರೂ, ಲಾಕ್‌ಡೌನಿನ ನಿರ್ಬಂಧಗಳನ್ನು ಕಾಯ್ದುಕೊಂಡೇ ವಿಶೇಷ ರೈಲುಗಳು ಮತ್ತು ಬಸ್ಸುಗಳನ್ನು ವ್ಯವಸ್ಥೆ ಮಾಡದಿರುವುದು ಒಪ್ಪತಕ್ಕದ್ದಲ್ಲ. ಈಗಲಾದರೂ ಅದನ್ನು ಕೈಗೆತ್ತಿಕೊಳ್ಳಬೇಕು. ಅಲ್ಲದೆ ಬಹಳಷ್ಟು ಭಾರತೀಯರು ಈಗಲೂ ವಿದೇಶಗಳಲ್ಲಿ ಉಳಿದುಕೊಂಡಿದ್ದಾರೆ. ಕೇಂದ್ರ ಸರಕಾರ, ಜಗತ್ತಿನ ಬೇರೆ ಹಲವು ದೇಶಗಳು ಮಾಡುವಂತೆ, ನಮ್ಮ ದೇಶದಿಂದಲೂ ಅವರ ನಾಗರಿಕರಿಗೆ ವಿಮಾನ ಕಳಿಸುವಂತೆ ವ್ಯವಸ್ಥೆ ಮಾಡಬೇಕು.

12. ಅಂತಿಮವಾಗಿ, ಶ್ರೀಯುತ ಪ್ರಧಾನ ಮಂತ್ರಿಗಳೇ, ಜಗತ್ತಿನ ಇತರ ಹಲವು ದೇಶಗಳ ನಿಮ್ಮಂತಹ ಮುಖ್ಯಸ್ಥರುಗಳು ಮಾಧ್ಯಮಗಳನ್ನು ಎದುರಿಸುವ ಬಗ್ಗೆ ಮತ್ತು ಜನಗಳ ಕಾಳಜಿಗಳಿಗೆ ಉತ್ತರ ಕೊಡುವಲ್ಲಿ ನೀವು ತೋರಿಸುವಂತಹ ಅಸಡ್ಡೆಯನ್ನು ತೋರಿಸಿಲ್ಲ. ಹೆಚ್ಚಿನ ದೇಶಗಳಲ್ಲಿ ಸರಕಾರದ ಮುಖಂಡರುಗಳು ನಿಯಮಿತವಾಗಿ ಪತ್ರಿಕಾಗೋಷ್ಠಿಗಳನ್ನು ಉದ್ದೇಶಿಸಿ ಮಾತನಾಡುತ್ತಾರೆ, ಪ್ರಶ್ನೆಗಳಿಗೆ ಉತ್ತರ ನೀಡುತ್ತಾರೆ. ಇದು ಜವಾಬುದಾರಿಕೆಯಿಂದಿರುವ ಮತ್ತು ಸರಕಾರ ಸಶಕ್ತವಾಗಿದೆ ಹಾಗೂ ಸನ್ನಿವೇಶದ ಮೇಲೆ ಹತೋಟಿ ಹೊಂದಿದೆ ಎಂಬ ವಿಶ್ವಾಸವನ್ನು ಜನಗಳಿಗೆ ನೀಡುವ ಏಕೈಕ ಮಾರ್ಗ, ನಿಜ ಹೇಳಬೇಕೆಂದರೆ, ಭಾರತದಲ್ಲಿ ಹಲವು ರಾಜ್ಯ ಸರಕಾರಗಳು ಇದನ್ನು ಮಾಡುತ್ತವೆ. ಕೇರಳದ ಎಲ್‌ಡಿಎಫ್ ಸರಕಾರದ ಮುಖ್ಯಮಂತ್ರಿ ಈ ಸವಾಲನ್ನು ಎದುರಿಸಲು ಜನಗಳಿಗೆ ಬೇಕಾಗುವ ವಿಶ್ವಾಸವನ್ನು ಉಂಟುಮಾಡಲು ಪ್ರತಿದಿನ ಪತ್ರಿಕಾಗೋಷ್ಠಿ ನಡೆಸುತ್ತಾರೆ, ಮತ್ತು ಸರಕಾರ ಕೈಗೊಳ್ಳುತ್ತಿರುವ ಕ್ರಮಗಳ ರೂಪುರೇಷೆಯನ್ನು ಕೊಡುತ್ತಾರೆ. ನಿಮ್ಮ ಆಳ್ವಿಕೆಯ ವಿಧಾನದಲ್ಲಿ ಪ್ರಜಾಸತ್ತಾತ್ಮಕ ಜವಾಬುದಾರಿಕೆ ಸಂಪೂರ್ಣವಾಗಿ ಕಾಣೆಯಾಗಿದೆ.

ನಿಮ್ಮ ವಿಶ್ವಾಸಿ

ಸೀತಾರಾಮ್ ಯೆಚುರಿ

ಸಾಮಾಜಿಕ ಅಂತರದ ಈ ಪರಿ-ಮಾರ್ಚ್ 2 ರಂದು ರಾಜಕೀಯ ಅಧಿಕಾರದಾಹ ತೀರಿಸಿಕೊಂಡ ಮೇಲೆ ಭೋಪಾಲದಲ್ಲಿ!



ಕೊರೊನಾ: ನಿರುದ್ಯೋಗ ಭತ್ಯೆ ಕ್ಯೂನಲ್ಲಿ 2.6 ಕೋಟಿ ಅಮೆರಿಕನ್ನರು



ಕೊರೊನಾ ಜಾಗತಿಕ ಮಹಾಮಾರಿಯಲ್ಲಿ ಅಮೆರಿಕಾವು ಸಾವು–ನೋವುಗಳ "ಹಾಟ್ ಸ್ಪಾಟ್" ದೇಶವಾಗಿದೆ. ಜಗತ್ತಿನಲ್ಲೇ ಅತಿ ಹೆಚ್ಚು ಸಾವು–ನೋವುಗಳನ್ನು ಕಂಡ ನ್ಯೂಯಾರ್ಕ್ "ಕೊರೊನಾ ರಾಜಧಾನಿ"ಯಾಗಿದೆ. ಕೆಲವು ರಾಜ್ಯಗಳಲ್ಲಿ ಮಾತ್ರ ಅಮೆರಿಕದಲ್ಲಿ ಲಾಕ್ ಡೌನ್ ಘೋಷಿಸಲಾಗಿದ್ದರೂ ಸಹ ಹಲವು ಉದ್ಯಮಗಳು (ಕಾರ್ಖಾನೆ, ವ್ಯಾಪಾರ, ವ್ಯವಹಾರ) ಗಳು ಮುಚ್ಚಲ್ಪಟ್ಟಿವೆ. ಕಾರ್ಮಿಕರ 'ಹೈರ್ ಅಂಡ್ ಫೈರ್' ಪದ್ಧತಿ ಇರುವ ಅಮೆರಿಕದಲ್ಲಿ, ಉದ್ಯಮಗಳಲ್ಲಿ ಯಾವುದೇ ಸವಾಲು (ಲಾಭ ಕಡಿಮೆ, ಬೇಡಿಕೆ ಕೊರತೆ, ಉತ್ಪಾದನಾ ಸಮಸ್ಯೆ) ಎದುರಾದಾಗ ಮೊದಲ ಕತ್ತಿಏಟು ಬೀಳುವುದು ಕಾರ್ಮಿಕರ ಮೇಲೆ.

ಕಾರ್ಮಿಕ ಕೆಲಸ ಕಳೆದುಕೊಳ್ಳುತ್ತಾನೆ. ಕೆಲಸ ಕಳೆದುಕೊಳ್ಳುವ ಕಾರ್ಮಿಕ ನಿರುದ್ಯೋಗ ಭತ್ಯೆಗೆ ಅರ್ಜಿ ಹಾಕಿಕೊಳ್ಳಬಹುದು. ಅದನ್ನು ಪಡೆಯಲು ಕೆಲವು ಷರತ್ತುಗಳು (ಉದಾ: ಕನಿಷ್ಠ ಅವಧಿ, ಗರಿಷ್ಠ ಅವಧಿ ಇತ್ಯಾದಿ) ಇರುವುದರಿಂದ ಎಲ್ಲ ನಿರುದ್ಯೋಗಿಗಳಿಗೆ ನಿರುದ್ಯೋಗ ಭತ್ಯೆ ಸಿಗುವುದಿಲ್ಲ. ಎಲ್ಲ ನಿರುದ್ಯೋಗಿಗಳು ನಿರುದ್ಯೋಗ ಭತ್ಯೆಗೆ ಅರ್ಜಿ ಸಲ್ಲಿಸದೆಯೂ ಇರಬಹುದು. ಹಾಗಾಗಿ, ನಿರುದ್ಯೋಗ ಭತ್ಯೆಗೆ ಅರ್ಜಿ ಸಲ್ಲಿಸಿದವರ ಮತ್ತು ಪಡೆಯುತ್ತಿರುವವರ ಒಟ್ಟು ಸಂಖ್ಯೆ ನಿರುದ್ಯೋಗಿಗಳ ಕನಿಷ್ಠ ಸಂಖ್ಯೆಯನ್ನು ಕೊಡುತ್ತದೆ. ನಿರುದ್ಯೋಗಿಗಳ ಸಂಖ್ಯೆ ಇನ್ನೂ ಹೆಚ್ಚಿರಬಹುದು. ಆದರೆ ಕೊರೊನಾ ಆರ್ಥಿಕ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಹೆಚ್ಚಿನ ಷರತ್ತುಗಳನ್ನು ಸಡಿಲಿಸಿರುವುದರಿಂದ, ನಿರುದ್ಯೋಗ ಭತ್ಯೆಗೆ ಅರ್ಜಿ ಸಲ್ಲಿಸಿದವರ ಪಡೆಯುತ್ತಿರುವವರ ಒಟ್ಟು ಸಂಖ್ಯೆ ನಿರುದ್ಯೋಗಿಗಳ ಸಂಖ್ಯೆಯನ್ನು ಹೆಚ್ಚು ನಿಖರವಾಗಿ ಸೂಚಿಸುತ್ತದೆ.

ಏಪ್ರಿಲ್ 3ನೇ ವಾರದಲ್ಲಿ ನಿರುದ್ಯೋಗದ ಭತ್ಯೆಗಾಗಿ 44 ಲಕ್ಷ ಕಾರ್ಮಿಕರು ಅರ್ಜಿಗಳನ್ನು ಸಲ್ಲಿಸಿದ್ದಾರೆ. ಅದುವರೆಗಿನ ಐದು ವಾರಗಳಲ್ಲಿ ನಿರುದ್ಯೋಗದ ಭತ್ಯೆಗಾಗಿ ಅರ್ಜಿ ಸಲ್ಲಿಸಿರುವವರ ಸಂಖ್ಯೆ ಇತಿಹಾಸದಲ್ಲೇ ಮೊದಲ ಬಾರಿಗೆ 2.6 ಕೋಟಿ ಮೀರಿದೆ. ಮಾರ್ಚ್ 3ನೇ ವಾರದಲ್ಲಿ 32 ಲಕ್ಷ, 4ನೇ ವಾರದಲ್ಲಿ 68 ಲಕ್ಷ – ಹೀಗೆ ನಿರುದ್ಯೋಗದ ಭತ್ಯೆಗೆ ಅರ್ಜಿಗಳು ಮಾರ್ಚ್ ಕೊನೆಯ ಹೊತ್ತಿಗೆ ಮುಗಿಲು ಮುಟ್ಟಿದ್ದವು. ಏಪ್ರಿಲ್ 1ನೇ ವಾರದಲ್ಲಿ 66 ಲಕ್ಷ, 2ನೇ ವಾರದಲ್ಲಿ 52 ಲಕ್ಷ ಕಾರ್ಮಿಕರು ನಿರುದ್ಯೋಗದ ಭತ್ಯೆ ಅರ್ಜಿಗಳು ಸಲ್ಲಿಸಲು ಕ್ಯೂನಲ್ಲಿದ್ದರು. ಫೆಬ್ರುವರಿ 2020ರ ವರೆಗೆ ಮೊದಲು ಹಲವು ತಿಂಗಳುಗಳಿಂದ ನಿರುದ್ಯೋಗ ಭತ್ಯೆಗೆ ಅರ್ಜಿಗಳ ಸಂಖ್ಯೆ 2 ಲಕ್ಷದಷ್ಟು ಇದ್ದು, ಒಟ್ಟು ನಿರುದ್ಯೋಗ ಭತ್ಯೆ ಪಡೆಯುತ್ತಿದ್ದವರ ಸಂಖ್ಯೆ 17 ಲಕ್ಷ ಇತ್ತು. ಏಪ್ರಿಲ್ 2ನೇ ವಾರದ ಹೊತ್ತಿಗೆ 1.6 ಕೋಟಿ ನಿರುದ್ಯೋಗ ಭತ್ಯೆ ಪಡೆಯುತ್ತಿದ್ದಾರೆ. 3ನೇ ವಾರದ ಹೊತ್ತಿಗೆ ಅರ್ಜಿಗಳ ಸಂಖ್ಯೆ 2.6 ಕೋಟಿ ಮುಟ್ಟಿತ್ತು ಎಂದು ವರದಿಯಾಗಿದೆ. ಅಂದರೆ ಇನ್ನೂ 1 ಕೋಟಿ ಜನ ನಿರುದ್ಯೋಗ ಭತ್ಯೆ ಅರ್ಜಿ ಸಲ್ಲಿಸಿ ಕಾಯುತ್ತಿದ್ದಾರೆ. 1930ರ ಮಹಾಕುಸಿತದ ಸಮಯದಲ್ಲೂ ನಿರುದ್ಯೋಗ ಭತ್ಯೆ ಪಡೆದವರ ಗರಿಷ್ಠ ಸಂಖ್ಯೆ ಗರಿಷ್ಠ 61 ಲಕ್ಷ ದಾಟಿರಲಿಲ್ಲ. 2007–9ರ ನಡುವಿನ ಅವಧಿಯಲ್ಲಿ ಮಹಾ ಕುಸಿತದಲ್ಲಿ ಸಹ 86 ಲಕ್ಷ ಉದ್ಯೋಗ ನಷ್ಟವಾಗಿತ್ತು. ಈ ಎರಡೂ ಮಿತಿಗಳನ್ನು ಈ ಮಾರ್ಚ್ ಕೊನೆಯ ವಾರದಲ್ಲೇ ದಾಟಿ ಬಿಟ್ಟಿದೆ ಎಂದರೆ ಪರಿಸ್ಥಿತಿಯ ಗಂಭೀರತೆ ಅರ್ಥವಾಗುತ್ತದೆ.

ಏಪ್ರಿಲ್ 4ನೇ ವಾರ ಮತ್ತು ಮುಂದೆ ಅರ್ಜಿಗಳ ಸಂಖ್ಯೆ ಕಡಿಮೆ ಆಗಬಹುದಾದರೂ, ಹಲವು ವಾರಗಳ ಕಾಲ ದಶಲಕ್ಷಗಳಲ್ಲೇ ಇರುತ್ತದೆ ಎಂದು ಅಂದಾಜಿಸಲಾಗಿದೆ. ಈ ಅರ್ಜಿಗಳ ಸುನಾಮಿಯನ್ನು ನಿಭಾಯಿಸುವಲ್ಲಿನ ತೊಡಕುಗಳು (ಕಂಪ್ಯೂಟರ್ ಕ್ರಾಶ್, ನೆಟ್ ವರ್ಕ್ ಡೌನ್, ಸರ್ವರ್ ಕ್ರಾಶ್, ಸಿಬ್ಬಂದಿ ಕೊರತೆ) ವಿಪರೀತವಾಗಿ, ರಾಜ್ಯಗಳ ಕಾರ್ಮಿಕ ಇಲಾಖೆಗಳು ನಿರುದ್ಯೋಗ ಭತ್ಯೆಗಾಗಿ ಸಲ್ಲಿಸುತ್ತಿರುವ ಅರ್ಜಿಗಳನ್ನು ಸ್ವೀಕರಿಸಲು ಕೂಡ ಪರದಾಡುತ್ತಿವೆ. ಕೆಲವು ರಾಜ್ಯಗಳ ಬೊಕ್ಕಸ ಖಾಲಿಯಾಗುತ್ತಿದ್ದು ನಿರುದ್ಯೋಗ ಭತ್ಯೆ ಕೊಡಲಿಕ್ಕಾಗದೇ ಹೋಗಬಹುದು. ಈಗಾಗಲೇ ನ್ಯೂಯಾರ್ಕ್ ಸಿಟಿ ಸೇರಿದಂತೆ, ಆರು ರಾಜ್ಯಗಳು ಇನ್ನೂ ಹತ್ತು ವಾರಗಳು ಮಾತ್ರ ನಿರುದ್ಯೋಗ ಭತ್ಯೆಯನ್ನು ನೀಡಬಲ್ಲವು. 15 ರಾಜ್ಯಗಳ ಬಳಿ ಕನಿಷ್ಠ ಒಂದು ವರ್ಷಗಳ ಕಾಲ 1930ರ ಮಹಾ ಕುಸಿತದ ಅವಧಿಯ ಗರಿಷ್ಠ (ಶೆ. 25 ರಷ್ಟು ನಿರುದ್ಯೋಗ ದರದಲ್ಲಿ) ನಿರುದ್ಯೋಗ ಭತ್ಯೆ ಬೇಡಿಕೆ ಪೂರೈಸಲು ಬೇಕಾದ, ಫೆಡರಲ್ ಕಾನೂನು ಪ್ರಕಾರ ಇರಬೇಕಾದ ಕನಿಷ್ಠ ನಿಧಿಯೂ ಇಲ್ಲ.

ಕೊರೊನಾ ಮಹಾಮಾರಿ ಸೃಷ್ಟಿಸಿರುವ ಬಿಕ್ಕಟ್ಟಿನ ಪರಿಣಾಮವಾಗಿ 2007–9 ಕುಸಿತದ ನಂತರ ಸೃಷ್ಟಿಯಾಗಿದ್ದ 2.3 ಕೋಟಿ ಉದ್ಯೋಗಗಳನ್ನು ನಾಶ ಮಾಡಿದೆ ಎಂದು ನಿರುದ್ಯೋಗ ಭತ್ಯೆಗೆ ಅರ್ಜಿಗಳ ಸಂಖ್ಯೆಗಳು ಸೂಚಿಸುತ್ತವೆ. ಅಂದರೆ ನಿರುದ್ಯೋಗದ ಮಟ್ಟಗಾದರೂ, ಈಗಾಗಲೇ 2007–9ರ ಬಿಕ್ಕಟ್ಟಿನ ಸ್ಥಿತಿಗೆ ಆರ್ಥಿಕ ಮರಳಿ ಬಿಟ್ಟಿದೆ. ಇನ್ನೂ ಉದ್ಯೋಗ ಕಡಿತಗಳು ಆದರೆ, (ಅಂತಹ ಸಾಧ್ಯತೆಗಳು ಬಲವಾಗಿವೆ) 1930ರ ಮಹಾಕುಸಿತಕ್ಕಿಂತ ಕೆಟ್ಟ ಪರಿಸ್ಥಿತಿ ಉಂಟಾಗಬಹುದು ಎಂದು ಅರ್ಥಶಾಸ್ತ್ರಜ್ಞರು ಅಂದಾಜಿಸಿದ್ದಾರೆ.

ಐತಿಹಾಸಿಕವಾಗಿ 50 ವರ್ಷಗಳಲ್ಲೇ ಕನಿಷ್ಠ (ಶೆ.3.5) ಇದ್ದ ಫೆಬ್ರವರಿ 2020ರ ನಿರುದ್ಯೋಗದ ದರವು, ಏಪ್ರಿಲ್ 3ನೇ ವಾರದ ಹೊತ್ತಿಗೆ ಶೆ.15–20 ರಷ್ಟು ಏರಬಹುದು ಎಂದು ಅಂದಾಜಿಸಲಾಗಿದೆ. ಇದು 1930ರ ಮಹಾ ಕುಸಿತದ ನಂತರದ ಗರಿಷ್ಠ ಪ್ರಮಾಣವಾಗಿದೆ. ಇನ್ನೂ ಕೆಲವು ತಿಂಗಳುಗಳ ಕಾಲ ಬಿಕ್ಕಟ್ಟು ಮುಂದುವರೆದರೆ, ಆಗಿನ ನಿರುದ್ಯೋಗದ ಪ್ರಮಾಣವನ್ನು (ಶೆ. 25) ಮೀರಿ ಶೆ. 30 ವರೆಗೆ ಹೋಗಬಹುದು ಎನ್ನಲಾಗಿದೆ.

ಕೊರೊನಾ ಉಂಟು ಮಾಡುತ್ತಿರುವ ಆರ್ಥಿಕ ಬಿಕ್ಕಟ್ಟು, 1930ರ ದಶಕದ ಮತ್ತು 2007–9 ಮಹಾ ಬಿಕ್ಕಟ್ಟುಗಳಷ್ಟೇ ಅಥವಾ ಅವುಗಳಿಗಿಂತ ತೀವ್ರವಾಗುವ ಸಾಧ್ಯತೆಯೇ ಹೆಚ್ಚು. ನಿರುದ್ಯೋಗಿಗಳ ಸಂಖ್ಯೆಯ ದೃಷ್ಟಿಯಿಂದ ಈಗಾಗಲೇ ಅದು ಆಗಿಬಿಟ್ಟಿದೆ. ನಿರುದ್ಯೋಗ ದರದ ದೃಷ್ಟಿಯಿಂದ ಕೆಲವೇ ವಾರಗಳಲ್ಲಿ ಅದು ಸಂಭವಿಸಬಹುದು. ಏಕೆಂದರೆ ಈ ಮೊದಲ ಬಿಕ್ಕಟ್ಟುಗಳಲ್ಲಿ ಹಲವು ತಿಂಗಳು ಕಾಲದ ನಂತರ ಕಂಡು ಬಂದ ಶೇರು ಮಾರುಕಟ್ಟೆ ಕುಸಿತ, ನಿರುದ್ಯೋಗ ಏರಿಕೆ, ಆರ್ಥಿಕ ಚಟುವಟಿಕೆಯಲ್ಲಿ ಕುಸಿತ (ಅಥವಾ ಸ್ಥಬ್ಧತೆ) ಕೆಲವೇ ವಾರಗಳಲ್ಲಿ ಕಂಡು ಬಂದಿದೆ. ಅಲ್ಲದೆ ಕೊರೊನಾದ ಜಾಗತಿಕ ವೈದ್ಯಕೀಯ ಬಿಕ್ಕಟ್ಟು ಪರಿಹರಿಸಿ ಸಹಜ ಸ್ಥಿತಿಗೆ ಮರಳಲು ಕೆಲವು ತಿಂಗಳುಗಳಿಂದ ಒಂದು ವರ್ಷವೇ ತಗುಲಬಹುದು. ಇಡೀ ಜಗತ್ತಿನ ಆರ್ಥಿಕ ಚಟುವಟಿಕೆ ಒಂದೇ ಬಾರಿಗೆ ಸ್ಥಗಿತಗೊಂಡದ್ದು ಸಹ ಈ ಬಾರಿಯ ಅಭೂತಪೂರ್ವ ವಿದ್ಯಮಾನ.

ಜಗದ ಸುತ್ತ

ನಾಗರಾಜ ನಂಜುಂಡಯ್ಯ

ಬ್ರೆಜಿಲ್ : ಅಧ್ಯಕ್ಷರ ವಿರುದ್ಧ ದೋಷಾರೋಪಣೆ



ಬ್ರೆಜಿಲ್‌ನಲ್ಲಿ ಆರ್ಥಿಕ ಮತ್ತು ಆರೋಗ್ಯ ಸಂರಕ್ಷಣಾ ಪರಿಸ್ಥಿತಿ ಹದಗೆಟ್ಟಿರುವ ಸಂದರ್ಭದಲ್ಲಿಯೇ ರಾಜಕೀಯ ಬಿಕ್ಕಟ್ಟು ಹೆಚ್ಚಾಗಿ, ಅಧ್ಯಕ್ಷ ಜೈರೋ ಬೋಲ್ಸನಾರೊ ರಾಜಕೀಯವಾಗಿ ತೀವ್ರ ಹಿನ್ನಡೆಯನ್ನು ಎದುರಿಸುತ್ತಿದ್ದಾರೆ.

ಒಂದು ಕಡೆ, ಅಧ್ಯಕ್ಷರು ಫೆಡರಲ್ ಪೋಲಿಸ್ ಮುಖ್ಯಸ್ಥ ಮೌರೆಸಿಯೋ ವಲೆಕ್ಸೂ ಅವರನ್ನು ಯಾವುದೇ ಕಾರಣ ನೀಡದೆ, ವಜಾ ಮಾಡಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ, ಅಧ್ಯಕ್ಷರ ಆಪ್ತಮಿತ್ರ ನ್ಯಾಯಮಂತ್ರಿಯಾಗಿದ್ದ, ಸರ್ಜಿಯೊ ಮೊರೊ, ರವರು ರಾಜೀನಾಮೆ ನೀಡಿದ್ದಾರೆ. ಮತ್ತೊಂದು ಕಡೆ, ಕೋರಾನಾ ವೈರಸ್ ಸಾಂಕ್ರಾಮಿಕ ಹರಡುವಿಕೆಯನ್ನು ತಡೆಯುವಲ್ಲಿ ಅಧ್ಯಕ್ಷ ಮತ್ತು ಆರೋಗ್ಯ ಸಚಿವ ಲೂಯಿಜ್ ಹೆನ್ರಿಕ್ ಮಾಂಡೆಟ್ಟಾ ರವರ ನಡುವೆ ಸಂಘರ್ಷ ಉಂಟಾದ ಕಾರಣ, ಈ ತಿಂಗಳ ಆರಂಭದಲ್ಲಿ ಅವರನ್ನು ಆ ಸ್ಥಾನದಿಂದ ಅಧ್ಯಕ್ಷರು ವಜಾ ಮಾಡಿದ್ದಾರೆ. ಕೋರೊನಾ ತಡೆಯಲು, ಲಾಕ್ ಡೌನ್ ಮತ್ತು ಸಾಮಾಜಿಕ ಅಂತರ ಕಾಪಾಡಿಕೊಳ್ಳುವ ಅಗತ್ಯವನ್ನು ಮ್ಯಾಂಡೆಟ್ಟಾ ಒತ್ತಾಯಿಸಿದ್ದರು. ಇದನ್ನು ಅಧ್ಯಕ್ಷರು ತಳ್ಳಿ ಹಾಕಿದ್ದರು. ಇಡೀ ಲ್ಯಾಟಿನ್ ಅಮೆರಿಕದಲ್ಲಿ ಅತಿ ಹೆಚ್ಚು ಕೋರೊನಾ ವೈರಸ್ ಗೆ ಬಲಿಯಾದ ದೇಶ ಬ್ರೆಜಿಲ್ ಆಗಿದೆ. ಇದಕ್ಕೆ ಕಾರಣ ಅಧ್ಯಕ್ಷ ನಿಭಾಯಿಸಿದ ರೀತಿಯಾಗಿದ್ದು, ಇದು ಜನರಲ್ಲಿ ಬೇಸರ ತಂದಿದೆ. ಇದಕ್ಕಾಗಿ ಅವರು ತೀವ್ರ ಟೀಕೆಗೆ ಒಳಗಾಗಿದ್ದಾರೆ.

ಸರ್ಜಿಯೊ ಮೊರೊ ಮತ್ತು ಮಾಂಡೆಟ್ಟಾ ಈ ಇಬ್ಬರೂ ಬೋಲ್ಸನಾರೊ ಸಚಿವ ಸಂಪುಟದಲ್ಲಿ ಸ್ವಲ್ಪವಾದರೂ ಜನಪ್ರಿಯ ಮಂತ್ರಿ ಗಳು. ಇವರಿಬ್ಬರೂ ಇದೀಗ ಸಂಪುಟದಲ್ಲಿ ಇಲ್ಲದಿರುವುದರಿಂದ, ರಾಜಕೀಯವಾಗಿ ಬೋಲ್ಸನಾರೊ ತೀವ್ರ ಹಿನ್ನಡೆ ಎದುರಿಸಬೇಕಾಗಿದೆ.

ಹಿಂದೆ ಬೋಲ್ಸನಾರೊ ಅವರಿಗೆ ಆಪ್ತರಾಗಿದ್ದ ಸರ್ಜಿಯೊ ಮೊರೊ' ಫೆಡರಲ್ ಪೋಲಿಸ್ ವಿಚಾರದಲ್ಲಿ, ಅಧ್ಯಕ್ಷರು ಹಸ್ತಕ್ಷೇಪ ಮಾಡುತ್ತಿದ್ದಾರೆ ಎಂದು ಆರೋಪಿಸಿದ್ದಾರೆ. ಇದಲ್ಲದೇ ಅಧ್ಯಕ್ಷರು ಮತ್ತು ಅವರ ಇಬ್ಬರು ಮಕ್ಕಳ ಮೇಲು ಸಾರ್ವಜನಿಕ ಆರೋಪಗಳನ್ನು ಮೊರೊ ಮಾಡಿದ್ದಾರೆ. ನಕಲಿ ಸುದ್ದಿ ಪ್ರಸಾರ, ಭ್ರಷ್ಟಾಚಾರ ಮತ್ತು ಮಾಫಿಯಾ ಗುಂಪು ಸಂಬಂಧಗಳ ಕುರಿತಂತೆ, ಸುಪ್ರೀಂ ಕೋರ್ಟ್ ನ ಅಟಾರ್ನಿ ಜನರಲ್ ಗೆ ತಮ್ಮ ಆರೋಪ ಪಟ್ಟಿಯನ್ನು ಸಲ್ಲಿಸಿದ್ದಾರೆ. ಅಧ್ಯಕ್ಷರು ಮತ್ತು ಇವರ ಮಕ್ಕಳು ಆರೋಪಗಳನ್ನು, ಸುಳ್ಳು ಎಂದು ನಿರಾಕರಿಸಿದ್ದಾರೆ. ಆದರೆ, ಸುಪ್ರೀಂ ಕೋರ್ಟ್ ಮೊರೊ ಸಲ್ಲಿಸಿರುವ ಆರೋಪಗಳ ಮೇಲೆ 60 ದಿನಗಳೊಳಗೆ ತನಿಖೆ ನಡೆಸಲು ಅನುಮತಿ ನೀಡಿದೆ. ಈಗಾಗಲೇ ತನಿಖೆ ಆರಂಭಗೊಂಡಿದೆ. ವಜಾ ಗೊಳಿಸಲಾದ ಪೋಲಿಸ್ ಮುಖ್ಯಸ್ಥ ಮೌರಸಿಯೋ ರ ಬದಲಿಗೆ, ತನ್ನ ಒಬ್ಬ ಪುತ್ರನೊಬ್ಬನ ಸ್ನೇಹಿತನನ್ನು ನೇಮಿಸಲು ಅಧ್ಯಕ್ಷರು ಆದೇಶ ಹೊರಡಿಸಿದ್ದಾರೆ. ಈ ಕ್ರಮವು, ಅಧ್ಯಕ್ಷರು ಪೋಲಿಸ್ ಇಲಾಖೆಯಲ್ಲಿ ಹಸ್ತಕ್ಷೇಪ ಮಾಡಿ ತಮಗೆ ಬೇಕಾದ ಇಂಟೆಲಿಜೆನ್ಸ್ ಮಾಹಿತಿಗಳ ಸಂಗ್ರಹಕ್ಕಾಗಿ, ತಮ್ಮ ಹತ್ತಿರದ ಆಪ್ತರನ್ನು ನೇಮಿಸಿಕೊಂಡಿದ್ದಾರೆ ಎಂಬ ಮೊರೊ ರವರ ಆರೋಪಕ್ಕೆ ಇದು ಮತ್ತಷ್ಟು ಬಲ ತುಂಬಿದೆ.

ಅಧ್ಯಕ್ಷ ಬೋಲ್ಸನಾರೊ ಇಂತಹ ವಿವಾದಕ್ಕೆ ಸಿಲುಕಿರುವುದು ಇದೇನು ಹೊಸದಲ್ಲ. ರಾಜಕೀಯ ಪ್ರತಿಸ್ಪರ್ಧಿಗಳು, ಸಾಮಾಜಿಕ ಕಾರ್ಯಕರ್ತರು, ಪರಿಸರವಾದಿಗಳು, ಮತ್ತು ಲೈಂಗಿಕ ಅಲ್ಪ ಸಂಖ್ಯಾತರ ಮೇಲೆ ಅವರು ನಿರಂತರ ವಾಗಿ ನಡೆಸುತ್ತಿರುವ ದಾಳಿಗಳಿಂದ ಮೊದಲುಗೊಂಡು, ಇತ್ತೀಚೆಗೆ, ಅಮೆಜಾನ್ ಬೆಂಕಿಯನ್ನು ವಿವಾದಾತ್ಮಕವಾಗಿ ನಿರ್ವಹಿಸುವವರೆಗೆ, ಅವರು ತೀವ್ರತರದ ಟೀಕೆಗೆ ಗುರಿಯಾಗಿದ್ದಾರೆ. ಆದರೆ, ಈ ಬಾರಿ ರಾಜಕೀಯವಾಗಿ, ಅಧ್ಯಕ್ಷರು ದೊಡ್ಡ ಬಿಕ್ಕಟ್ಟನ್ನು ಎದುರಿಸಬೇಕಾಗಿದೆ. ಅದರಲ್ಲೂ, ಮಾಜಿ ನ್ಯಾಯಾಧೀಶರಾಗಿದ್ದ ಮೊರೊ ಅವರೊಂದಿಗಿನ ಮೈತ್ರಿ ವಿಶೇಷ ವಾಗಿ ತುಂಬಾ ಪ್ರಬಲವಾಗಿತ್ತು.

ಕಳೆದ ವರ್ಷ ಮಾಜಿ ಅಧ್ಯಕ್ಷ ಲೂಲಾ ಡಿ ಸಿಲ್ವಾ ವಿರುದ್ಧ ಭ್ರಷ್ಟಾಚಾರ ಆರೋಪದ ತನಿಖೆಯಲ್ಲಿ, ನೇತೃತ್ವ ವಹಿಸಿದ್ದ ಫಿರ್ಯಾದಿ ಗಳೊಂದಿಗೆ ಶ್ರೀ ಮೊರೊ ಒಳ ಒಪ್ಪಂದ ಮಾಡಿಕೊಂಡಿದ್ದರು ಎಂದು ಹಲವಾರು ಮಾಧ್ಯಮಗಳು ವರದಿಗಳನ್ನು ಮಾಡಿದ್ದವು.

2018 ರಲ್ಲಿ ಲೂಲಾ ರವರು ವರ್ಕರ್ಸ್ ಪಾರ್ಟಿಯಿಂದ ಎಡ ಪಕ್ಷದ ಬೆಂಬಲದೊಂದಿಗೆ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದರೆ ಗೆಲ್ಲುವ ಸಾಧ್ಯತೆಗಳು ಹೆಚ್ಚಾಗಿತ್ತು. ಇದರಿಂದಾಗಿ ಮೊರೊ ರವರು ತಮ್ಮ ನ್ಯಾಯಾಧೀಶರ ಅವಧಿಯಲ್ಲಿ, ಒಳಸಂಚು ನಡೆಸಿ, ಲೂಲಾ ರವರನ್ನು ಭ್ರಷ್ಟಾಚಾರದ ಸುಳ್ಳು ಆರೋಪದಡಿಯಲ್ಲಿ ಶಿಕ್ಷೆಗೆ ಗುರಿ ಪಡಿಸಿದ್ದರು. ಇದರಿಂದ, ಬೋಲ್ಸನಾರೊ ರವರಿಗೆ ಗೆಲುವು ಸುಲಭವಾಯಿತು. ಇದೀಗ ಮೊರೊ ರವರ ರಾಜೀನಾಮೆ ಯಿಂದ ಪ್ರಬಲ ಆಪ್ತಮಿತ್ರ ನನ್ನು ಕಳೆದು ಕೊಂಡಂತಾಗಿದೆ. 2022 ರಲ್ಲಿ ನಡೆಯುವ ಅಧ್ಯಕ್ಷ ಚುನಾವಣೆಗೆ, ಮೊರೊ ಯುಎಸ್ ಬೆಂಬಲಿತ ಸ್ಪರ್ಧಿ ಎಂಬ ವರದಿಗಳು ಮಾಧ್ಯಮದಲ್ಲಿ ಹರಿದಾಡುತ್ತಿವೆ ಎನ್ನಲಾಗಿದೆ. ಇಂತಹ ಕ್ಲಿಷ್ಟ ಬಿಕ್ಕಟ್ಟಿನ ಸಂದರ್ಭದಲ್ಲಿ ಬೋಲ್ಸನಾರೊ ರವರು ಹೆಚ್ಚು ವಿಚಲಿತರಾಗಿದ್ದಾರೆ.

ಕೋವಿಡ್–19, ಸಾವು– ನೋವುಗಳಿಂದ ಬ್ರೆಜಿಲ್ ತತ್ತರಿಸಿ ಹೋಗುತ್ತಿದೆ. ಸರ್ಕಾರ ಅದರ ನಿಯಂತ್ರಣದ ಬಗ್ಗೆ ಯಾವುದೇ ಸುಳಿವು ನೀಡುತ್ತಿಲ್ಲ. ಈ ನಡುವೆ ಬ್ರೆಜಿಲ್ ಆರ್ಥಿಕತೆಯು ಈ ವರ್ಷ ಶೇ.5.ರಷ್ಟು ಕುಗ್ಗುವ ನಿರೀಕ್ಷೆ ಇದೆ. ಎಡ ಪಂಥೀಯ ಸೆನೆಟರ್ ಗಳು ಸರ್ಕಾರದ ಧೋರಣೆಗಳ ಬಗ್ಗೆ ಅಭಿಯಾನ ಪ್ರಾರಂಭಿಸಿದ್ದಾರೆ. ಇತ್ತೀಚಿನ ಸಮೀಕ್ಷೆಯ ಪ್ರಕಾರ, ಶೇ.46 ರಷ್ಟು ಜನರು ಬೋಲ್ಸನಾರೊ ದೋಷಾರೋಪಣೆಗಳಿಂದಾಗಿ ರಾಜೀನಾಮೆ ಕೊಡಬೇಕೆಂದು ಬಯಸಿದ್ದಾರೆ. ಶೇ.45 ರಷ್ಟು ಜನರು ಇವರನ್ನು ಬೆಂಬಲಿಸಿದ್ದಾರೆ.

ಬ್ರೆಜಿಲ್ ದೇಶವು ಅಧ್ಯಕ್ಷ ಬೋಲ್ಸನಾರೊ ಆಡಳಿತದಲ್ಲಿ, ಹಿಂದೆಂದಿಗಿಂತಲೂ ಗಂಭೀರವಾದ ಆರ್ಥಿಕ ಮತ್ತು ಆರೋಗ್ಯ ಬಿಕ್ಕಟ್ಟು ಗಳನ್ನು ಎದುರಿಸುತ್ತಿದೆ. ತಮ್ಮ ಆಪ್ತ ಅನುಯಾಯಿಗಳನ್ನು ಮತ್ತು ಮಿತ್ರ ರಾಷ್ಟ್ರಗಳನ್ನು ಕಳೆದು ಕೊಳ್ಳುತ್ತಿರುವ, ಒಬ್ಬ ಅಧ್ಯಕ್ಷನ ಮೇಲೆ ಇಷ್ಟೊಂದು ಆರೋಪಗಳು ಹೆಗಲು ಏರಿವೆ. ಮುಂದೇನು ಕಾದು ನೋಡಬೇಕು?

JANASHAKTHI KANNADA VARA PATRIKE May 4-10, 2020 Price: Rs. 10/- Date of Publication: 1 May 2020 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283

ರಾಜ್ಯದಾದ್ಯಂತ ಮೇ ದಿನಾಚರಣೆ













ಜನಶಕ್ತಿ ಮೀಡಿಯಾ
Janashakthi Media

ಮೇ 1 : ಕಾರ್ಮಿಕರ ದಿನಾಚರಣೆ ವಿಶೇಷ ಕಾರ್ಯಕ್ರಮ

MAY DAY

ವಿಷಯ		ರಚನೆ/ಪ್ರಸ್ತುತಿ	ಸಮಯ
ಏಪ್ರಿಲ್ 30			
1. ಮೇ ದಿನದ ಭಾಷಣ		ಎಸ್. ವರಲಕ್ಷ್ಮಿ	9.00 ರಾತ್ರಿ
ಮೇ 1			
2. ಕಾರ್ಮಿಕರ ಹಾಡು1		'ಬೆವರನು ಸುರಿಸಿ...'	9.00 ಬೆಳಗ್ಗೆ
3. ಮೇ ದಿನದ ಭಾಷಣ	–	ಮೀನಾಕ್ಷಿ ಸುಂದರಂ	10.00
4. 1886ರ ಮೊದಲ ಮೇ ದಿನದಕಥನ	–	ಸುನಿಲ್ ಮೈತ್ರ/ಗೀತಾ	11.00
5. ಉದ್ಯೋಗ ಭದ್ರತೆಮತ್ತುಜೀವನಾವಶ್ಯಕ ವೇತನ:	–	ವಿ.ಜೆ.ಕೆ ನಾಯರ್	12.00
6. ಕಾರ್ಮಿಕರ ಹಾಡು2:		'ಕೆಂಪು ಬಾವುಟ ಕೆಂಪು ಬಾವುಟ..'	01.00 ಮಧ್ಯಾಹ್ನ
7. ಭಾರತದಲ್ಲಿ ಮೇ ದಿನಾಚರಣೆಯ ಇತಿಹಾಸದ ಕಥನ	–	ಸಿ.ಆರ್.ಶಾನಭಾಗ	02.00
8. ಕಾರ್ಮಿಕರ ಹಾಡು3:		'ಹಮ್ ಮೆಹನತ್‌ಕಶ್.'	03.00
9.ದುಡಿಯುವ ಮಹಿಳೆಯರ ಸ್ಥಿತಿ	–	ಯಮುನಾ ಗಾಂವ್ಕರ್	04.00
10. ಕರ್ನಾಟಕದ ರಕ್ತದೋಕುಳಿಯ ಮೇ ದಿನದ ಕಥನ	–	ಜೆ.ಎನ್.ನಾಗರಾಜ್/ಯಮುನಾ	05.00 ಸಂಜೆ
11. ಸ್ಕೀಂ ಕಾರ್ಮಿಕರ ಸ್ಥಿತಿ	–	ಸುನಂದಾ/ಮಾಲಿನಿ	06.00
12. ಮನೆ ಮನೆಯಲ್ಲೂ ಮೇ ದಿನ	–	ವರದಿ	07.00
13.ಗುತ್ತಿಗೆಕಾರ್ಮಿಕರ ಸ್ಥಿತಿ	–	ಪ್ರಕಾಶ್‌ಸಿಂಹ	08.00 ರಾತ್ರಿ
14.ಸಾರ್ವತ್ರಿಕಆರೋಗ್ಯ ವ್ಯವಸ್ಥೆ, ಸಾಮಾಜಿಕ ಭದ್ರತೆ	–	ಕೆ.ಮಹಾಂತೇಶ್	09.00
15. ಕಾರ್ಮಿಕರ ಹಾಡು4		ಯುದ್ಧಕೆಂಡಾ	10.00
ಮೇ 2			
16. ಕಾರ್ಮಿಕರ ಹಾಡು5:		'ಈ ಬಾವುಟಯಾರದು?..'	09.00 ಬೆಳಗ್ಗೆ
17. ಕೊರೋನಾ ಮತ್ತು ಪ್ರಸ್ತುತ ಪರಿಸ್ಥಿತಿ	–	ಕೆ.ಎನ್.ಉಮೇಶ್	10.00
18. ಕಾರ್ಮಿಕ ವರ್ಗ ಮತ್ತು ಸೈದ್ಧಾಂತಿಕ ಪ್ರಶ್ನೆಗಳು	–	ಪ್ರಕಾಶ್ ಕೆ.	11.00
19. ಅಸಂಘಟಿತಕಾರ್ಮಿಕರ ಸ್ಥಿತಿ	–	ವಸಂತಆಚಾರಿ	12.00

Facebook Page YouTube
ನೋಡಿ, ಲೈಕ್ ಮಾಡಿ, ಶೇರ್ ಮಾಡಿ







JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**